2.—The Mysore Agriculturists Loans Bill, 1963 as passed by the Legislative Council.

3.—The Bombay Merged Territories and Areas (Jagirs Abolition) (Mysore Amendment) Bill 1963, as passed by the Legislative Council.

4.—The Mysore Bhoodan Yagna Bill, 1963 as passed by the Legislative Council.

SRI. B. D. JATTI (Minister for Finance).—Sir I beg to lay on the Table Notification No. FD. 8 CSL 61, dated 5th February 1963 (Amendments to the Mysore Sales Tax Rules, 1957) as required under Section 39 of the Mysore Sales Tax, Act 1957.

Report of the Joint Select Committee on the Mysore Forests Bill, 1962—Presented.

SRI B. RACHIAH (Minister for Forest and Fisheries).—Sir, I beg to present the report of the Joint Select Committee on the Mysore Forest Bill, 1962.

UNIVERSITY OF AGRICULTURAL SCIENCES BILL, 1963.

Motion to consider—Contd.

ಶ್ರೀ ಜಿ. ನಾರಾಯಣಗೌಡ.—ಸ್ವಾಮಿ, ಈ ಕೃಷಿ ವಿಜ್ಞಾನ ವಿಶ್ವವಿದ್ಯಾನಿಲಯದ ಸ್ಥಾಪನೆ ಬಗ್ಗೆ ತಂದಿರುವ ಈ ಮಸೂದೆಯ ಅವಶ್ಯಕತೆ ಕುರಿತು ನಾನು ಹಿಂದೆ ಪ್ರಸ್ತಾಪಿಸಿದ್ದೇನೆ. ಈಗ ಈ ಮಸೂದೆಯಲ್ಲಿ ಅಡಕವಾಗಿರುವ ಮುಖ್ಯಾಂಶಗಳ ವಿಷಯಗಳ ಬಗ್ಗೆ ಕೆಲವು ಮಾತುಗಳನ್ನು ಆಡುತ್ತೇನೆ.

ಮುಖ್ಯವಾಗಿ ಇಲ್ಲಿ ವ್ಯವಸಾಯ, ಉದ್ಯಾನವನ, ತೋಟಗಾರಿಕೆ, ಪಶು ವಿಜ್ಞಾನ, ಮೀನುಗಾರಿಕೆ, ಮುಂತಾದ ವಿಷಯಗಳಿಗೆ ಸಂಬಂಧಪಟ್ಟ ವಿಜ್ಞಾನಗಳ ಮೇಲೆ ಶಿಕ್ಷಣ ನೀಡಲಾಗುವುದು. ಈಗಿರುವ ಕರ್ಣಾಟಕ ವಿಶ್ವವಿದ್ಯಾನಿಲಯಕ್ಕೆ ಅಫಿಲಿಯೇಟ್ ಆಗಿರುವ ಧಾರವಾಡ ಕಾಲೇಜು ಮತ್ತು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಅಫಿಲಿಯೇಟ್ ಆಗಿರುವ ಹೆಬ್ಬಾಳದ ವೆಟೆನೆರಿ ಕಾಲೇಜು ಮತ್ತು ಅಗ್ರಿಕಲ್ಚರಲ್ ಕಾಲೇಜು ಈ ವಿಶ್ವವಿದ್ಯಾನಿಲಯದ ಅಸ್ತಿತ್ವಕ್ಕೆ ಬಂದಾಗ್ಗೆ ಈ ವಿಶ್ವವಿದ್ಯಾನಿಲಯಕ್ಕೆ ಅಫಿಲಿಯೇಟ್ ಆಗುವುದು.

ಹಾಗೂ ಈ ವಿಶ್ವವಿದ್ಯಾನಿಲಯದ ಅಧಿಕಾರಿಗಳು ಯಾರು ಅನ್ನುವುದೂ ಇವು ಈ ಮಸೂದೆಯೊಳಗೆ ಅಡಕವಾಗಿವೆ:— Chancellor, Pro-Chancellor, Vice-Chancellor, Dean, Comptroller, Registrar, Librarian, Director of Instruction, Veterinary College, Hebbal, Director of Instruction, Agricultural College, Hebbal, Director of Instruction, Agricultural College, Dharwar, Director of Research, Director of Extension, Heads of Divisions ಮತ್ತು Statutes ಪ್ರಕಾರವಾಗಿ ನೇಮಿಸಲಾಗುವ ಅಧಿಕಾರಿಗಳು, ವಿಶ್ವವಿದ್ಯಾನಿಲಯದ ಅಧಿಕಾರಿಗಳಾಗುವರು.

ಈ ವಿಶ್ವವಿದ್ಯಾನಿಲಯದ ಆಡಳಿತಕ್ಕೆ Board of Regents Academic Counicl Board of studies, ಹಾಗೂ ಇತರ ಸಂಸ್ಥೆಗಳು ಮತ್ತು ಕಾನೂನು ರೀತ್ಯವಾಗಲಿ ಅಥವ ಸ್ಟ್ಯಾಟ್ಯೂಟ್ಸ್ ರೀತ್ಯವಾಗಲಿ ನೇಮಿಸಲಾಗುವರು. ವಿಶ್ವವಿದ್ಯಾನಿಲಯ ಆಡಳಿತದ ಅಧಿಕಾರ ವಹಿಸುತ್ತಾರೆ.

ಹಾಗೂ ಈ Board of Regents ರಚನೆ ವಿಷಯದೊಳಗೆ ಒಂದೆರಡು ಮಾತನ್ನಾಡುವುದು ಸೂಕ್ತ ಅಂತ ಕಾಣುತ್ತದೆ. ಈ ರಚನೆಯೊಳಗೆ ಸಾಧಾರಣವಾಗಿ ex-officio ಮೆಂಬರುಗಳು ಹೀಗೆ ಇರುತ್ತಾರೆ.

(ಶ್ರೀ ಜಿ. ನಾರಾಯಣಗೌಡ)

Vice-Chancellor, Secretary to the Government of Mysore, Finance Department, Secretary to the Government of Mysore, Agricultural Department, Secretary to the Government of Mysore, Education Department, Director of Agriculture in Mysore, Director of Animal Husbandry in Mysore, Director of Horticulture in Mysore, Director of Fisheries in Mysore.

ಇವರು ex-officio ಮೆಂಬರ್ಸ್ ಆಗಿರುತ್ತಾರೆ. ಹಾಗೂ ಒಂಭತ್ತು ಮತ್ತು ಖಾಸಗಿಯವರು, ಈ 8 ಜನರ ಜೊತೆಗೆ ಇರುತ್ತಾರೆ. ಈ ಖಾಸಗಿಯವರಲ್ಲಿ, ಇಬ್ಬರು ಸರ್ಕಾರಿ ಹಾಗೂ ವಿಶ್ವವಿದ್ಯಾನಿಲಯದ ನೌಕರರಲ್ಲದ ಪ್ರಗತಿಪರ ರೈತರನ್ನು ಚಾನ್ಸಲರು ನಾಮಕರಣ ಮಾಡುತ್ತಾರೆ. ಮತ್ತು ಸರ್ಕಾರಿ ಹಾಗೂ ವಿಶ್ವವಿದ್ಯಾನಿಲಯದ ನೌಕರರಲ್ಲದ, ವ್ಯವಸಾಯ ಶಿಕ್ಷಣದಲ್ಲಿ ಆಸಕ್ತಿಯುಳ್ಳ ಐದು ಮಂದಿ ಜನರನ್ನು ರಾಜ್ಯಸರ್ಕಾರ ನಾಮಕರಣ ಮಾಡುತ್ತದೆ.

ಸರ್ಕಾರಿ ಹಾಗೂ ವಿಶ್ವವಿದ್ಯಾನಿಲಯದ ನೌಕರರಲ್ಲದೆ 5 ವರ್ಷಕ್ಕೆ ಕಡಿಮೆ ಇಲ್ಲದ ರಿಜಿಸ್ಟರ್ಡ್ ಗ್ರ್ಯಾಜ್ಯುಯೆಟ್ಸ್ ಪೈಕಿ ಇಬ್ಬರನ್ನು ರಾಜ್ಯ ಸರ್ಕಾರ ನಾಮಕರಣ ಮಾಡುತ್ತದೆ. ಅಕೆಡಮಿಕ್ ಕೌನ್ಸಿಲ್‌ನಲ್ಲಿ ವೈಸ್ ಛಾನ್ಸಲರು, ಡೀನ್, ಡೈರೆಕ್ಟರ್ ಆಫ್ ಇನ್‌ಸ್ಟ್ರಕ್ಷನ್, ವೆಟರಿನರಿ ಕಾಲೇಜು, ಡೈರೆಕ್ಟರ್ ಆಫ್ ಇನ್‌ಸ್ಟ್ರಕ್ಷನ್, ಅಗ್ರಿಕಲ್‌ಚರಲ್ ಕಾಲೇಜು, ಹೆಬ್ಬಾಳ್, ಡೈರೆಕ್ಟರ್ ಆಫ್ ಇನ್‌ಸ್ಟ್ರಕ್ಷನ್, ಧಾರವಾಡ, ಡೈರೆಕ್ಟರ್ ಆಫ್ ರಿಸರ್ಚ್, ಡೈರೆಕ್ಟರ್ ಆಫ್ ಎಕ್ಸ್‌ಟೆನ್‌ಷನ್, ಹೆಡ್ಸ್ ಆಫ್ ಡಿವಿಜನ್ಸ್ ಇರುತ್ತಾರೆ. ಅದೂ ಅಲ್ಲದೆ, ಪ್ರತಿಯೊಂದು ಬೋಧಕ ಇಲಾಖೆಯಲ್ಲೂ ಬೋರ್ಡ್ ಆಫ್ ಸ್ಟಡೀಸ್ ಅಂತ ಅವರು ಇರುತ್ತಾರೆ.

ಇದು ಅಸ್ತಿತ್ವಕ್ಕೆ ಬರುವುದಕ್ಕೆ ವೆಚ್ಚಗಳ ವಿಷಯದಲ್ಲಿ ಒಂದೆರಡು ಮಾತನಾಡುವುದು ಒಳ್ಳೆಯದಾಗುತ್ತದೆ. ವ್ಯವಸಾಯದ ವಿಶ್ವವಿದ್ಯಾನಿಲಯ ಅಸ್ತಿತ್ವಕ್ಕೆ ಬರಬೇಕಾದರೆ ಸಾಧಾರಣವಾಗಿ ಈಗ ನಾವು ಅಂದಾಜು ಮಾಡಿರುವ ಹಾಗೆ ಇದು ನಾನ್ ರೆಕರಿಂಗ್ ಎಕ್ಸ್‌ಪೆಂಡಿಚರ್, ಕಟ್ಟಡಗಳಿಗೆ 2 ಕೋಟಿ 6 ಲಕ್ಷ ರೂಪಾಯಿ, ಎಕ್ವಿಪ್‌ಮೆಂಟಿಗೆ 25 ಲಕ್ಷ ರೂಪಾಯಿ ಮತ್ತು ಭೂಮಿಗೆ 20 ಲಕ್ಷ ರೂಪಾಯಿ ಹೀಗೆ ಒಟ್ಟಿಗೆ 2 ಕೋಟಿ 51 ಲಕ್ಷ ರೂಪಾಯಿ ಆಗುತ್ತದೆ. ಹಾಗೂ 5 ವರ್ಷಕ್ಕೆ ರೆಕರಿಂಗ್ ಎಕ್ಸ್‌ಪೆಂಡಿಚರ್ 1 ಕೋಟಿ 42 ಲಕ್ಷ ರೂಪಾಯಿಗಳಾಗುತ್ತದೆ. ಇದರಲ್ಲಿ ಮೊದಲನೇ ವರ್ಷ ಭೂಮಿಗೆ 20 ಲಕ್ಷ ರೂಪಾಯಿ. ಕಟ್ಟಡ ಮತ್ತು ಉಪಕರಣಗಳಿಗೆ 25 ಲಕ್ಷ ರೂಪಾಯಿ, ಸಿಬ್ಬಂದಿಗೆ 10 ಲಕ್ಷ ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಒಟ್ಟನಲ್ಲಿ 55 ಲಕ್ಷ ರೂಪಾಯಿಗಳಾತ್ತವೆ. ಇದರೊಳಗೆ ನಾನ್-ರೆಕರಿಂಗ್ ಎಕ್ಸ್‌ಪೆಂಡಿಚರ್‌ಗೆ ಕೇಂದ್ರ ಸರ್ಕಾರದವರು ಶೇಕಡ 75 ಭಾಗ ರೆಕರಿಂಗ್ ಎಕ್ಸ್‌ಪೆಂಡೀಚರ್‌ಗೆ ಶೇಕಡ 25 ಭಾಗ ಕೊಡುತ್ತಾರೆ. ಹಾಗೂ ಕೇಂದ್ರ ಸರ್ಕಾರದವರು ಅಡ್‌ಹಾಕ್ ಗ್ರಾಂಟ್ ಅಂತ 25 ಲಕ್ಷ ರೂಪಾಯಿ ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಅದೂ ಅಲ್ಲದೆ ಈಗ ಯುನೈಟೆಡ್ ಸ್ಟೇಟ್ಸ್ ಏಜೆನ್ಸಿ ಫಾರ್ ಇಂಟರ್‌ನಾಷನಲ್ ಡೆವಲಪ್‌ಮೆಂಟ್ ಅಂತ ಒಂದುಸಂಸ್ಥೆ ಏನಿದೆ ಅವರ ನೆರವೂ ಸಹ ಇದಕ್ಕೆ ಇದೆ. ಈ ಮಸೂದೆ ಬಹಳ ಸರಳವಾದದ್ದು. ಆದರೂ ಸಹಿತ ಬಹಳ ಪ್ರಯೋಜನಕಾರಿಯಾದದ್ದು ಆದ್ದರಿಂದ ಈ ಮಸೂದೆ ಮಾನ್ಯ ಸಭೆಯ ಪರಿಶೀಲನೆಗೆ ಇಟ್ಟು ತಾವೆಲ್ಲರೂ ತಮ್ಮ ಒಮ್ಮತದ ಒಪ್ಪಿಗೆ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸಭಾಪತಿಯವರೇ, ಈಗ ತಾನೆ ವ್ಯವಸಾಯದ ಸಚಿವರು ಈ ಸಭೆಯ ಮುಂದೆ ವ್ಯವಸಾಯದ ಶಾಸ್ತ್ರಕ್ಕೆ ಸಂಬಂಧಪಟ್ಟ ವಿಶ್ವವಿದ್ಯಾನಿಲಯವನ್ನು ಸ್ಥಾಪನೆಮಾಡತಕ್ಕ ಮಸೂದೆಯನ್ನು ನಮ್ಮ ಅವಗಾಹನೆಗೆ ಇಟ್ಟಿದ್ದಾರೆ. ವ್ಯವಸಾಯ ಶಾಸ್ತ್ರಕ್ಕೆ ಸಂಬಂಧಪಟ್ಟ ವಿಶ್ವವಿದ್ಯಾನಿಲಯವನ್ನು ಪ್ರತ್ಯೇಕವಾಗಿ ಸ್ಥಾಪನೆ ಮಾಡತಕ್ಕ ಕಾಲದಲ್ಲಿ ನಮ್ಮ ದೇಶದ ವ್ಯವಸಾಯದ ಪ್ರಗತಿ ಮತ್ತು ಅದು ಮುಂದುವರಿಸುವ ವ್ಯವಸ್ಥೆಗನುಗುಣವಾಗಿ ಈ ಮಸೂದೆಯಲ್ಲಿ ಈ ದೇಶದಲ್ಲಿ ಉಪಯೋಗ ಮಾಡುವ ಮುಖಾಂತರ ವ್ಯವಸಾಯದ ಅಭಿವೃದ್ಧಿ ಮಾಡಬೇಕೆಂಬ ಒಂದು ಒಳ್ಳೆಯ ಉದ್ದೇಶದಿಂದ ಈ ಮಸೂದೆಯನ್ನು ಸಭೆಯ ಮುಂದೆ ಇಟ್ಟಿದ್ದಾರೆ. ನಿಜ. ಭಾರತ ದೇಶ ವ್ಯವಸಾಯದ ದೇಶ. ಮೈಸೂರು ದೇಶವೂ ಕೂಡ ವ್ಯವಸಾಯಗಾರರಿಂದ ಕೂಡಿರತಕ್ಕ ದೇಶ—ನೂರಕ್ಕೆ 70-80 ಜನ ವ್ಯವಸಾಯವನ್ನೇ ವೃತ್ತಿಯನ್ನಾಗಿ ಅವಲಂಬಿಸಿರುವಾಗ ವ್ಯವಸಾಯಕ್ಕೆ ಪ್ರತ್ಯೇಕ ವಿಶ್ವವಿದ್ಯಾನಿಲಯ ಬೇಕೆನ್ನುವುದು ಸಹಜವಾಗಿದೆ. ಒಂದು ಉದಾತ್ತವಾದ ಧ್ಯೇಯವನ್ನಿಟ್ಟುಕೊಂಡು ಈ ಮಸೂದೆಯನ್ನು ಸಭೆಯ ಮುಂದೆ ತಂದಿದ್ದಾರೆ. ಈ ಮಸೂದೆಯ ಆದರ್ಶ ಮತ್ತು ಉದ್ದೇಶ ಬಹಳ ಒಳ್ಳೆಯದಾಗಿದೆ. ಈ ಮಸೂದೆಯನ್ನು ತರುವುದರ ಮುಖಾಂತರ ವ್ಯವಸಾಯದ ಶಾಸ್ತ್ರೀಯವಾದ ಅಭಿವೃದ್ಧಿಯನ್ನು ಸಾಧನ ಮಾಡಬೇಕೆಂದು ಭಾವನೆ ಮಾಡಿಕೊಂಡಿ

ದ್ದಾರೆ. ಅದು ಈ ಮಸೂದೆಯಿಂದ ಎಷ್ಟುಮಟ್ಟಿಗೆ ಆಗುತ್ತದೆ ಎಂಬುದನ್ನು ವಿಮರ್ಶೆ ಮಾಡಬೇಕಾಗಿದೆ. ನಿಜ, ವ್ಯವಸಾಯ ನಮ್ಮ ದೇಶದಲ್ಲಿ ಬಹಳ ಪುರಾತನ ಕಾಲದಿಂದಲೂ ಬಂದಿರತಕ್ಕ ಉದ್ಯಮ. ಅಷ್ಟೇ ಅಲ್ಲ, ವ್ಯವಸಾಯ ನಮ್ಮ ಸಂಸ್ಕೃತಿ ಎಂದರೂ ಕೂಡ ಬಹಳ ಸತ್ಯಕ್ಕೆ ದೂರವಾಗಲಾರದ ಮಾತು. ವ್ಯವಸಾಯ ಶಾಸ್ತ್ರಕ್ಕೆ ಸಂಬಂಧಪಟ್ಟ ಈ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವುದಕ್ಕೆ ಈ ಮಸೂದೆ ಬಂದಿರುವುದು ನಿಜವಾಗಿಯೂ ಕೂಡ ಬಹಳ ಅಭಿನಂದನಾರ್ಹವಾದದ್ದು. ಭಾರತ ಸರ್ಕಾರದವರು ದೊಡ್ಡ ದೊಡ್ಡ ವಿಶ್ವವಿದ್ಯಾನಿಲಯ ಸಮಿತಿಗಳನ್ನು ರಚನೆ ಮಾಡಿದಾಗಲೂ ಕೂಡ ಎಲ್ಲರೂ ಏಕಕಂಠದಿಂದ ವ್ಯವಸಾಯದ ಕಾಲೇಜಿನ ಸ್ಥಾಪನೆಗೆ ಪ್ರಾಮುಖ್ಯತೆ ಕೊಡಬೇಕೆಂದು ಅಭಿಪ್ರಾಯಪಟ್ಟರು. ರಾಧಾಕೃಷ್ಣನ್ ಅವರ ಅಧ್ಯಕ್ಷತೆಯಲ್ಲಿ ಒಂದು ಕಮಿಷನ್ ರಚನೆ ಆದಾಗ, ಈ ದೇಶದಲ್ಲಿರತಕ್ಕ ಎಲ್ಲ ಶಾಸ್ತ್ರಗಳಿಗಿಂತ ವ್ಯವಸಾಯದ ವಿದ್ಯಾಭ್ಯಾಸಕ್ಕೆ ಹೆಚ್ಚುಗಮನ ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆ. ವ್ಯವಸಾಯಕ್ಕೆ ಸಂಬಂಧಪಟ್ಟ ಶಾಸ್ತ್ರೀಯವಾದ ವಿದ್ಯಾಭ್ಯಾಸವನ್ನು ಯಾವ ರೀತಿ ಮುಂದುವರಿಸಬೇಕೆನ್ನುವ ವಿಚಾರದಲ್ಲಿ ಅನೇಕ ಗಹನವಾದ ಸಲಹೆಗಳನ್ನು ಕೊಟ್ಟಿದ್ದಾರೆ. ನಮ್ಮ ದೇಶಕ್ಕೆ ಅಮೆರಿಕಾ ದೇಶದವರು ಮತ್ತು ಹೊರದೇಶದವರು ಬಂದು ಇಂಡಿಯಾದೇಶದ ವ್ಯವಸಾಯಶಾಸ್ತ್ರ ಯಾವ ರೀತಿ ಅಭಿವೃದ್ಧಿ ಮಾಡಬೇಕೆನ್ನುವುದಕ್ಕೂ ನವೀನ ರೀತಿಯಲ್ಲಿ ಆಗಬೇಕೆನ್ನುವುದಕ್ಕೂ ಅನೇಕ ಸಲಹೆಗಳ ಮುಖಾಂತರ ಹೇಳಿದ್ದಾರೆ. 1889ರಲ್ಲಿ ಡಾಕ್ಟರ್ ಜೆ. ವಾಕರ್ ಬ್ರಿಟಿಷ್ ರಾಯಲ್ ಅಗ್ರಿಕಲ್ಚರಲ್ ಸೊಸೈಟಿ, ಅವರು ಈ ದೇಶದ ಅಗ್ರಿಕಲ್ಚರಲ್ ಸರ್ವೆ ಮಾಡುವುದಕ್ಕೆ ಬಂದಾಗ ಭಾರತದೇಶದಲ್ಲಿರತಕ್ಕ ವ್ಯವಸಾಯದ ವಿಚಾರವಾಗಿ ಒಂದೇ ಒಂದು ಮಾತಿನಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ: [ಅವರು (SRI DR. J. A. VOELEKER) ಹೇಳಿದರು:

> "Certainly, it is that I at least, have never seen a more perfect picture of careful cultivation combined with hard labour, perseverance and fertility of resourse than I have seen at my halting places in my tour"

ಎಂದರೆ ಈ ದೇಶದಲ್ಲಿರತಕ್ಕ ರೈತ ಎಷ್ಟುಮಟ್ಟಿಗೆ ತನ್ನ ಕರ್ತವ್ಯದಲ್ಲಿ ನಿಷ್ಠನಾಗಿದ್ದಾನೆ.........

MR. SPEAKER.—That gentleman did not know many things which are known today.

ಶ್ರೀ ಎಸ್. ಶಿವಪ್ಪ.—ರಾಯಲ್ ಕಮೀಷನ್ ಅವರು 1906ರಲ್ಲಿ ಸಲಹೆ ಮಾಡಿದ್ದಾರೆ. ಇಂಡಿಯನ್ ಅಗ್ರಿಕಲ್ಚರಲ್ ಸರ್ವೆಕೂಡ 1906 ರಲ್ಲಿ ಆಯಿತು. 1928ರಲ್ಲಿ ಆಯಿತು. 1929ರಲ್ಲಿ ಇಂಪೀರಿಯಲ್ ಕೌನ್ಸಿಲ್ ಆನ್ ಅಗ್ರಿಕಲ್ಚರಲ್ ರಿಸರ್ಚ್ ಸ್ಥಾಪನೆ ಆಯಿತು. ಅವರು ಈ ದೇಶದ ವ್ಯವಸಾಯದ ಶಾಸ್ತ್ರವನ್ನು ಅಧ್ಯಯನ ಮಾಡಿ ಬಹಳ ಉದಾತ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಆ ಪ್ರಕಾರ ಅಂದಿನಿಂದಲೂ ಕೂಡ ಅವರ ಸಲಹೆಗಳಂತೆ ನಮ್ಮ ದೇಶದಲ್ಲಿ ವ್ಯವಸಾಯ ಮಾಡಿಕೊಂಡು ಬಂದಿದ್ದಾರೆ. ಮೈಸೂರು ದೇಶದ ಚರಿತ್ರೆಯನ್ನು ತೆಗೆದುಕೊಂಡರೆ 1944ರಲ್ಲಿ ಹೆಬ್ಬಾಳದಲ್ಲಿ ವ್ಯವಸಾಯದ ಕಾಲೇಜನ್ನು ಸ್ಥಾಪನೆ ಮಾಡಿದರು. ಹೀಗೆ ವ್ಯವಸಾಯದ ಶಾಸ್ತ್ರವನ್ನು ನವೀನ ರೀತಿಯಲ್ಲಿ ಅಳವಡಿಸಬೇಕೆಂಬ ಉದ್ದೇಶದಿಂದ ಈ ವ್ಯವಸಾಯದ ವಿದ್ಯಾಭ್ಯಾಸ ಕ್ರಮೇಣ ಕ್ರಮಕ್ರಮವಾಗಿ ಮುಂದುವರಿಯುತ್ತಾ ಹೋಗಿದೆ.

ಆದಾಗ್ಯೂ ಈ ದಿವಸ ಭಾರತದಲ್ಲಿರತಕ್ಕ ಈ ವ್ಯವಸಾಯದ ವಿಶ್ವವಿದ್ಯಾನಿಲಯಗಳಿಗೆ ನಾವು ಒಂದು ಚೈತನ್ಯವನ್ನು ಹೊರದೇಶಗಳಿಂದ ತೆಗೆದುಕೊಳ್ಳುತ್ತಿದ್ದೇವೆ. ಹೀಗೆ ನಾವು ಹೊರದೇಶಗಳಿಂದ ಚೈತನ್ಯ ಪಡೆಯುತ್ತ ಹೋದರೆ ಇದು ಕೊನೆಯಾಗುವುದು ಯಾವಾಗ? ನಾವು ನಮ್ಮದೇ ಆದ ಒಂದು ರೀತಿಯಲ್ಲಿ, ನಮ್ಮದೇ ಆದ ಶಾಸ್ತ್ರೀಯ ರೀತಿಯಲ್ಲಿ, ನಮ್ಮ ದೇಶದ ಜನಗಳಿಗೆ ಸಮಂಜಸವಾಗತಕ್ಕ ರೀತಿಯಲ್ಲಿ ನಾವು ಇದನ್ನು ರೂಪಿಸಿಕೊಳ್ಳಬೇಕಾಗಿದೆ. ನಾವೀದಿವಸ ನಮ್ಮ ರಾಜ್ಯದ ವ್ಯವಸಾಯ ಪದ್ಧತಿಗೆ ಅಳವಡಿಸುವಂಥ ಒಂದು ನವೀನ ವ್ಯವಸ್ಥೆಯನ್ನು ಇಲ್ಲಿಯವರೆಗೂ ರೂಪಿಸಿಕೊಂಡಿರುವುದಿಲ್ಲ. ನಾವು ಹೀಗೆ ಅನಿರ್ದಿಷ್ಟ ಕಾಲದವರೆಗೂ ಆ ಅಮೆರಿಕಾ, ಸ್ವಿಟ್ಜರ್‌ಲ್ಯಾಂಡ್, ಡಿನ್ಮಾರ್ಕ್ ಮತ್ತು ರಷ್ಯಾ ಇತ್ಯಾದಿ ಪಾಶ್ಚಿಮಾತ್ಯ ರಾಷ್ಟ್ರಗಳ ವ್ಯವಸಾಯ ಪದ್ಧತಿಯನ್ನು ಅನುಕರಣೆ ಮಾಡುತ್ತಾ ಹೋದರೆ ಇದರಿಂದ ನಮಗೆ ಖಂಡಿತ ಸುಖವಾಗುವುದಿಲ್ಲ. ಈ ದಿವಸ ನಮ್ಮ ವಿದ್ಯಾಮಂತ್ರಿಗಳು ಕೂಡ ನಮ್ಮ ವಿಶ್ವವಿದ್ಯಾನಿಲಯವನ್ನು ಆ ಅಮೇರಿಕಾ ದೇಶದ ಮಾದರಿಯಲ್ಲೇ ಮುಂದುವರಿಸಬೇಕೆಂತ ಹೇಳಿ ಆ ದೇಶದ ಚರಿತ್ರೆಯನ್ನೆಲ್ಲಾ ಹೇಳಿದರು. ಈ ದಿವಸ ಅಮೆರಿಕಾ ದೇಶದಲ್ಲಿ ಲ್ಯಾಂಡ್‌ಗ್ರ್ಯಾಂಟ್ಸ್ ಕಾಲೇಜುಗಳೆಂತ ಇವೆ. ಆ ವಿಶ್ವವಿದ್ಯಾನಿಲಯದಲ್ಲಿ ಎಲ್ಲಾ ಶಾಸ್ತ್ರಗಳನ್ನೂ ಅಭ್ಯಾಸ ಮಾಡುವಂಥ ಒಂದು ವ್ಯವಸ್ಥೆಯನ್ನು ಅಳವಡಿಸಿ ಮಾಡಿದ್ದಾರೆ. ಅಂಥಾ

(ಶ್ರೀ ಎಸ್. ಶಿವಪ್ಪ)

ಕಾಲೇಜುಗಳು ಈಗ ಅಮೆರಿಕಾ ದೇಶದಲ್ಲಿವೆ, ಈ ದಿವಸ, ಅಮೆರಿಕಾ ದೇಶದಲ್ಲಿ ಮೆಕನೈಸ್ಡ್ ಫಾರಂಸ್ ಮತ್ತು ಕಾಂಟ್ರಾಕ್ಟ್ ಫಾರಂಸ್ ಎಂತ ಎರಡು ರೀತಿ ಫಾರಂಗಳಿರುತ್ತವೆ. ಈ ಮೆಕನೈಸ್ಡ್ ಫಾರಂಗಳನ್ನು ಅಲ್ಲಿರತಕ್ಕ ಶ್ರೀಮಂತರು ಇಲ್ಲವೇ ನಾಲ್ಕಾರು ಜನ ಸಾಹುಕಾರರು ಸೇರಿ ಮಾಡಿಕೊಂಡಿರುತ್ತಾರೆ. ಇದರ ಜೊತೆಗೆ ದೊಡ್ಡ ದೊಡ್ಡ ಕಂಟ್ರಾಕ್ಟ್ ಫಾರಂಗಳು ಬೇರೆ ಇರುತ್ತವೆ. ಡೆನ್ಮಾರ್ಕಿನಲ್ಲಿ People Agricultural College ಅಂದರೆ ಜನತಾ ವ್ಯವಸಾಯದ ಕಾಲೇಜುಗಳಿರುತ್ತವೆ. ಆ ದೇಶದಲ್ಲಿ ಕೇವಲ 40 ಲಕ್ಷ ಜನಗಳಿದ್ದರೂ ನಮ್ಮ ಭಾರತದಲ್ಲಿರುವ 42 ಕೋಟಿ ಜನರಿಗಿಂತ ವ್ಯವಸಾಯದಲ್ಲಿ ಆ ಜನರು ಬಹಳ ಮುಂದುವರಿದಿದ್ದಾರೆ. ಈ ಡೆನ್ಮಾರ್ಕಿನ ಕಾಲೇಜುಗಳಲ್ಲಿರತಕ್ಕ ವ್ಯವಸಾಯ ಶಾಸ್ತ್ರ ಪ್ರವೀಣರು ಅಲ್ಲಿ ಈ ವ್ಯವಸಾಯಾಭಿವೃದ್ಧಿಯನ್ನು ಅಷ್ಟು ಅತ್ಯುತ್ತಮ ಮಟ್ಟಕ್ಕೆ ಬೆಳಿಸಿಕೊಂಡು ಹೋಗಿದ್ದಾರೆ. ಹೇಗೆ ಒಂದು ದೇಶದವರು ಒಂದೊಂದು ಪದ್ಧತಿ ವ್ಯವಸಾಯ ಕ್ರಮವನ್ನು ಅಭಿವೃದ್ಧಿ ಮಾಡಿಕೊಂಡು ಬಂದಿರುತ್ತಾರೆ, ಹಾಗೇ ರಷ್ಯಾದಲ್ಲೂ ಈ ದಿವಸ ಕಲೆಕ್ಟಿವೈಸೇಷನ್ ಫಾರಂಸ್ ಅಂತ ಇರುತ್ತವೆ. ಹೀಗೇ ಪ್ಯಾಲೆಸ್ಟೈನಿನಲ್ಲಿ ಕಲೆಕ್ಟೀವ್ ಅಂಡ್ ಸೈಂಟಿಫಿಕ್ ಫಾರಂಸ್ ಅಂತ ಇರುತ್ತವೆ. ಹೀಗೆ ಒಂದೊಂದು ದೇಶಗಳವರು ಅವರವರ ದೇಶಪದ್ಧತಿಗನುಗುಣವಾಗಿ ಒಂದೊಂದು ರೀತಿಯಲ್ಲಿ ವ್ಯವಸಾಯಾಭಿವೃದ್ಧಿಯನ್ನು ಮುಂದವರಿಸಿಕೊಂಡು ಹೋಗುತ್ತಿದ್ದಾರೆ. ಆದ್ದರಿಂದ ನಾವೂ ಸಹ ಈ ದಿವಸ ನಮ್ಮ ಭಾರತ ದೇಶಕ್ಕೆ ಒಪ್ಪತಕ್ಕಂಥ ಒಂದು ನವೀನ ಪದ್ಧತಿ ವ್ಯವಸಾಯವನ್ನು, ನಮ್ಮ ರೈತರಿಗೆ ಹೆಚ್ಚು ಉತ್ಪನ್ನ ತರತಕ್ಕಂಥ ಒಂದು ಉತ್ತಮ ಪದ್ಧತಿ ವ್ಯವಸಾಯ ಕ್ರಮವನ್ನು ನಮ್ಮ ದೇಶದ ರೈತರಿಗೆ ಇರತಕ್ಕ ಜ್ಞಾನದ ಮಟ್ಟಕ್ಕೆ ಸರಿಹೊಂದುವಂಥ, ಒಂದು ವ್ಯವಸಾಯ ಕ್ರಮವನ್ನು ಕಂಡುಹಿಡಿಯಬೇಕಾದ್ದು ನಮ್ಮ ಆದ್ಯ ಕರ್ತವ್ಯವೆಂದು ನಾನು ಸೂಚಿಸಲಿಚ್ಛಿಸುತ್ತೇನೆ. ಅಮೆರಿಕಾ ದೇಶದಲ್ಲಿ ಅವರ ಪದ್ಧತಿ ಹಾಗಿರಬಹುದು. ಅಲ್ಲಿ ಹೇರಳವಾದ ಐಶ್ವರ್ಯವಿದೆ; ಬುದ್ಧಿವಂತ ಜನಗಳಿದ್ದಾರೆ. ಆ ದೇಶದ ಜನರಿಗೆ ಈ ವ್ಯವಸಾಯದ ಬಾಬಿನಲ್ಲಿ ಇರುವಷ್ಟು ವಿದ್ಯಾ-ಬುದ್ಧಿಗಳು ನಮ್ಮ ದೇಶದ ರೈತರಲ್ಲಿಲ್ಲ. ಆದ್ದರಿಂದ ನಾನೀದಿವಸ ಆ ಅಮೆರಿಕಾ ದೇಶದವರ ವ್ಯವಸಾಯ ಪದ್ಧತಿಯನ್ನೇ ಈ ದೇಶದಲ್ಲೂ ಅನುಕರಣೆ ಮಾಡಬೇಕೆಂದರೆ ಖಂಡಿತ ಸಾಧ್ಯವಾಗುವುದಿಲ್ಲ. ಮಾಡಿದರೆ ಅದರಿಂದ ನಮಗೆ ಖಂಡಿತ ಸಫಲವಾಗುವುದೂ ಇಲ್ಲ. ನಮ್ಮ ದೇಶದಲ್ಲಿ ನಾವೀಗ ಜಾರಿಗೆ ತಂದಿರತಕ್ಕ ಈ ಕಮ್ಯೂನಿಟಿ ಡೆವಲಪ್‌ಮೆಂಟ್ ಸ್ಕೀಮು, N.E.S. ಇವುಗಳೆಲ್ಲ ಆ ಅಮೆರಿಕಾ ದೇಶದ ಪದ್ಧತಿಯನ್ನೇ ಅವಲಂಬಿಸಿರುತ್ತವೆ. ಈ ಯೋಜನೆಗಳು ಈಗಲೂ ಅಮೆರಿಕಾ ದೇಶದಲ್ಲೂ ಇರುತ್ತವೆ. ಕಾರಣ ಅಲ್ಲಿ ಹಣ ಅಪಾರವಾಗಿದೆ. ವಿಶಾಲವಾದ ಭೂಮಿ ಇವೆ, ಅವರು ಮಾಡುತ್ತಾರೆ. ಅವರು ಅಲ್ಲಿ ಹಾಗೆ ಮಾಡುತ್ತಾರೆ ಎಂತ ನಾವೂ ಇಲ್ಲಿಯೂ ಮಾಡೋಣವೆಂದು ಹೊರಟರೆ ಇದರಿಂದ ಖಂಡಿತ ಫಲ ಲಭಿಸುವುದಿಲ್ಲ. ದೇಶಕ್ಕೇನೂ ಲಾಭವಾಗುವುದಿಲ್ಲ. ಆದ್ದರಿಂದ ನಾವೀದಿವಸ ನಮ್ಮ ದೇಶಕ್ಕೆ ಅಳವಡಕ್ಕಂಥಾ ಒಂದು ವ್ಯವಸಾಯದ ವಿಶ್ವವಿದ್ಯಾ ಸಂಶೋಧನಾಲಯವನ್ನು ಸ್ಥಾಪನೆ ಮಾಡತಕ್ಕ ಕಾಲದಲ್ಲಿ ನಾವು ಬಹಳ ಜಾಗರೂಕರಾಗಿ ಕೆಲಸ ಮಾಡಬೇಕಾಗಿದೆ. ನಾವೀ ದಿವಸ ಆ ಅಮೆರಿಕಾ ದೇಶದ ಪದ್ಧತಿಯನ್ನು ಅನುಸರಿಸುವುದಾದರೆ ನಾವು ನಮ್ಮ ವ್ಯವಸಾಯದ ಕಾಲೇಜುಗಳಲ್ಲಿ ಕೇವಲ ಕೆಲವು ಹುದ್ದೆಗಳನ್ನಲಂಕರಿಸತಕ್ಕ ಜನರನ್ನು ತಯಾರಿಸಬಹುದೇ ವಿನಾ ಅವರಿಂದ ದೇಶಕ್ಕೇನೂ ಉಪಕಾರವಾಗುವುದಿಲ್ಲ. ಖಂಡಿತ ಇಂಥಾ ಕೆಲಸಕ್ಕೆ ನಾವು ಕೈಹಾಕಬಾರದು. ಈ ದಿವಸ ಅಮೆರಿಕಾ ದೇಶದ ಮಾದರಿಯನ್ನು ಅಳವಡಿಸಿದರೆ ನಾವು ಕೇವಲ ಹೊರಗಡೆಯಿಂದ ಭಾರಿ ಭಾರಿ ಸಂಬಳದ ವಿದ್ಯಾವಂತರನ್ನು ಕರೆಸಿ ಅವರನ್ನು ಇಲ್ಲಿ ಅಲಂಕಾರ, ಮಾಡಿ—ಅಧಿಕಾರ ಸ್ಥಾನದಲ್ಲಿ ಕೂರಿಸಿದರೆ ಅವರು ಇಲ್ಲಿ ತಯಾರಿಸತಕ್ಕದ್ದೇನೆಂದರೆ—ಇಲ್ಲಿ ನಾಳೆ ಸಾಹೇಬರಾಗಿ ಅಧಿಕಾರ ನಡೆಸತಕ್ಕ ಜನರನ್ನೇ ಅವರು ತಯಾರುಮಾಡುತ್ತಾರೆ. ಹೀಗೆ ಕೇವಲ ಹುದ್ದೆಗಳಿಗೆ ಅರ್ಹತೆಯುಳ್ಳ ಜನರನ್ನು ತಯಾರಿಸತಕ್ಕ ಕಾಲೇಜುಗಳಿಂದ ನಮಗೇನು ಪ್ರಯೋಜನವಾಗುವುದಿಲ್ಲ. ಇದರಿಂದ ದೇಶಕ್ಕೂ ಅನುಕೂಲವಿಲ್ಲ. ಇದು ನನ್ನ ಸ್ಪಷ್ಟವಾದ ಅಭಿಪ್ರಾಯ. ಈ ಅಂಶವನ್ನು ತಾವು ಆಳವಾಗಿ ಆಲೋಚನೆ ಮಾಡಬೇಕಾಗಿದೆ. ನಮ್ಮ ಈ ವಿಶ್ವವಿದ್ಯಾನಿಲಯದ ಅಂಗರಚನೆ ಹೇಗಿರಬೇಕೆಂಬುದು ಬಹಳ ಪ್ರಾಮುಖ್ಯ. ಈ ದಿವಸ ಇಲ್ಲಿ ಹೇಳಿರತಕ್ಕದ್ದನ್ನು ನಾನು ಕಡ್ಡಾಯವಾಗಿ ಓದಿದರೆ ನನಗೇನು ಅನಿಸುತ್ತಿದೆಯೆಂದರೆ ಈಗ ಈ ಕಾಲೇಜನ್ನು ಸ್ಥಾಪನೆ ಮಾಡತಕ್ಕ ಉದ್ದೇಶವಾದರೂ ಏನು ? ಇದು ಒಂದು ಅಟಾನಮಸ್ ಬಾಡಿಯಾಗಿರಬೇಕು. ಈ ವಿಚಾರದಲ್ಲಿ ಸರ್ಕಾರದವರು ಹೆಚ್ಚಿನ ಅಧಿಕಾರವನ್ನು ತಮ್ಮ ಕಡೆಗಿಟ್ಟುಕೊಂಡಿದ್ದಾರೆ. ಹೀಗೆ ಸರ್ಕಾರದವರ ಪ್ರಭಾವಕ್ಕೊಳಗಾದರೆ ಕಾಲೇಜುಗಳಲ್ಲಿ ಜ್ಞಾನ ಪ್ರಸಾರ ಕಾರ್ಯ ಚೆನ್ನಾಗಿ ನಡೆಯುವುದಿಲ್ಲ. ಇದು ಸರಿಯಾದ್ದಲ್ಲ. ವಿಶ್ವವಿದ್ಯಾನಿಲಯ ಯಾರೊಬ್ಬರ ಹಂಗಿನೊಳಗೂ ಇರಬಾರದು, ಅದು ತನ್ನ ಒಂದು ಸ್ವಯಂ ಸ್ವತಂತ್ರ ಆಡಳಿತವನ್ನು ತನ್ನ ಅಧಿಕಾರದ

ಚೌಕಟ್ಟಿನಲ್ಲೇ ನಡೆಸುವಂತಿರಬೇಕು. ವಿದ್ಯಾ ಸಂಸ್ಥೆ ಒಂದು ಸರ್ವಾಂಗ ಸುಂದರವಾದ ಸಂಸ್ಥೆಯಾಗಿರಬೇಕು. ಆದರೆ ಈ ದಿವಸ ಸಭೆಯ ಮುಂದಿರತಕ್ಕ ಮಸೂದೆಯಲ್ಲಿ ನೋಡಿದರೆ ಅಂಗ ರಚನೆಯಲ್ಲಿ ಬಹಳ ಅಧಿಕಾರವನ್ನು ಸರ್ಕಾರ ತನ್ನ ಕೈಯಲ್ಲಿಟ್ಟುಕೊಂಡಿದೆ ಎಂಬುದು ಗೊತ್ತಾಗುತ್ತದೆ. ಹೀಗಾದ ಪಕ್ಷದಲ್ಲಿ ಇದು ಕೇವಲ ಹೆಸರಿಗೊಂದು ವ್ಯವಸಾಯದ ಕಾಲೇಜು ಇದ್ದಂತೆ ಆಗುತ್ತದೆಯೇ ವಿನಾ ಮತ್ತೇನೂ ಇದರಿಂದ ಪ್ರಯೋಜನವಾಗುವುದಿಲ್ಲ. ಈ ದಿವಸ ಈ ವ್ಯವಸಾಯದ ಯೂನಿವರ್ಸಿಟಿ ಇನ್‌ಸ್ಪೆಕ್ಷನ್ ವಿಚಾರ ಇದರ ಕಂಟ್ರೋಲ್ ವಿಚಾರ ಇವುಗಳ ಬಗ್ಗೆ ಇದರಲ್ಲಿ ಏನು ಹೇಳಿದ್ದಾರೆಂದರೆ ;—

"Board of Regents, Academic Council, Board of Studies and such other bodies as the University may declare by staute."

ಈ ಯೂನಿವರ್ಸಿಟಿಯ ಇನ್‌ಸ್ಪೆಕ್ಷನ್‌ನ್ನು ಸರ್ಕಾರದವರು ಮಾಡಬಾರದು ಎಂತ ಹೇಳುವುದಿಲ್ಲ. ಆದರೆ ಅವರು ಹೆಜ್ಜೆ ಹೆಜ್ಜೆಗೂ ಇದರ ಆಡಳಿತದಲ್ಲಿ ಇಲ್ಲಿ ಹೇಳಿರುವಂತೆ ಪ್ರವೇಶ ಮಾಡಿದರೆ, ಈ ಯೂನಿವರ್ಸಿಟಿಯ ಪವಿತ್ರತೆಗೆ ಕಳಂಕ ಬರುತ್ತದೆ. ಆದ್ದರಿಂದ ಇದಕ್ಕೆ ಸಾಕಷ್ಟು ಸ್ವಯಂ ಸ್ವಾತಂತ್ರ್ಯ ಆಡಳಿತವಿರಬೇಕು. ಸರ್ಕಾರದವರೇನಿದ್ದರೂ ಒಂದು ವಿಸಿಟಿಂಗ್ ಅಧಿಕಾರಿಗಳ ಮಟ್ಟದಲ್ಲಿರಬೇಕು. ಈ ದಿವಸ ನಮ್ಮ ವ್ಯವಸಾಯಕ ಕಾಲೇಜಿನ ಆಡಳಿತ ಬಹಳ ಕೆಟ್ಟುಹೋಗಿದೆ. ಇಂಥಾ ಕಾಲದಲ್ಲಿ ಮತ್ತೆ ಇದನ್ನೇ ಪುನರಾವರ್ತಿ ಮಾಡಲು ಅವಕಾಶವಿರಬಾರದು. ಈಗ ಈ ಮಸೂದೆಯಲ್ಲಿ Authorities of the University ಎಂಬ ಚಾಪ್ಟರಿನಲ್ಲಿ The following shall be the authories of the University, namely :—(1) The Board of Regents ಎಂತ ಹೇಳಲಾಗಿದೆ. ಹಿಂದಿನ ವಿಶ್ವವಿದ್ಯಾನಿಲಯಗಳಲ್ಲಿ ಈ ಸ್ಥಾನ ಸೆನೆಟ್ ಸಭೆ ಇತ್ತು. ಆದರೆ ಈ ದಿವಸ ಹೀಗೆ ಹಿಂದಿನ ಪದ್ಧತಿಯನ್ನು ಬದಲಾವಣೆ ಮಾಡಿರತಕ್ಕ ಬಗ್ಗೆ ಕಾರಣಗಳೇನೆಂಬುದನ್ನು ತಿಳಿಸಿಲ್ಲ. ಆದರೆ ನನಗೆ ಈಗ ಹೇಳತಕ್ಕ ಈ Board of Regents ಎಂಬುದನ್ನು ಬದಲಾವಣೆ ಮಾಡಿ ಈ ಸ್ಥಾನದಲ್ಲಿ ಹಿಂದಿದ್ದ ಹಾಗೆ ಸೆನೆಟ್‌ನ್ನು ಇಡತಕ್ಕದ್ದು ಉತ್ತಮವೆಂದೆನಿಸುತ್ತಿದೆ. ಆ ಸೆನೆಟ್ ಸಭೆಗೆ ಈ ಆಡಳಿತ ನಡೆಸುವ ಶಕ್ತಿ ಇರುತ್ತದೆ.

ಅಧಿಕಾರಿಗಳನ್ನು ನೇಮಕ ಮಾಡುವಾಗ ಯಾವ ಪ್ರಭಾವಕ್ಕೂ ಒಳಗಾಗದೆ ಇರತಕ್ಕ ತಜ್ಞರ ಮಂಡಳಿ ಇರುವುದು ಒಳ್ಳೆಯದು. ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿಯೂ Board of Appointments ಎಂದು ಇರುತ್ತದೆ. ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರು ಅದಕ್ಕೆ ಅಧ್ಯಕ್ಷರಾಗಿರುತ್ತಾರೆ. ಮತ್ತು ಹೊರಗಿನ ತಜ್ಞರು ಮತ್ತು ವಿಶ್ವವಿದ್ಯಾನಿಲಯದಲ್ಲಿರುವ ತಜ್ಞರು ಆ ಮಂಡಳಿಯಲ್ಲಿರುತ್ತಾರೆ. ಅಂಥ ಒಂದು Board of Appointments ಇಲ್ಲಿಯೂ ಇರಬೇಕು. ಅಧಿಕಾರಿಗಳನ್ನು ನೇಮಕ ಮಾಡುವಾಗ ಯಾವ ಪ್ರಭಾವಕ್ಕೂ ಒಳಗಾಗದೆ ಈ ವಿಶ್ವವಿದ್ಯಾನಿಲಯವನ್ನು ಸ್ಥಾಪನೆಮಾಡಿ ವ್ಯವಸಾಯ ಶಾಸ್ತ್ರವನ್ನೂ ಉನ್ನತ ಮಟ್ಟದಲ್ಲಿ ಬೋಧಿಸಬೇಕು ಎನ್ನುವ ತಮ್ಮ ಸದುದ್ದೇಶ ಈಡೇರಬೇಕಾಗಿದ್ದರೆ ತಜ್ಞರನ್ನೊಳಗೊಂಡ ಒಂದು ಮಂಡಳಿ ಇರಬೇಕು, ಅದನ್ನು ಇದರಲ್ಲಿ ಅಳವಡಿಸಬೇಕು ಎಂದು ಸೂಚನೆಯನ್ನು ಮಾಡಬೇಕಾಗಿದೆ.

2-30 P.M.

ಈ ವಿಶ್ವ ವಿದ್ಯಾನಿಲಯದಲ್ಲಿನ academic Council ಇನ್ನೂ ಸ್ವಲ್ಪ ದೊಡ್ಡದಾಗಿರ ಬೇಕಾಗಿತ್ತು. ಇದಕ್ಕೆ executive body ಬಹುಶಃ Board of Regents ಎಂದು ಕಾಣುತ್ತದೆ. ಸಿಂಡಿಕೇಟಿಗೆ ಸರಿಸಮಾನವಾಗಿ Board of Regents ಇದೆ ಎಂದು ಕಾಣುತ್ತಿದೆ. ಸೆನೆಟ್ ಇಲ್ಲ, ಅಕಾಡಮಿಕ್ ಕಾನ್ಸಿಲ್‌ನಲ್ಲಿ Board of Regents *ex-officio* members ಆಗಿರಬೇಕು. ವ್ಯವಸಾಯ ಶಾಸ್ತ್ರದಲ್ಲಿ ಪ್ರವೀಣತೆ ಇರತಕ್ಕ ಕಾಲೇಜ್‌ಗಳನ್ನು ಸ್ಥಾಪನೆ ಮಾಡಬೇಕೆಂದು ಹೇಳುವಾಗ Board of Regents ಮತ್ತು Academic Councilಗೆ ಯಾವ ಸಂಬಂಧವೂ ಇಲ್ಲ. ಅದನ್ನು ಪೂರ್ತಿಯಾಗಿ ಕೈಬಿಟ್ಟಿದ್ದಾರೆ. Academic Councilನಲ್ಲಿ Board of Regents ex-officio-members ಆಗಿರಬೇಕು. ವಿಶ್ವ ವಿದ್ಯಾನಿಲಯದ ಆಡಳಿತವನ್ನು ನಡೆಸತಕ್ಕ ಹೆಚ್ಚಿನ ಅಧಿಕಾರವುಳ್ಳವರೇ ಈ Board of Regents. ಅವರು acadmic conncil ನಲ್ಲಿದ್ದರೆ ತಮ್ಮ ಸಲಹೆಗಳನ್ನು ಕೊಟ್ಟು, ಅವರ ಸಲಹೆಗಳನ್ನು ಕೇಳಿ ಉಭಯತ್ರರೂ ಸಂಪೂರ್ಣವಾಗಿ ಚರ್ಚೆಮಾಡಿ ಒಂದು ತೀರ್ಮಾನಕ್ಕೆ ಬರುವುದಕ್ಕೆ ಸಹಾಯವಾಗುತ್ತದೆ. ಇದು academic mattersನಲ್ಲಿ ಬಹಳ ಉನ್ನತವಾದ ಸಭೆ. Board of Regents ಇದರಲ್ಲಿದ್ದರೆ Academic Councilಗೆ ಹೆಚ್ಚು ಕಳೆ ಬರುತ್ತದೆ, ಹೆಚ್ಚು ಶಕ್ತಿ ಬರುತ್ತದೆ ಮತ್ತು ಒಳ್ಳೆಯ ತೀರ್ಮಾನಗಳನ್ನು ಮಾಡತಕ್ಕ ಅವಕಾಶ, ಒಳ್ಳೆಯ ವಾತಾವರಣ ಬರುತ್ತದೆಂದು ನಾನು ಸಲಹೆ ಮಾಡಬೇಕಾಗಿದೆ.

(ಶ್ರೀ ಎಸ್. ಶಿವಪ್ಪ)

ಮೈಸೂರಿನಲ್ಲಿ ಅನೇಕ ಭಾಗಗಳು ಸೇರಿವೆ. ಇದಕ್ಕೆ ಸಂಬಂಧಪಟ್ಟಹಾಗೆ statutes ಮತ್ತು regulation ಮಾಡುವಾಗ ಬಹಳ ಎಚ್ಚರಿಕೆಯಿಂದ ಮಾಡಬೇಕಾಗಿದೆ. ವ್ಯವಸಾಯಕ್ಕೆ ಸಂಬಂಧಪಟ್ಟ ಹೆಚ್ಚಿನ ವಿವರಗಳಿಗೆ ಹೋಗುವುದಿಲ್ಲ. ವ್ಯವಸಾಯ ಕಾಲೇಜಿನಲ್ಲಿ ಓದಿರತಕ್ಕ ನನ್ನ ಮಿತ್ರರಾದ ಶ್ರೀಮಾನ್ ಬಿ. ಎನ್. ಗೌಡರು ಹೇಳುತ್ತಾರೆ. ವಿಶ್ವ ವಿದ್ಯಾನಿಲಯವನ್ನು ರಚನೆ ಮಾಡತಕ್ಕ ಕಾಲದಲ್ಲಿ ಅದರ ಅಂಗ ರಚನೆಯಲ್ಲಿ ಈ ರೀತಿಯ ಬದಲಾವಣೆಗಳನ್ನು ಮಾಡಿಕೊಂಡರೆ ಹೆಚ್ಚಿನ ಸ್ವರೂಪ ಕಳೆ ಬರುತ್ತದೆ. ವ್ಯವಸಾಯವೇ ಪ್ರಧಾನವಾಗಿರುವ ಭಾರತ ದೇಶದಲ್ಲಿ ಒಂದು ಭಾಗವಾಗಿರುವ ಮೈಸೂರು ರಾಜ್ಯದಲ್ಲಿ ಈ ಒಂದು ವಿಶ್ವ ವಿದ್ಯಾನಿಲಯವನ್ನು ಸ್ಥಾಪನೆ ಮಾಡುದರ ಮುಖಾಂತರ ಇಲ್ಲಿ M. Sc., D. Sc., Doctorate ಈ ಪದವಿಗಳನ್ನು ಪಡೆಯುವ ಅವಕಾಶಗಳನ್ನು ಕಲ್ಪಿಸಿ ಕೊಟ್ಟಂತಾಗುತ್ತದೆ. ಮತ್ತು ನವೀನ ರೀತಿಯಲ್ಲಿ ವ್ಯವಸಾಯಕ್ಕೆ ಹೊಸರೂಪರೇಷೆ ಕೊಡತಕ್ಕ ಅವಕಾಶ ಈ ಮಸೂದೆಯಿಂದ ಸಿಕ್ಕಲಿ ಎಂದು ಈ ಮಸೂದೆಯ ತತ್ವಗಳನ್ನು ಅಂಗೀಕರಿಸುತ್ತೇನೆ.

[MR. DEPUTY SPEAKER in the Chair.]

Sri B. R. SUNTHANKAR (Belgaum City).—Mr. Deputy Speaker, Sir, This is a very important Bill.

Sri K. LAKKAPPA (Hebbur).—Sir, I rise to a point of order. When you are occupying the Chair, can the Hon'ble Member address you as Deputy Speaker ?

Mr. DEPUTY SPEAKER.—That is all right.

Sri B. R. SUNTHANKAR.—This Bill aims at creating a separate University for Agricultural Sciences. For that, a huge amount of non-recurring and recurring expenditure will have to be incurred. I welcome this Bill, and I welcome the principles of this Bill; but while welcoming it, I have got my own reservations. In the formation of this University, there are a number of defects and shortcomings, to which I am going to refer later. The principle underlying this Bill is very laudable. This new University is modelled on the type of Land Grant Colleges in America. These Colleges have proved a tremendous success and they have been able to increase and augment the agricultural wealth and production and bring prosperity to various States in America. If we examine the structure of this new University, I am obliged to say :

> "The artist tried to create Ganapathi, but unfortunately, his image ended in a Monkey."

I am obliged to say this, because this University cannot be called a University in the real sense of the term. It is not like other Universities that are existing in our country. It is not an autonomous body. This University consists of Government officers and Government nominated persons. This Bill tries to club together various Departments of the Government, the Agricultural Department, Animal Husbandry Department, Veterinary Department and Fisheries Department. All these Departments are being clubbed together. It is said in the Statement of Objects and Reasons :

> "The urgency of bringing about rapid increase in food production in the State necessitates the reorganisation and

> integration of the existing patterns of Agriculture, Animal Husbandry, Education and Research with the aim of bringing about the greatest possible co-ordination of these basic activities in the service of agriculture."

This University is physically bringing together the various Departments and if there will be real integration of these Departments, of the activities of the Departments, this University may prove to be a success. I have already said that this University cannot be called an autonomous University. It is bureaucratic in nature. It is going to be bureaucratic in nature, because bureaucracy will have a large part in the activities of this University. There is no elective principal. There is no election of any of the members to the University. The University will consist of either Government officers or members nominated by the Government. These various Departments are being brought together under the name of the University. When these various Departments cannot work successfully, and give good performance, I cannot understand how by bringing together all these Departments, their achievements could be expected to be more successful.

MR. DEPUTY SPEAKER.—The Heads of the Departments are the members. Departments are not brought together.

SRI B. R. SUNTHANKAR.—In actual practice, their farms and their research stations will be brought under this University. It is merely shifting the Departments to the University. That is the structure of this University. Particularly, our Agricultural Department has failed in research work. It could not produce good results of research work. How can by physically bringing together all these Departments it is going to be of much use, is rather doubtful. That raises doubt in my mind.

As I have already said, the Land Grant Colleges were a tremendous success in America. They worked revolution in the field of agriculture in a number of States. They became very popular and very useful. There are 1200 Land Grant Colleges in America having a student population of 10 lakhs. These Land Grant Colleges, as has been said by the Radhakrishnan Committee Report, stand on the tripod of teaching, experiment and research and agricultural extension service. Agricultural extension service is a very important part of Land Grant Colleges because the agricultural extension services carry home to the cultivators, the experiments, researches and the achievements of these Colleges; they are carried to the very homes of the cultivators. Land Grant Colleges are the most comprehensive system of scientific, technical and practical higher education in agriculture. One good feature of these Colleges is that they are entirely autonomous. There is no Government interference in these working of institutions, These Colleges, as I have said, worked a revolution in America in the western States. The western part of America which was formerly known as the great American Desert was converted within a period of twenty five years into a land of wealth and prosperity. In the State of Florida, they proved a great success.

(SRI B. R. SUNTHANKAR)

The total agricultural income of Florida State was to the tune of 9 crore dollars in 1935. And in 1946 by the help of the Land Grant Colleges, by the researches, experiments and extension services, the total agricultural income of this State rose to 41 crore dollars within a period of 11 years; that was the achievement of Florida State by the help of Land Grant Colleges. The Land Grant Colleges proved such a great success in America. If this University works in a proper way, and if this University sticks to the aims and objects of the University, I do not understand why our State should not increase its agricultural production. If we keep in view the model of the American States and the Land Grant Colleges, we can also increase our agricultural production to an Enormous Extent. The three important aspects of this University are, first education, second research, both applied and fundamental, and third, extension services. The object of the extension services is to carry to the cultivators' huts the achievements of education, experiment and research, to carry to the caltivators' field the improved methods in agriculture, and the improved farm technique. This is a special obligation. That is a very important aspect of this Bill, a very laudable object. This Bill lays down a special obligation on the University to the cultivator. Whatever research and experiments and whatever improvements are done in the fields, in the farms of the Colleges, they will have to be taken to the cultivators', to the huts and fields of the cultivators. That is an obligation cast on this University and if it is properly worked out, this University is going to be a great success in the State.

Research work has been a weak point in the agricultural Department. The A.G.R. Committee has rightly pointed out about agricultural research; it says:

> "It has been admitted at the highest Governmental level that agricultural research has failed as a field of phenomenon to influence yields and to step up production and that the 'Ivory Tower' mentality in research is responsible for this."

This 'Ivory Tower' mentality is still there in the field of research. Research is carried on and conducted in the Government farms; it does not reach the rural masses. That has been the great defect in the present system.

Agricultural education in our country is of recent origin. In America it is more than a century old. In our country, it is hardly 50 years old. The first Agriculture College was started at Poona in the first decade of this Century and I am very proud to say that I belong to that College. I think it was the first College that was started in Asia. When I was in that College there were students from Ceylon, from Burma, from South-East Asia. But after that, a number of Colleges were started. At present, the number of Colleges in India is

55. In 1910 there were only two Colleges in this country. As the Radhakrishnan Committee Report has said, agricultural education reflects national policy and that Report has recommended that agricultural education should be considered a major issue in the activities of the Government and it should be given a priority in planning. These are two recommendations of the Radhakrishnan Committee Report. This University is trying to follow these recommendations. Let us hope that this University in its working will fulfil these expectations. If the University is to serve its purpose well, it should be given a rural setting. As the Radhakrishnan Committee Report says "agricultural education should be given a rural setting so that it should include direct participation in and experience with agricultural life and practice." If this University is to become a real success, it should have a rural setting. From that view point I doubt very much whether the seat of the University, that is Hebbal, will be an ideal site for the University. But perhaps there are practical difficulties ; it is not feasible in the beginning to create a seat in the rural areas ; but I would like to suggest to the Government that the seat of the University after 5 or 10 years should be shifted to the rural areas in the heart of the countryside where it will come into contact with the rural masses, with the cultivators and agriculturists and will be of great benefit to them in their agricultural profession. The object of the University should be to train the farmer's son so that he should go back to the farm and work more efficiently and increase food production. The experience now is that very few of the agriculture graduates who come out of the University go back to their farms. Of the agriculture graduates, only 2 or 3 per cent, go to farms ; the rest are job hunters. Agriculture Colleges like other Colleges have become a machine to produce job hunters.

Sir, Government should take special steps to encourage farmers' boys to join this college. They should give them concessions. In the Poona Agricultural College, formerly—I do not know what is the state at present—in the beginning, the farmers' sons were being given free education in the Agricultural College at Poona. They were given freeships. In order to give encouragement and impetus for the farmers' sons. This university should also have such facilities to offer free education at least in the beginning.

The third object of the University is to create rural leadership. Sir, there is a great need in our country to have real rural leadership, and this sort of agricultural education given by this University is expected to fill that need. In America, Sir, in the Land Grant Colleges, there are special training facilities for leadership. In the Florida University, there are special courses for training in leadership. This university also should try in that direction to have special courses of training in rural leadership. In this Bill that idea is there ; in clause 6 item (6) It says—

"To provide lecture and instruction for field workers for village leaders and other persons......"

(SRI B. R. SUNTHANKAR)

The idea is there. More emphasis should be laid on this aspect of creating new leadership in the rural areas. Leadership in farm and modern technique and sciences—such leadership is considered necessary and essential in rural areas

One more point about curriculum. The curriculum in Agricultural college is and should be quite different from the curriculum in other colleges. This curriculum should be flexible and not rigid. More emphasis should be laid on practical work than on examination. Again Sir, in this respect, I would like to refer to Dr. Radhakrishnan's report: The Report says:

> "We think the rigidity in agricultural degree courses in India, is the major defect. In florida courses are so arranged as to offer every student opportunity for studying in many agricultural subjects. The curricula are flexible......"

So, there should be that flexibility of curricula. Not only should the student be good in answering questions and scoring marks on answer books, but more emphasis should be laid on practical work and practical achievment of the student in agriculture and other sciences.

Sir, there will be one more good feature of this university and I hope it will be, that this university will concentrate on research work. At present, the departmental set up cannot concentrate on research work on account of various activities and so Sir, some of the research stations and experimental farms have been deteriorating in recent years. But here it is expected that there would be concentration of attention on research work and this agricultural univerisy will be able to produce valuable research.

Sir, with this view, there is the post of a Director of Research in the university. I have suggested in one of my amendments that this Director should be assisted by a board of research. That is very important. He should be given the assistance of a board of research consisting of experts who will advise, guide, conduct and supervise research work in this University. Such a board is very essential. The most important part of this university will be extension service and the Government should lay more emphasis on the utilisation of the results of research and experiments that will be carried on. These results should be taken to the corners of the State so that the rural masses, cultivaters and agriculturists are benefitted and are able to take advantage of these researches and be able to increase production.

Sir, just like any other University there should be extra-mural boards and extra-mural lectures as in Poona University; there are various centres of extra-mural lectures throughout the entire Maharashtra. Similarly this university should arrange for such centres of extra-mural lectures in rural areas, seminars and lecture classes should be held for the benefit of cultivators. They should be held only in the

rural areas and not in big towns and cities, where there are few agriculturists.

Sir, dissemination of scientific and technical knowledge is very essential in our country. Particularly this dissemination should spread in the rural masses in the cultivators who are the real tillers of the soil.

As far as Agricultural Sciences are concerned, this Bill, in my opinion, is incomplete. It is not as comprehensive as it should be. Sir, agriculture is a science which is connected with various branches of knowledge. Agriculture could be called science of sciences. There are other sciences which claim to be science of sciences. But agriculture, in the real sense of the term can be called the science of sciences because it requires the help of various branches of sciences.

Sir, this Bill ignores some of the very important branches of science which are required for agriculture—Agricultural chemistry is one of them. There is nowhere a mention of this branch of science—agricultural chemistry. Pest diseases—Sir, are great enemies to our agriculture and to protect our agriculture from these pests and diseases, the science of plant pathology and the science of entomology are very essential—but nowhere in this Bill, we find any mention of the plant pathology and entomology. These should be specifically included and there should be separate sections for these subjects and separate heads of these subjects.

Sir, the term 'home economics' is used two or three times. It is not a very happy word. It is probably the imitation of the word as used in American colleges. Home econmics is just like home science and refers to household economy. We want something more than that. We want agricultural economics that will be useful for agriculturists. Therefore I suggest that the term 'home science' should be substituted by 'agricultural economics' which is a more comprehensive word and has a wider application and better connotation. Now, I will come to the structure of the University. Sir, the Vice-Chancellor holds a very important position in any University. He can be called the 'keeper of University' conscience. He should be an expert in his own field. He should have no autocratic powers and the tenure of his office should be longer.

Mr. DEPUTY SPEAKER.—The hon. member may continue after tea. The House will now rise and meet after half-an-hour.

The House adjourned for recess at Three of the Clock and re-assembled at Thirty Minutes past Three of the Clock.

[Mr. SPEAKER in the Chair.]

Sri B. R. SUNTANKAR.—Sir, I was dealing with the post of the Vice-Chancellor. The term of office of the Vice-Chancellor is very important and that has been the opinion of experts. The Radhakrishnan Committee recommended the tenure of six years for the Vice-Chancellor. Similarly, in the Vice-Chancellors' Conference also......

Mr. SPEAKER.—Is it a specific recommendation in respect of Agriculture or general ?

Sri B. R. SUNTAKAR.—General, Sir. The Vice-Chancellors' Conference also recommended the tenure of office to be 5 or 6 years. Sir, it is very necessary that the Vice-Chancellor should have freedom and he should be free from political pressure. Appointment of Vice-Chancellor in this State has become a matter of controversy. In the Vice-Chancellors' Conference, the then Vice-Chancellor Mr. Advani has rightly remarked "that the post of Vice-Chancellor should be completely free from political pulls and there should be absolutely no strings attached to his office. Further more, I agree that the Vice-Chancellor should have an academic background. He must be either a teacher or a person very much interested in education." Here we may say 'agricultural education.'

Mr. SPEAKER.—There is no controvesy about this Bill; why develop that ?

Sri B. R. SUNTANKAR.—I am not saying any thing contrary Sir. I am only saying that the appointment of a Vice-Chancellor should be in conformity with these provisions.

Sir, this University includes a subject for fishery. Fishery is a very important industry. Fish is important for food as well as for fertiliser supply. These are the two important aspects of this industry but very little is done so far as this is concerned. There is vast scope for improvement and research in this field. But, practically no research is made in this country. Our State has a large coast of line and this University can undertake Ocean research and have a special course in ocean and fishery research. In basic schools also fishing should be one of the subjects instead of spinning. This should be specially introduced in the schools in the coastal areas. I wish the Minister had sent this Bill to a Select Committee because , in my opinion, there are so many defects in this Bill. It would have been better if it had gone to a Select Committee.

Then, Sir, I suggest that all the educational institutions under the departments of Agriculture, Animal Husbandry and Fisheries should be brought under this University as early as possible.

Sir, there is a post of Pro-Chancellor. I do not understand why there should be this post when there is the Chancellor and also the Vice-Chancellor. It is quite unnecessary and it will be simply an ornamental post. I do not see any use of having such an ornamental post. That ornament would be of 14 ct. value.

My last point is about the audit. It is better that auditing of the University is entrusted to the Accountant-General's office.

Mr. SPEAKER.—Are the accounts of the existing Universities audited by the Accountant General ?

Sri B. R. SUNTANKAR.—No. That is why they do not come before us. If they are audited by the Accountant-General's office, then they will come before this House.

Mr. SPEAKER.—Please read clause 38 (3).

Sri B. R. SUNTANKAR.—Yes, Sir. Government will appoint auditors. It is a good feature and we will have an opportunity to scrutinise.

Mr. SPEAKER.—Therefore, the point that they do not come before this House is not correct.

Sri B. R. SUNTANKAR.—With these remarks I conclude.

ಶ್ರೀ ಬಿ. ಎಲ್. ಗೌಡ (ಚಳ್ಳಕೆರೆ).—ಸ್ವಾಮಿ, ಈ ಮೈಸೂರು ವ್ಯವಸಾಯ ವಿಜ್ಞಾನಗಳ ವಿಶ್ವವಿದ್ಯಾನಿಯಕ್ಕೆ ಸಂಬಂಧಪಟ್ಟ ಮಸೂದೆಯನ್ನು ಸ್ವಾಗತಿಸುತ್ತಾ, ಈಗಾಗಲೇ ನನಗೆ ಮುಂಚೆ ಮಾತನಾಡಿದ ಸ್ನೇಹಿತರು ಹೇಳಿರುವುದನ್ನು ಬಿಟ್ಟು, ಒಂದೆರಡು ವಿಷಯಗಳನ್ನು ಹೇಳುತ್ತೇನೆ.

ಮುಖ್ಯವಾಗಿ ಇಂಥ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಕಾರ್ಯಕ್ರಮ ಕೈಗೊಂಡಿರತಕ್ಕಂಥ ಮಾನ್ಯ ವ್ಯವಸಾಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಮಾನ್ಯ ಮಂತ್ರಿವರ್ಯರು ಬಹಳ ದೀರ್ಘಾಲೋಚನೆ ಮಾಡಿ ರೈತರ ದೃಷ್ಟಿಯಿಂದ, ವ್ಯವಸಾಯಗಾರರ ದೃಷ್ಟಿಯಿಂದ ಇಂಥ ಒಂದು ಮಸೂದೆಯನ್ನು ತಂದಿರುತ್ತಾರೆ.

ಸ್ವಾಮಿ, ನಮ್ಮ ದೇಶದಲ್ಲಿ 100 ಕ್ಕೆ 70 ಜನರು ವ್ಯವಸಾಯದ ಮೇಲೆ ಅವಲಂಬಿಸಿದ್ದಾರೆ. ಹಾಗಿದ್ದರೂ ಸಹ ನಮಗೆ ಸಾಕಾಗುವಷ್ಟು ಆಹಾರ ಧಾನ್ಯ ಉತ್ಪನ್ನ ಮಾಡುತ್ತಿಲ್ಲ. ಅನೇಕ ಲೋಪ ದೋಷಗಳು ಇವೆ. ಗ್ರಾಮಗಳಲ್ಲಿರತಕ್ಕ ಎಲ್ಲ ಲೋಪ ದೋಷಗಳನ್ನು ಸಮಗ್ರವಾಗಿ ಪರಿಶೀಲನೆ ಮಾಡಿ ಯಾವ ಯಾವ ಕಾರಣಗಳಿಂದ ಈ ತರಹ ಅನಾನುಕೂಲವಾಗಿದೆ ಎಂಬುದನ್ನು ತಿಳಿದುಕೊಂಡು ಉತ್ಪನ್ನ ಹೆಚ್ಚು ಮಾಡುವುದು ಬಹಳ ಮುಖ್ಯವಾದ ಕೆಲಸ. ಸ್ವಾಮಿ, ಈಗಿರುವ ರೀತಿಯಲ್ಲಿ ಉತ್ಪನ್ನಕ್ಕೆ ಮುಖ್ಯವಾದ ಕಾರಣಗಳಾದ ಸಂಶೋಧನೆ, ತರಬೇತಿ ಮತ್ತು ವಿಸ್ತರಣ ಯೋಜನೆಗಳಿಗೆ ಹೊಂದಾಣಿಕೆ ಇಲ್ಲ. ಯಾವ ಒಂದು ಸಂಶೋಧನೆಯಾಗಲೀ ಅದರ ಪ್ರತಿಫಲ ರೈತನಿಗೆ ಮುಟ್ಟಬೇಕಾದರೆ ವಿಸ್ತರಣಾ ಯೋಜನೆ ಬಹಳ ಮುಖ್ಯವಾಗಿರಬೇಕು. ಸಂಶೋಧನೆಯ ಫಲಿತಾಂಶಗಳು ರೈತನ ಮನೆಗೆ ಮುಟ್ಟದೇ ಹೋದರೆ ರೈತನ ಮಕ್ಕಳು ತರಬೇತು ಹೊಂದಿದ್ದರೆ ಖಂಡಿತವಾಗಿಯೂ ಒಳ್ಳೆಯದಾಗುವುದಿಲ್ಲ. ಆದ್ದರಿಂದ ಸಂಶೋಧನಾ ಫಲಿತಾಂಶ ರೈತರಿಗೆ ಮುಟ್ಟುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂದು ಬಹಳ ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಈಗ ಪ್ರಪಂಚದ ಆಹಾರ ಉತ್ಪನ್ನದೊಡನೆ ನಮ್ಮ ದೇಶವು ಅಥವಾ ಇಂಡಿಯಾ ದೇಶದ ಆಹಾರ ಉತ್ಪನ್ನವನ್ನು ಹೋಲಿಸಿದರೆ ನಾವು ಬಹಳ ಹಿಂದೆ ಬಿದ್ದಿದ್ದೇವೆ ಎಂದು ನಾಚಿಕೆಯಿಂದ ಹೇಳಬೇಕಾಗಿದೆ. ವ್ಯವಸಾಯದಲ್ಲಿ 100 ಕ್ಕೆ 70 ಜನರು ನಿರತರಾಗಿದ್ದರೂ ಸಹ ಆಹಾರ ಉತ್ಪನ್ನದಲ್ಲಿ ಬಹಳ ಹಿಂದೆ ಬಿದ್ದಿದ್ದೇವೆ ಎಂದು ತಲೆ ತಗ್ಗಿಸಬೇಕಾಗಿದೆ.

ಈಗ ವ್ಯವಸಾಯದಲ್ಲಿ per acre ಏನು ಬೆಳೆಯುತ್ತೇವೆ ಎಂಬ ಅಂಕಿ ಅಂಶ ತೆಗೆದುಕೊಂಡರೆ ಒಟ್ಟು ಉತ್ಪನ್ನ ಜಾಸ್ತಿಯಾಗಿದ್ದರೂ ಕೂಡ per acre productivity ಬಹಳ ಕಡಿಮೆಯಾಗಿದೆ, ಕಡಮೆಯಾಗುತ್ತ ಇದೆ. ಇದನ್ನು ಗಣನೆಗೆ ತೆಗೆದುಕೊಂಡು ಇದರಲ್ಲಿರತಕ್ಕ ನ್ಯೂನತೆಗಳನ್ನು ಲೋಪ ದೋಷಗಳನ್ನು ಪರಿಹರಿಸುವುದಕ್ಕೆ ಒಂದು ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡಲು ಅವಕಾಶ ಮಾಡಿರುವುದು ಸ್ವಾಗತಾರ್ಹ ಎಂದು ಹೇಳಲು ಇಷ್ಟಪಡುತ್ತೇನೆ.

ಸ್ವಾಮಿ ಈ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಬೇಕಾದರೆ ಏನೇನು ವಿಷಯಗಳನ್ನು ಗಮನಕ್ಕೆ ತೆಗೆದು ಕೊಳ್ಳಲಾಗಿದೆ ಎಂಬುದನ್ನು ಹೇಳುತ್ತ ಮಾನ್ಯ ಮಂತ್ರಿವರ್ಯರು ಅಮೆರಿಕಾ ದೇಶದ ಲ್ಯಾಂಡ್ ಗ್ರ್ಯಾಂಟ್ ಕಾಲೇಜು ಮತ್ತು ಪರದೇಶಗಳಲ್ಲಿರತಕ್ಕ ಇತರ ಕಾಲೇಜುಗಳ ವ್ಯವಸ್ಥೆಯನ್ನು ತಿಳಿಸಿದರು. ನಾನಂತೂ ಅಮೆರಿಕಾ ಮತ್ತು ಇತರ ಪಾಶ್ಚಾತ್ಯ ದೇಶಗಳಲ್ಲಿ ಪ್ರವಾಸ ಮಾಡಿಲ್ಲ. ನನ್ನ ಸ್ನೇಹಿತರು ಅನೇಕರು ಹೋಗಿ ಬಂದವರು ಹೇಳಿದರು. ಆ ಲ್ಯಾಂಡ್ ಗ್ರ್ಯಾಂಟ್

(ಶ್ರೀ ಬಿ. ಎಲ್. ಗೌಡ)

ಕಾಲೇಜಿನ ಉದ್ದೇಶ ಮತ್ತು ಅದರ ಘಟನೆಗಳಿಗೂ ಇವತ್ತು ನಮ್ಮ ಮುಂದೆ ಇರುವ ಈ ಮಸೂದೆಯ ರೂಪು ರೇಖೆಗಳಿಗೂ ಬಹಳ ವ್ಯತ್ಯಾಸವಿದೆ ಎಂದು ಕೇಳುತ್ತಾ ಇದ್ದೇನೆ. ಪ್ರಥಮತಃ ಅಮೆರಿಕಾ ದೇಶದಲ್ಲಿ ಲ್ಯಾಂಡ್ ಗ್ರ್ಯಾಂಟ್ಸ್ ಕಾಲೇಜು ಪ್ರಾರಂಭವಾದಾಗ ನಮ್ಮ ಹಾಗೆಯೇ ಬಡತನ ಇತ್ತು, ಸರ್ಕಾರದಲ್ಲಿ ಹಣ ಇರಲಿಲ್ಲ, ಆದ್ದರಿಂದ ಸರ್ಕಾರ ಆ ಕಾಲೇಜಿಗೆ ಹಣ ಒದಗಿಸಲಾರದೇ ಜಮೀನನ್ನು ಬಿಟ್ಟುಕೊಟ್ಟರು. ಆ ಜಮೀನುಗಳನ್ನೆಲ್ಲಾ ಮಾರಿ ಅದರಿಂದ ಬಂದ ಹಣದಿಂದ ಅವರು ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಿದರು ಎಂದು ನಾನು ಕೇಳಿದ್ದೇನೆ. ಆ ವಿಶ್ವ ವಿದ್ಯಾನಿಲಯದಲ್ಲಿರತಕ್ಕ ಕೆಲವು ಘಟನೆಗಳನ್ನು ನಾವು ಇಲ್ಲಿ ಜಾರಿಗೆ ತಂದರೆ ನಮ್ಮ ದೇಶದ ಪರಿಸ್ಥಿತಿಗೆ ಅದು ಸರಿಹೋಗುವುದಿಲ್ಲ ಎಂದು ಹೇಳಬಯಸುತ್ತೇನೆ, ಯಾರು ವಿದ್ಯಾರ್ಥಿಗಳಿಗೆ ಬೋಧನೆ ಮಾಡುತ್ತಾರೆಯೋ ಅವರೇ ಫೈನಲ್ ಅಥಾರಿಟಿ ಎಂದು ಕೇಳುತ್ತೇವೆ. ಲೆಕ್ಚರರ್ಸ್ ಅಥವಾ ಟ್ಯೂಟರ್ಸ್ ಆಗಿ ಯಾರು ಹೇಳಿಕೊಡುತ್ತಾರೆಯೋ ಅವರೇ ವಿದ್ಯಾರ್ಥಿಗಳಿಗೆ ಪ್ರಮೋಷನ್ ಕೊಡಲು ಅರ್ಹರೇ, ಯೋಗ್ಯರೇ ಎಂದು ಕೇಳುತ್ತೇನೆ. ನಮ್ಮ ದೇಶದಲ್ಲಿ ಈಗಿರತಕ್ಕ ಪರಿಸ್ಥಿತಿಯಲ್ಲಿ ಈ ಒಂದು ವ್ಯವಸ್ಥೆಯನ್ನು ಜಾರಿಗೆ ತಂದರೆ ಬಹಳ ಕೆಟ್ಟ ಪರಿಣಾಮವಾಗುತ್ತದೆಂದು ಹೇಳುತ್ತೇನೆ. ಅಮೆರಿಕಾದಲ್ಲಿರತಕ್ಕ ಒಳ್ಳೆಯ ವ್ಯವಸ್ಥೆಯನ್ನು ಜಾರಿಗೆ ತರೋಣ, ಆದರೆ ಅಲ್ಲಿರತಕ್ಕದ್ದೆಲ್ಲವನ್ನು ಕುರುಡರಂತೆ ಜಾರಿಗೆ ತರುವುದನ್ನು ನಾನು ಒಪ್ಪುವುದಿಲ್ಲ. ಎಕ್ಸಾಮಿನೇಷನ್ ಸಿಸ್ಟಂ ಈ ಆಕ್ಟ್‌ನಲ್ಲಿ ಇಲ್ಲದೇ ಇದ್ದರೂ ಕೂಡ ರೂಲ್ಸ್ ಮಾಡಬೇಕಾದರೆ ಹೊರಗಿನ ಪರೀಕ್ಷಕರನ್ನು ಕರೆಸಿ ವಿದ್ಯಾರ್ಥಿಗಳ ಅರ್ಹತೆಯ ಮಟ್ಟ ಅಳತೆ ಮಾಡುವ ವ್ಯವಸ್ಥೆ ಮಾಡಬೇಕು. ಇಲ್ಲದೇ ಹೋದರೆ ಬಹಳ ಅನ್ಯಾಯಕ್ಕೆ ಒಳಗಾಗುತ್ತೇವೆ ಎಂದು ವ್ಯವಸಾಯ ಮಂತ್ರಿಗಳಲ್ಲಿ ಹೇಳಲಿಚ್ಛಿಸುತ್ತೇನೆ.

Board of Regents ಅಂತ ಹೇಳಿ ಬಹಳ ಮುಖ್ಯವಾದ ಒಂದು ಬೋರ್ಡು ಇದೆ. ಇದರಲ್ಲಿ ಮೂರನ್ನು ಬೇಕಾದರೂ ನಾಮಿನೇಷನ್ ಮಾಡತಕ್ಕ ಅಧಿಕಾರವನ್ನು ಸರ್ಕಾರದವರು ಹೊಂದಿದ್ದಾರೆ ಈಗಾಗಲೇ ಮಾನ್ಯ ಸ್ನೇಹಿತರು ಹೇಳಿದ ಹಾಗೆ ಪ್ರಜಾಪ್ರಭುತ್ವದಲ್ಲಿ ಇದು ನ್ಯಾಯವಾದುದಲ್ಲ. ಯಾವುದಾದರೂ ಒಂದು ಕೆಲಸ ಮಾಡಬೇಕಾದರೆ ಅಮೇರಿಕಾ ದೇಶದ ಮಾದರಿ, ಮದರಾಸಿನ ಮಾದರಿ, ಬೊಂಬಾಯಿನ ಮಾದರಿ ಎಂದು ಹೇಳಿ ಅದನ್ನು ಅನುಸರಿಸುವುದಕ್ಕೆ ಪ್ರಯತ್ನ ಮಾಡುತ್ತೀರಿ. ಆದರೆ ಅಮೇರಿಕಾ ದೇಶದಲ್ಲಿ ನಾಮಕರಣ ಮಾಡಲ್ಪಟ್ಟ ವೈಸ್ ಛಾನ್ಸ್‌ಲರ್ ಇರುವುದಿಲ್ಲ. ಆದ್ದರಿಂದ ಇಲ್ಲೂ ಕೂಡ ಚುನಾಯಿಸಲ್ಪಟ್ಟ ವೈಸ್‌ಛಾನ್ಸ್‌ಲರ್ ಇರುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

ಬಾಕಿ ವಿಶ್ವವಿದ್ಯಾನಿಲಯಗಳಲ್ಲಿರುವ ಹಾಗೆ ರಿಜಿಸ್ಟರ್ಡ್ ಗ್ರ್ಯಾಜ್ಯುಯೇಟ್ಸ್ ಚುನಾಯಿತರಾಗಿ ಬರುವಂತೆ ವ್ಯವಸ್ಥೆ ಮಾಡಬೇಕು ಎಂದು ಹೇಳಿ ಸಲಹೆ ಮಾಡುತ್ತೇನೆ.

ಇದೂ ಅಲ್ಲದೆ ಈಗಾಗಲೇ ನಮ್ಮ ನಾಯಕರಾದ ಶಿವಪ್ಪನವರು ಹೇಳಿದ ಹಾಗೆ ಇಲ್ಲಿ ಸೆನೆಟ್ಟಿಗೆ ಅವಕಾಶ ಮಾಡಿಕೊಡಬೇಕು. ಈಗಿರುವ ಪರಿಸ್ಥಿತಿಗೆ ಇದು ಹೊಂದಾವಣಿಕೆಯಾಗುವುದಿಲ್ಲ. ಇನ್ನು ಈ ಪ್ರೋಛಾನ್ಸಲರ್ ಹುದ್ದೆ ಅನಾವಶ್ಯಕ. ಇದು ಒಂದು ಡೆಕೋರೇಟಿವ್ ಪೋಸ್ಟಾಗಿದೆ. ಇದನ್ನು ವಜಾ ಮಾಡಬೇಕೆಂದು ಹೇಳುತ್ತೇನೆ.

ಒಟ್ಟಿನಲ್ಲಿ ವ್ಯವಸಾಯದ ಈ ಮಸೂದೆಯನ್ನು ತಂದಿರತಕ್ಕ ಮುಖ್ಯ ಉದ್ದೇಶ ಬಹಳ ಅಮೋಘವಾದದ್ದು. ಇದರಿಂದ ನಮ್ಮ ದೇಶದ ರೈತರಿಗೆ ಹೆಚ್ಚು ಬೆಳೆ ತೆಗೆಯಲು ತೀವ್ರ ಕಾರ್ಯಕ್ರಮಕ್ಕೆಗೊಂಡು ರೈತರ ಬೆಳೆಗೆ ಒಂದು ಹೆಚ್ಚಿನ ಬೆಲೆ ಸಹಾ ದೊರೆಯುವಂತೆ ಒಂದು ಮಾರ್ಕೆಟ್ಟನ್ನು ಒಳ್ಳೆ ಬೆಳೆ ತೆಗೆಯಲು ಹೆಚ್ಚಿನ ಸಂಶೋಧನೆಗಳನ್ನು ನಡೆಸಿ, ನಮ್ಮ ರಾಜ್ಯದಲ್ಲಿ ಒಳ್ಳೆ ಉತ್ತಮ ರೀತಿಯ ವ್ಯವಸಾಯ ನಡೆಸಲು ಅನುಕೂಲವಾಗುವಂತೆ ಈ ವಿಶ್ವವಿದ್ಯಾನಿಲಯ ಕೆಲಸ ಮಾಡಬೇಕೆಂದು ಹೇಳಿ ನಾನು ಈ ಮಸೂದೆಯನ್ನು ಸ್ವಾಗತಿಸುತ್ತೇನೆ.

[Mr. Speaker in the Chair]

† ಶ್ರೀ ಎಂ. ಪಿ. ಶೆಟ್ಟಿ (ಚಿಕ್ಕೋಡಿ).—ಸ್ವಾಮಿ, ನಮ್ಮ ಮುಂದಿರತಕ್ಕ ಯೂನಿವರ್ಸಿಟಿ ಆಫ್ ಅಗ್ರಿಕಲ್‌ಚರಲ್ ಸೈನ್ಸ್ ಬಿಲ್ಲು ಈ ದೇಶಕ್ಕೆ ಸಂಬಂಧಪಟ್ಟ ಒಂದು ಮುಖ್ಯ ಉದ್ಯೋಗವನ್ನು ಕುರಿತ ವಿಷಯಕ್ಕೆ ಸಂಬಂಧಿಸಿರುವಂತೆ ಈ ಒಂದು ಯೂನಿವರ್ಸಿಟಿಯನ್ನು ಸ್ಥಾಪಿಸಬೇಕೆಂಬುದೇನೋ ಒಂದು ಒಳ್ಳೆಯದೇ ಅಂತ ಈಗ ಕಂಡುಬಂದರೂ ಕೊನೆಗೆ ಇದರಿಂದ ದೇಶಕ್ಕೆ ಒಂದು ಕಠಿಣ ಪರಿಸ್ಥಿತಿ ಒದಗಬಹುದೇನೋ ಅನ್ನತಕ್ಕ ಸಂಶಯ ಬಂದಿದೆ. ಯಾರೋ ಒಬ್ಬರು ಮಂತ್ರಿಗಳು ಯಾವಾಗಲೋ ಪರದೇಶಕ್ಕೆ ಹೋಗಿದ್ದಂಥ ಕಾಲದಲ್ಲಿ ಅಲ್ಲಿ ಯಾವರೀತಿ ನಡೆಯುತ್ತಿದೆ ಎಂಬುದನು

ನೋಡಿಕೊಂಡು ಬಂದು ಇಲ್ಲಿಯೂ ಹಾಗೇ ಮಾಡಬೇಕೆಂದು ಈ ಕಾರ್ಯಗಳನ್ನು ಒಂದು ಅಂಥತನದಲ್ಲಿ ನಡೆಸುತ್ತಿದ್ದಾರೆಂತ ಹೇಳಬೇಕಾಗಿದೆ. ನಮ್ಮ ದೇಶದಲ್ಲೂ ಒಕ್ಕಲುತನದಲ್ಲಿರತಕ್ಕವರು ಈ ಉದ್ಯಮವನ್ನು ಇಲ್ಲಿಗೆ ಮೂರು ಸಾವಿರ ವರ್ಷಗಳಿಂದಲೂ ನಡೆಸಿಕೊಂಡು ಬಂದಿದ್ದಾರೆ. ಆದರೆ ಇತ್ತೀಚೇಗೇ, ಎಂದು ವ್ಯವಸಾಯಕ್ಕೆ ಸಂಬಂಧಪಟ್ಟ ಯೂನಿವರ್ಸಿಟಿಗಳನ್ನೇ ಸ್ಥಾಪಿಸುವುದಕ್ಕೆ ಪ್ರಾರಂಭವಾಯಿತೋ ಅಂದಿನಿಂದೀಚೆಗೆ ಜನರಿಗೆ ಈ ಒಕ್ಕಲುತನ ಸೊಗಸದೆ ಇದು ಸರಿಯಾಗಿ ನಡೆಯುತ್ತಿಲ್ಲ. ದನಗಳನ್ನು ಕಟ್ಟತಕ್ಕ ಮತ್ತು ಕಾಪಾಡತಕ್ಕ ವಿಚಾರದಲ್ಲಿ ಮಹಾತ್ಮ ಗಾಂಧಿಯವರು ತಮ್ಮದೇ ಆದ ಒಂದು ರೀತಿಯಲ್ಲಿ ಅವರು ಒಂದು ಆಶ್ರಮವನ್ನೇ ಕಟ್ಟಿ ಅಲ್ಲಿ ಒಳ್ಳೇ ಹಾಲು ಕೊಡತಕ್ಕ ಹಸುಗಳನ್ನು ಸಾಕಿ ಅಂಥಾ ಒಳ್ಳೇ ಹಾಲು ಕೊಡತಕ್ಕ, ಒಳ್ಳೆ ಕರುಗಳನ್ನು ಕೊಡತಕ್ಕ ಪೀಳಿಗೆಯನ್ನು ತಯಾರಿಸಿ ಅಭಿವೃದ್ಧಿಗೊಳಿಸುತ್ತಿದ್ದರು. ಹೀಗೆ ಅವರು ಈ ಒಕ್ಕಲುತನ ಮಾಡತಕ್ಕವರ ಬೆಳೆಗಳ ಬಗ್ಗೆ ಕೂಡ ಅಲ್ಲಲ್ಲೇ ಸಾಕಷ್ಟು ಶೋಧನಾ ಕೇಂದ್ರಗಳನ್ನೂ ತಯಾರಿಸಿದ್ದರು ಎಂಬುದಾಗಿ ನಾವು ಕೇಳುತ್ತೇವೆ. ಈ ದಿವಸ ದೇಶದಲ್ಲಿ ಎಲ್ಲರೂ ಒಕ್ಕಲುತನದ ವಿಚಾರ ಮಾಡತಕ್ಕವರೇ ಆಗಿದ್ದಾರೆ—ಆದರೆ ಅವರಿಗೆ ದನಗಳನ್ನು ಸಾಕತಕ್ಕ ವಿಚಾರವೂ ಗೊತ್ತಿಲ್ಲ; ಒಂದೆಕರೆ ಜಮೀನು ಸಹ ಇರುವುದಿಲ್ಲ. ವ್ಯವಸಾಯದಲ್ಲಿ ಇತ್ತೀಚಿಗೆ ಬಹಳ ಸುಧಾರಣೆ ಆಗಿದೆ ಎಂದು ಹೇಳುತ್ತಿದ್ದಾರೆ. ಆದರೆ ಇಲ್ಲಿ—" Investigations conducted by experts in agricultural Sciences into relative agricultural productivity as measured by yields of crops in India and various other countries, have shown that the per acre yields in India are low compared to the yields in other countries." ಎಂದು ಹೇಳಿರತಕ್ಕದ್ದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ರೋಗವನ್ನು ಒಪ್ಪಿಕೊಂಡರೆ ಔಷಧಿಯನ್ನು ಕಂಡು ಹಿಡಿದ ಹಾಗೆ ಆಗಲಿಲ್ಲ. ಈ ಬಾಬಿಗಾಗಿ ಖರ್ಚು ಮಾಡುತ್ತಿರುವ ಹಣದಲ್ಲಿ ಸುಮಾರು ಎರಡು ಕೋಟಿ ಆರು ಲಕ್ಷ ರೂ.ಗಳು ಕಟ್ಟಡದ ಕೆಲಸಕ್ಕಾಗಿ ಖರ್ಚಾಗುತ್ತಿದೆ. ಉಳಿದ ಸಾಹಿತ್ಯ ಇತ್ಯಾದಿಗಳಿಗಾಗಿ ಸುಮಾರು 25 ಲಕ್ಷ ರೂ.ಗಳು ಖರ್ಚಾಗುತ್ತಿದೆ. ಅಂತೂ ಅದೇನೋ ಈ ದಿವಸ ನಮ್ಮ ರಾಜ್ಯದಲ್ಲಿ ಈ ಕಟ್ಟಡಗಳನ್ನು ಕಟ್ಟಿಸತಕ್ಕ ಒಂದು ಹವ್ಯಾಸ ಪೂರಾ ಬೆಳೆದು ಬಂದಿದೆ. ಮಹಾತ್ಮ ಗಾಂಧಿಯವರು ಕೇವಲ ಒಂದು ಕುಟೀರವನ್ನು ಕಟ್ಟಿಸಿಕೊಂಡಿದ್ದು ಅನೇಕ ಸ್ತುತ್ಯಾರ್ಹವಾದಂಥಾ ಕೆಲಸಗಳನ್ನು ಮಾಡಿದರು. ಹಾಗಿರುವಾಗ ನಮಗೇಕೆ ಬೇಕು ಈ ದೊಡ್ಡ ದೊಡ್ಡ ಕಲ್ಲು ಕಟ್ಟಡಗಳು ? ನಮಗೆ ಇವುಗಳ ಜರೂರಿಲ್ಲ ಎಂತ ಹೇಳುತ್ತೇನೆ. ಈ ದಿವಸ ನಾವು ಈ ಕಟ್ಟಡಗಳ ಮೇಲೆ ಚೆಲ್ಲುತ್ತಿರುವ ಹಣಕ್ಕೆ ನೂರಕ್ಕೆ 5 ರಂತೆ ಬಡ್ಡಿ ಹಾಕಿದರೂ ವರ್ಷಕ್ಕೆ ಹತ್ತು ಲಕ್ಷ ರೂ.ಗಳ ಬಡ್ಡಿಯಾಗುತ್ತದೆ. ಇಷ್ಟೊಂದು ದುಡ್ಡನ್ನು ಹೀಗೆ ಹಾಳು ಮಾಡುವುದರ ಬದಲು ಈ ಹಣವನ್ನೇ ಶಾಸ್ತ್ರೀಯವಾದ ಉಪಕರಣಗಳಿಗೆ ಹಾಗೂ ಅಧ್ಯಾಪಕ ವರ್ಗಕ್ಕೆ ಉದಾರವಾದ ಸಂಬಳ ಸಾರಿಗೆಗಳನ್ನು ಕೊಡುವುದಕ್ಕೆ ಬಳಸಲಿಕ್ಕೆ ಬರುತ್ತದೆ. ಈ ದಿವಸ ನಮ್ಮ ಒಕ್ಕಲುತನದ ಖರ್ಚು ಹಿಂದೂಸ್ಥಾನದಲ್ಲಿ ಒಂದು ಎಕರೆಗೆ 50-60 ರೂ.ಗಳು ಇರುತ್ತದೆ. ಇಷ್ಟು ಅಲ್ಪ ಹಣ ಖರ್ಚುಮಾಡಿ ನಾವು ಎಕರೆಗೆ 2-3 ಸಾವಿರ ರೂ.ಗಳ ಬೆಳೆಯನ್ನು ಅಪೇಕ್ಷಿಸಿದರೆ ಅದು ಹೇಗೆ ಸಾಧ್ಯವಿದೆ ? ಇದು ಖಂಡಿತ ಶಕ್ಯವಿಲ್ಲ. ಆದರೂ ಬಿಲ್ಲಿನಲ್ಲಿ better farming practices ಎಂತ ಹೇಳಿದ್ದಾರೆ. ಈ ವಿಚಾರದಲ್ಲೇ ಹೇಳುವುದಾದರೆ ನನಗೆ ತಿಳಿದಿರುವಂತೆ ನಮ್ಮ ಪ್ರದೇಶದಲ್ಲಿ ಸುಮಾರು ನೂರು ವರ್ಷಗಳಿಂದಲೂ ನಾವೆಲ್ಲರೂ ತಂಬಾಕ ಬೆಳೆಯನ್ನು ಬೆಳೆಯುತ್ತಿದ್ದೇವೆ. ಇಲ್ಲಿಗೆ 40-50 ವರ್ಷಗಳಿಂದಲೂ ಈ ಬೆಳೆಯ ಇಂಪ್ರೂವ್‌ಮೆಂಟಿನ ಬಗ್ಗೆ ಯಾವ ಸೈಂಟಿಫಿಕ್ ರಿಸರ್ಚೂ ನಡೆದಿಲ್ಲ. ನಮಗೆ ಯಾರಿಗೂ ಈ ತನಕ ಈ ಬೆಳೆಯ ವಿಚಾರದಲ್ಲಿ ಹೆಚ್ಚಿನ ಜ್ಞಾನ ಮುಟ್ಟಿಲ್ಲ. ಈ ಕಾಲೇಜುಗಳಲ್ಲಿ ಡಿಗ್ರಿ ಪಡೆದು ಬಂದು ಅಧಿಕಾರಕ್ಕೆ ಬಂದ ಆ......

Mr. DEPUTY SPEAKER.—I suppose that the hon. member is supporting the Bill.

Sri M. V. SHETTY.—I am not supporting in that sense, Sir. ಈ ಬಿಲ್ಲಿನ ಬಗ್ಗೆ ನನಗೆ ಒಪ್ಪಿಗೆಯಿದ್ದರೆ ಈ ದುಡ್ಡು ಖರ್ಚಾಗತಕ್ಕ ವಿಧಾನದಲ್ಲಿ ನನಗೆ ಒಪ್ಪಿಗೆಯಿಲ್ಲ. ಇಂಡಿಯಾ ಸರ್ಕಾರದವರೇನೊ ಈ ದಿವಸ ಇದಕ್ಕೆ ಹಣ ಕೊಡುತ್ತೇವೆಂದು ಹೇಳಿದ್ದಾರೆಂದು ಇವರು ಹೀಗೆಲ್ಲ ಖರ್ಚು ಮಾಡುತ್ತಿದ್ದಾರೆ. ಹತ್ತು ವರ್ಷ ಕಳೆದ ಮೇಲೆ ನಾವೂ – ನೀವೂ ಒಂದು ಕಡೆ ಭೇಟಿ ಮಾಡಲು ಅವಕಾಶವಿದ್ದರೆ, ಈಗ ಇವರು ಇಷ್ಟೆಲ್ಲಾ ಹೇಳುತ್ತಿರುವ ಈ ಕಾಲೇಜುಗಳ ಪರಿಣಾಮವೇನಾಗಿರುತ್ತೆ, ಜನರಿಗೆ ಎಷ್ಟರ ಮಟ್ಟಿಗೆ ಅನುಕೂಲ ಮುಟ್ಟಿರುತ್ತದೆ ಎಂಬುದನ್ನು ವಿಚಾರಮಾಡೋಣ. ಈ ದಿವಸ ದೇಶದಲ್ಲಿರತಕ್ಕ ಈ ಒಕ್ಕಲುತನದ ಜನರಲ್ಲಿ ನೂರಕ್ಕೆ 50ರಷ್ಟು ಜನರ ಪ್ರಾಬ್ಲಮ್ಮೇ ಬೇರೆ. ಅನೇಕ ಜನಗಳಿಗೆ ಒಂದು ಎತ್ತಿದ್ದರೆ, ಇನ್ನೊಂದು ಎತ್ತಿಲ್ಲ; ಎತ್ತಿದ್ದರೆ

(ಶ್ರೀ ಎಂ. ವಿ. ಶೆಟ್ಟಿ)

ಅವನಿಗೊಂದು ಚಕ್ತಿಯಿಲ್ಲ, ಒಂದು ಸಲಿಕೆ ಇಲ್ಲ, ಗುದ್ದಲಿ ಇಲ್ಲ. ಹೀಗಿರುವ ಸನ್ನಿವೇಶದಲ್ಲಿ ಈ ರೀತಿ ದೊಡ್ಡ ದೊಡ್ಡ ಬಿಲ್ಡಿಂಗುಗಳು, ಈ ದೊಡ್ಡ ದೊಡ್ಡ ಅಫೀಸರುಗಳು ಜಾಸ್ತಿ ಆದ ಮಾತ್ರಕ್ಕೆ ಇವುಗಳಿಂದ ಒಕ್ಕಲುತನದವರ ಪ್ರಾಬ್ಲಮ್ಮನ್ನು ಸಾಲ್ವ್ ಮಾಡಲು ಹೇಗೆ ಸಾಧ್ಯವಾಗುತ್ತದೆಂಬುದು ನನಗೆ ಗೊತ್ತಾಗುತ್ತಿಲ್ಲ. ಹಿಂದೆ ಎಲ್ಲರೂ ಹೇಳಿರತಕ್ಕದ್ದನ್ನೇ ಈಗಲೂ ಎಲ್ಲರೂ ಹೇಳುತ್ತಿದ್ದಾರೆ "to help to increase productivity ..ಹೀಗೆಲ್ಲ ಹೇಳಿದ್ದಾರೆ. ಈ rapid increase ವಿಚಾರದಲ್ಲಿ ನನಗೆ ಖಂಡಿತ ನಂಬಲಿಕ್ಕೆ ಬರುವುದಿಲ್ಲ. ನಾವು ಇಷ್ಟೆಲ್ಲ ಬಡಿದಾಡಿದರೂ ಈ ದಿವಸ ನಮಗೆ ಹೊಟ್ಟೆ ತುಂಬ ಆಹಾರವಿದೆಯೇ ಎಂಬುದನ್ನು ನೋಡಿದರೆ ಅದೂ ಕಾಣುವುದಿಲ್ಲ. ನಾವು ಎರಡು ಪಂಚವಾರ್ಷಿಕ ಯೋಜನೆಗಳನ್ನು ಮುಗಿಸಿ ಈಗ ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿದ್ದರೂ ಇನ್ನು ಅರೆಹೊಟ್ಟೆ ಅನ್ನ! ನಾವಿನ್ನೂ ಆರು ಪಂಚವಾರ್ಷಿಕ ಯೋಜನೆ ಕಳೆಯುವ ತನಕ ಬೇಕಾದರೂ ಹೀಗೇ ಅರೇ ಹೊಟ್ಟೆಯಲ್ಲಿರಬಲ್ಲೆವು. ಇ ಥಾ ಪರಿಸ್ಥಿತಿಯಲ್ಲಿರುವಾಗ ನಾವು ಈ ಕಟ್ಟಡಗಳಿಗಾಗಿ ಹಣವನ್ನು ಖಂಡಿತ ಖರ್ಚು ಮಾಡಬಾರದು. ಗಾಂಧೀಜಿಯವರ ನೂರು ಮಾತುಗಳನ್ನು ಹೇಳುವುದರ ಬದಲು ಅವರು ಆಚರಿಸಿದ ಒಂದೊಂದು ಆಚರಣೆಯನ್ನು ನಾವು ಜಾರಿಗೆ ತಂದರೆ ಸಾಕು. ಅವರು ಕೇವಲ ಕುಟೀರದಲ್ಲಿದ್ದುಕೊಂಡೇ ಒಳ್ಳೆಯ ಜ್ಞಾನ ಪ್ರಸಾರವನ್ನು ದೇಶಾದ್ಯಂತವೂ ಮಾಡಲಿಲ್ಲವೇನು ? ಈ ದಿವಸ ಪೂನಾದಲ್ಲಿ ಈ ಒಂದು ಕಾಲೇಜಿದೆ. ಈ ದಿವಸ ನಮ್ಮ ದೇಶದಲ್ಲಿರತಕ್ಕ ಒಕ್ಕಲುತನದ ಜನರಿಂದ ಈ ಕಾಲೇಜಿನವರು ತಿಳಿದುಕೊಳ್ಳಬೇಕಾದ ಅನೇಕ ವಿಚಾರಗಳಿವೆ. ಆದರೂ ಕಾಲೇಜಿನಲ್ಲಿರತಕ್ಕವರು ವ್ಯವಸಾಯದಲ್ಲಿ ಪದವೀಧರರು !

ಈಗ ಈ ಬಿಲ್ಲಿನಲ್ಲಿ Admission to University ವಿಚಾರ ಹೇಳಿದ್ದಾರೆ. ಈ ದಿವಸ ದೇಶದಲ್ಲಿ ಈ ಒಕ್ಕಲುತನ ಮಾಡತಕ್ಕವನು ಶೂದ್ರ, ಈತನಿಗೆ ಬೇರೆ ಅಧಿಕಾರಗಳನ್ನು ಬಿಟ್ಟುಕೊಡಬಾರದು ಅಂತ ಹೇಳುತ್ತಿದ್ದಾರೆ. ಆದರೆ ಇನ್ನು ಮುಂದೆ ಈ ಕಾಲೇಜಿನಲ್ಲಿ ಯಾರಿಗೆ ಈ ಸೀಟುಗಳು ಹೋಗುತ್ತವೆಯೋ ಗೊತ್ತಾಗುವುದಿಲ್ಲ. ಹಾಗೊಂದು ವೇಳೆ ಈ ಕಾಲೇಜಿನ ಸೀಟುಗಳು ಒಕ್ಕಲುತನದವರಿಗೆ ಜಾಸ್ತಿಯಾಗಿ ಹಂಚಿದ ಪಕ್ಷದಲ್ಲಿ ಮುಂದೆ ಅದೇ ಒಂದು ದೊಡ್ಡ ಗೊಂದಲವೆದ್ದು ಅನಂತರ ಆ ಸೀಟುಗಳು ಯಾರಿಗೆ ಹೋಗುತ್ತವೆಯೋ—ಏನಾಗುತ್ತದೋ ಗೊತ್ತಾಗುವುದಿಲ್ಲ. ಮುಂದೆ ಕೇವಲ ಮೆರಿಟ್‌ಗೆ ಹೆಚ್ಚಿನ ಪ್ರಶಸ್ತಿ ಕೊಡಬೇಕೆಂತ ಹೇಳುತ್ತಿರುವಾಗ ಈ ಸೀಟುಗಳೆಲ್ಲ ನಾಳೆ ಈ ವ್ಯವಸಾಯವೆಂದರೇನು ಎಂಬುದನ್ನು ಒಂದು ದಿನಕ್ಕೂ ನೋಡದಿರುವ - ಮಾಡದಿರುವ ಜನಗಳಿಗೆ ಸಿಕ್ಕಿ ಅವರು ನಾಳೆ ಮತ್ತೆ ಸೂಟ್-ಬೂಟ್ ಹಾಕಿಕೊಂಡು ಸಾಹೇಬರಾಗಿ ಬಂದು ನಮ್ಮ ಮೇಲೆ ಪ್ರಭಾವ ಬೀರುವುದಕ್ಕೆ ಬರುತ್ತಾರೆ !.

[MR. SPEAKER IN THE CHAIR.]

ಕ್ಲಾಜುಗಳ ಬಗ್ಗೆ ಹೇಳಬೇಕಾದರೆ definitions ನಲ್ಲಿ "agriculture" ಎಂದು ಪದ ಬಳಸಿದ್ದಾರೆ. Agriculture is already defined in Tenancy Acts and other Acts. ಇದು University of Agricultural Sciences ಗೆ ಸಂಬಂಧಪಟ್ಟ ವಿಧೇಯಕವಾದುದರಿಂದ "Agriculture Science means..." ಎಂದು ಹೇಳಿದ್ದರೆ ಚೆನ್ನಾಗಿತ್ತು.

4-00 P. M.

ಅದೇ ರೀತಿ powers of university ಎನ್ನುವುದರಲ್ಲಿ 4 (b) ಸಬ್ ಕ್ಲಾಜ್‌ನಲ್ಲಿ "carried out research in the University or in an Institution recognised in this behalf by the University, as may be prescribed" ಎಂದು ಇದೆ. ಒಕ್ಕಲುತನದಲ್ಲಿ ಅನುಭವವಿರುವ ಖಾಸಗಿಯವರು ಕೂಡ ಸಂಶೋಧನೆ ಮಾಡುವುದರಲ್ಲಿ ಪ್ರವೀಣರಾಗಿರಬಹುದು. ಅವರು ಒಕ್ಕಲುತನವನ್ನು ಮೊದಲಿನಿಂದಲೂ ನಡೆಸಿಕೊಂಡು ಅದರಲ್ಲಿ ಸುಧಾರಣೆ ಮಾಡಿಕೊಂಡು ಹೊಸ ಪ್ರಯೋಗಗಳನ್ನೂ ಮಾಡಿರುತ್ತಾರೆ. ಇಂಥವರಿಗೂ ಸಹ ಡಾಕ್ಟರೇಟ್ ಪ್ರಶಸ್ತಿಯನ್ನು ಕೊಡುವುದಕ್ಕೆ ಅವಕಾಶವಿರಬೇಕು . ಆ ದೃಷ್ಟಿಯಿಂದ ಅದನ್ನೂ ಇಲ್ಲಿ ಸೇರಿಸಬೇಕು.

ಇದರಲ್ಲಿ ಪ್ರೊ-ಛಾನ್ಸಲರ್ ಇರಬೇಕೆಂದಿದೆ, ಅದು ಇರದಿದ್ದರೆ ಬಹಳ ಒಳ್ಳೆಯದಾದೀತು ಎಂದು ಅನ್ನಿಸುತ್ತದೆ. ಇಷ್ಟು ಮಾತ್ರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಚಂದ್ರಶೇಖರಪುರ)—ಸ್ವಾಮಿ, ಈ ಮಸೂದೆಯ ಮೇಲಿನ ಚರ್ಚೆಗೆ ಇರುವ ಕಾಲಾವಕಾಶವನ್ನು ಅರ್ಧ ಗಂಟೆ ಹೆಚ್ಚುಮಾಡಬೇಕು ಎಂದು ಹೇಳುತ್ತೇನೆ.

Mr. SPEAKER.—I find so many members are desirous of participating. Normally, the time taken will expire at 4-30 P. M. A suggestion has been made that it may be extended by half an hour.

Sri C. J. MUCKANNAPPA (Sira .—The rest of the day must be devoted to the Bill. Amendments are there.

Mr. SPEAKER.—I appreciate the anxiety of the members very much.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಎರಡು ಕಡೆಯಲ್ಲಿಯೂ ಮಾತನಾಡತಕ್ಕ ಸದಸ್ಯರಿರುವುದರಿಂದ ದಿವಸದ ಆಖೈರುವರೆಗೂ ಕಾಲಾವಕಾಶವನ್ನು ಹೆಚ್ಚಿಸಬಹುದು ಸ್ವಾಮಿ.

Mr. SPEAKER.—I suppose that it is the sense of the House. I think members are all agreed on this Bill, with some little modifications here and there. I do not think anybody is opposing this Bill.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ) —ಸ್ವಾಮಿ, ವ್ಯವಸಾಯ, ಪಶುಸಂಗೋಪನ, ಮೀನುಗಾರಿಕೆ, ತೋಟಗಾರಿಕೆ ಇವುಗಳನ್ನೆಲ್ಲ ಒಟ್ಟಿಗೆ ಸೇರಿಸಿ, ನಮ್ಮ ಮಕ್ಕಳನ್ನು ಬಹಳ ಬುದ್ಧಿವಂತರನ್ನಾಗಿ ಮಾಡಿ ಅವರ ಕೈಯಲ್ಲಿ ಈ ದೇಶದಲ್ಲಿ ಹೆಚ್ಚಿಗೆ ಆಹಾರ ಬೆಳೆಯುವುದಕ್ಕೆ, ಗೋಸಂಪತ್ತನ್ನು ಅಭಿವೃದ್ಧಿಮಾಡುವುದಕ್ಕೆ, ಮೀನುಗಾರಿಕೆಯನ್ನು ಉತ್ತಮ ಪಡಿಸುವುದಕ್ಕೆ, ತೋಟಗಾರಿಕೆ ಮಾಡುವುದಕ್ಕೆ ಅನುಕೂಲಮಾಡಿ, ಅದರಲ್ಲಿ ಸಂಶೋಧನೆ ಮತ್ತೊಂದು, ಮಗದೊಂದು ಮಾಡಬೇಕೆಂದು ಒಂದು ವಿಶ್ವವಿದ್ಯಾನಿಲಯವನ್ನು ಮಾಡಬೇಕೆಂದು ಸರ್ಕಾರದವರು ಮೂರನೆಯ ಪಂಚವಾರ್ಷಿಕ ಯೋಜನೆಯ ಎರಡನೆಯ ವರ್ಷದಲ್ಲಿ ಈ ಒಂದು ವಿಧೇಯಕವನ್ನು ನಮ್ಮ ಮುಂದೆ ತಂದಿಟ್ಟಿದ್ದಾರೆ. ಈ ವಿಶ್ವವಿದ್ಯಾನಿಲಯ ಬೇಕೇ, ಬೇಡವೇ ಎನ್ನುವ ಕಾಲದಲ್ಲಿ, ನಾವು ಇವೊತ್ತಿನ ದಿವಸ ಇರತಕ್ಕ ವಾಸ್ತವ ಪರಿಸ್ಥಿತಿಯನ್ನು ಕೂಡ ಸ್ವಲ್ಪ ಗಣನೆಗೆ ತೆಗೆದುಕೊಳ್ಳುವುದು ಒಳ್ಳೆಯದು. ಈ ವಿಶ್ವವಿದ್ಯಾನಿಲಯದಲ್ಲಿ ಬರತಕ್ಕ ನಾಲ್ಕು ಅಂಶಗಳೇನಿವೆ ಅವು ಎಷ್ಟರಮಟ್ಟಿಗೆ ಈ ರಾಜ್ಯದಲ್ಲಿ ಇವೊತ್ತು ಕೆಲಸಮಾಡುತ್ತಿವೆ, ಎಷ್ಟರಮಟ್ಟಿಗೆ ಅವು ಸಾಧನೆ ಮಾಡಿವೆ, ಅಲ್ಲಿ ಮಾಡಿರುವ ಸಾಧನೆ ಏನು, ಅದಕ್ಕೆ ಸಹಾಯವಾಗಲು ಈ ವಿದ್ಯಾಭ್ಯಾಸ ಬೇಕೇ, ಬೇಡವೇ, ಇಲ್ಲಿ ಈಗಾಗಲೇ ಬೇಕಾದಷ್ಟು ಮಾಡಿದ್ದೇವೆ, ಇನ್ನೂ ಮುಂದೆ ಹೋಗಬೇಕೇ ಬೇಡವೇ, ಎಂಬುದನ್ನೆಲ್ಲ ಯೋಚನೆಮಾಡಿ ಈ ದಾರಿಯಲ್ಲಿ ಇದನ್ನು ಒಪ್ಪಬೇಕೇ, ಬೇಡವೇ ಎಂದು ನಾನಾದರೂ ಯೋಚನೆ ಮಾಡುತ್ತಿದ್ದೇನೆ.

ಸ್ವಾಮಿ, ವಿಧೇಯಕದಲ್ಲಿ ಒಂದು ಅಕ್ಷರವನ್ನು ಬಿಡದಹಾಗೆ ಓದಿ ತಾವು ತಿಳಿದುಕೊಂಡಿದ್ದೀರಿ. ನಾನೂ ಓದಿ ತಿಳಿದುಕೊಂಡಿದ್ದೇನೆ. ತಾವು ಇಲ್ಲಿ ಭಾಷಣ ಮಾಡುವುದಕ್ಕೆ ಅವಕಾಶವಿಲ್ಲದೆ ಇರುವುದರಿಂದ ಸುಮ್ಮನೆ ಇದ್ದೀರಿ. ಈ ವಿಧೇಯಕದಲ್ಲಿ ಯಾವ ಯಾವ ಕಲಮಿನಲ್ಲಿ ಏನೇನಿದೆ ಎಂದು ತಿಳಿದುಕೊಂಡಿದ್ದೇನೆ. ಸ್ವಾಮಿ, ನಮ್ಮ ಸ್ನೇಹಿತರಾದ ಶ್ರೀಮಾರ್ ಅಣ್ಣಾರಾಯರ ಜೊತೆಯಲ್ಲಿ ಸೇ ನಾನು statement of objects and reasons, financial memorandum ನಿಂದ ಪ್ರಾರಂಭ ಮಾಡುತ್ತೇನೆ. ಶ್ರೀ ಮಾರ್ ಅಣ್ಣಾರಾಯರು ಯಾವಾಗಲೂ ಬಲದಿಂದ ಎಡಗಡೆಗೆ ಹೋಗುವವರು. ನಾನೂ ಅವರ ದಾರಿಯಲ್ಲಿಯೇ ಹೋಗುತ್ತೇನೆ.

ಸ್ವಾಮಿ, ಎರಡು ಕೋಟಿ ಆರು ಲಕ್ಷ ರೂಪಾಯಿಗಳನ್ನು ಕಟ್ಟಡಗಳ ಮೇಲೆ, 25 ಲಕ್ಷ ರೂಪಾಯಿಗಳನ್ನು equipment ಮೇಲೆ ಮತ್ತು 20 ಲಕ್ಷ ರೂಪಾಯಿಗಳನ್ನು ಭೂಮಿಯ ಮೇಲೆ ಉಪಯೋಗಿಸುತ್ತೇವೆಂದು ಅಪ್ಪಣೆ ಕೊಡಿಸಿದ್ದಾರೆ. ಕಟ್ಟಡಗಳ ಮೇಲೆ ಹಾಕುವ ಹಣದಲ್ಲಿ ಏನಾದರೂ ಕಡಮೆ ಮಾಡುವುದಕ್ಕೆ ಸಾಧ್ಯವೇ ಎಂದು ಮಂತ್ರಿಗಳು ಸ್ವಲ್ಪ ವಿವರಣೆ ಕೊಟ್ಟಿದ್ದರೆ ಚೆನ್ನಾಗಿತ್ತು. ಕಟ್ಟಡಗಳ ಮೇಲೆ ಹೆಚ್ಚು ಹಣವನ್ನು ಖರ್ಚುಮಾಡದೆ equipment research, ಇಂಥವುಗಳಿಗೆ ಹೆಚ್ಚು ಹಣವನ್ನು ಖರ್ಚುಮಾಡಬಹುದಾಗಿತ್ತು. ಕಟ್ಟಡಗಳ ಮೇಲೆ ಹಾಕುವ ಹಣವನ್ನು ಕಡಮೆ ಮಾಡಬೇಕೆನ್ನುವುದು ನನ್ನ ಅಭಿಪ್ರಾಯವಾಗಿದೆ.

ಈ ದೇಶದಲ್ಲಿ ಆಹಾರವನ್ನು ಹೆಚ್ಚಾಗಿ ಬೆಳೆಯಬೇಕು, ಗೋಸಂಪತ್ತನ್ನು ಅಭಿವೃದ್ಧಿಮಾಡಬೇಕು, ಅದಕ್ಕೋಸ್ಕರವಾಗಿ ಸಂಶೋಧನೆ ನಡೆಯಬೇಕಾಗಿರುವುದರಿಂದ ಇಂಥ ಒಂದು ವಿಶ್ವವಿದ್ಯಾನಿಲಯ ಅವಶ್ಯಕ. ಕೇಂದ್ರ ಸರ್ಕಾರದವರು ಹಣ ಕೊಡುತ್ತಾರೆ. ಅದಕ್ಕೋಸ್ಕರ ಹೆಚ್ಚು ಹಣವನ್ನು ಹಾಕಿ ನಮಗೆ ಬೇಕಾಗಿರತಕ್ಕ ಸಂಶೋಧನೆಗೆ ಉಪಯೋಗ ಮಾಡಬಹುದು ಎನ್ನುವುದು ಸಂತೋಷದ ಸುದ್ದಿ. ಉತ್ತರ ಪ್ರದೇಶದಲ್ಲಿ ಇಂಥ ವಿಶ್ವವಿದ್ಯಾನಿಲಯವನ್ನು ಮಾಡಿ ಅವರೂ ಇಂಥ ಒಂದು ವಿಧೇಯಕವನ್ನು ಪಾಸ್ ಮಾಡಿದ್ದಾರೆ. ನಾವೂ ಸಹ ಇಂಥ ಕಾನೂನನ್ನು ಮಾಡಬೇಕು ಎಂದು ಹೇಳತಕ್ಕದ್ದು ಪ್ರಗತಿಪರವಾದ ಸರ್ಕಾರಕ್ಕೆ ಮರ್ಯಾದೆ ತರುವ ವಿಷಯ. ಆದರೆ ಇವೊತ್ತು ಅವರು ಹಿಡಿದಿರತಕ್ಕ ಖಾತೆಗಳು ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿವೆ, ಎಷ್ಟರಮಟ್ಟಿಗೆ ವ್ಯವಸಾಯದಲ್ಲಿ ಮುಂದುವರಿದಿದ್ದೇವೆ, ಪಶುಸಂಗೋಪನೆ, ಮೀನುಗಾರಿಕೆ, ತೋಟಗಾರಿಕೆ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಇವುಗಳಲ್ಲೆಲ್ಲ ಮುಂದುವರಿದಿದ್ದೇವೆ, ತಮಗೆ ಹೆಚ್ಚಿಗೆ ಆಗಬೇಕಾದುದೇನು ಎಂದು ಮಾನ್ಯ ಮಂತ್ರಿಗಳು ಏನೂ ಹೇಳಲಿಲ್ಲ. ಯಾವ ಯಾವುದರಲ್ಲಿ ಪ್ರಗತಿ ಸಾಧನೆ ಮಾಡಬೇಕೆಂದು ಹೊರಟಿದ್ದೇವೆಯೋ, ಯಾವಯಾವದರಲ್ಲಿ ಹೆಚ್ಚಿನ ಆಸಕ್ತಿ ತೋರಿಸಿ. ಹೆಚ್ಚಿನ ರೀತಿಯಲ್ಲಿ ಪ್ರಗತಿ ಹೊಂದಬೇಕೆಂದು ಇದ್ದೇವೆ ಎನ್ನುವ ಬಗ್ಗೆ ಮಾನ್ಯ ಮಂತ್ರಿಗಳು ಏನೂ ಹೇಳಲಿಲ್ಲ. ಪ್ರಗತಿ ಸಾಧಿಸಬೇಕೆಂದ್ದೇವೆ ಎಂಬುದಾಗಿ ಹೇಳಿದ್ದಾರೆ. ಇವೊತ್ತಿನ ದಿವಸ ಧಾರವಾಡ ಕಾಲೇಜು ಹೇಗೆ ಕೆಲಸ ಮಾಡುತ್ತಿದೆ, ಅದು ಎಷ್ಟರಮಟ್ಟಿಗೆ ಪ್ರಗತಿ ಸಾಧಿಸಿದೆ ಎಂದು ನನಗೆ ಗೊತ್ತಿಲ್ಲದೆ ಹೋದರೂ, ಬೆಂಗಳೂರಿನ ಪಕ್ಕದಲ್ಲಿರುವ ಪಶುವೈದ್ಯ ಕಾಲೇಜು, ಮತ್ತು ವ್ಯವಸಾಯ ಕಾಲೇಜು ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತಿವೆ ಎನ್ನುವುದನ್ನು ನಾನು ಸ್ವಲ್ಪ ಸರ್ಕಾರದವರ ಗಮನಕ್ಕೆ ತಂದರೆ, ಈ ವಿಶ್ವವಿದ್ಯಾನಿಲಯ ಸ್ಥಾಪನೆಯಾದ ಮೇಲೆ ಅಲ್ಲಿರತಕ್ಕ ರೋಗರುಜಿನಗಳೇನಾದರೂ ದೂರವಾಗಿ ಈ ದೇಶಕ್ಕೆ ಕಲ್ಯಾಣ ಆಗುವ ಕೆಲಸವಾಗುತ್ತದೆಯೋ ಎಂದು ನನಗಂದರೂ ಅನ್ನಿಸುತ್ತದೆ.

ಇದರಲ್ಲಿ ಯೂನಿವರ್ಸಿಟಿ ಇರಬೇಕು, ಎಂದು ಹೇಳಿದ್ದಾರೆ. ಅನಂತರ ಇದರ ರಚನೆ ಹೇಗಿರಬೇಕು ಎನ್ನುವುದರ ಬಗ್ಗೆ ಹೇಳುತ್ತಾ, ಒಬ್ಬರು ಪ್ರೋಚಾನ್ಸಲರು ಇರಬೇಕು, ಒಬ್ಬರು ವೈಸ್ ಚಾನ್ಸಲರು ಇರಬೇಕು, ಅದಕ್ಕೆ ಒಂದು ಬೋರ್ಡು ಇರಬೇಕು, ರೀಜೆಂಟ್ಸ್ ಇರಬೇಕು. ಹೀಗೇ ಇನ್ನೂ ಯಾರುಯಾರಿರಬೇಕು ಎಂಬುದನ್ನೆಲ್ಲ ಈ ಕಾನೂನಿನಲ್ಲಿ ತುಂಬಿದ್ದೀರಿ. ಆದರೆ ಇದರಲ್ಲಿ ಹೊಸದೇನೂ ಇಲ್ಲ ಎನ್ನುವ ಬಗ್ಗೆ ವಾದ ವಿವಾದವನ್ನು ಮಾಡಬೇಕಾಗಿದ್ದಿಲ್ಲ. ಇಂತಹ ಒಂದು ಕಾನೂನಿಗೆ ಈ ಸಭೆಯ ಸೀಲನ್ನು ಒತ್ತಿಸಿಕೊಂಡು ಇದನ್ನು ಕಾರ್ಯಗತ ಮಾಡುವಾಗ, ಇದರಲ್ಲಿರತಕ್ಕ ಲೋಪ ದೋಷಗಳೇನು ಎನ್ನುವುದನ್ನು ನೋಡದೇ ಹೋದರೆ ನಿಮ್ಮ ಆಸೆ ಇದರಿಂದ ಕಾರ್ಯಗತವಾಗುತ್ತದೆಯೇ? ಈ ಬಿಲ್ಲನ್ನು "University of Agricultural Sciences Bill, 1963" ಎಂದು ಕರೆದು ವ್ಯವಸಾಯಕ್ಕೆ ದೊಡ್ಡದಾಗಿ ಅನುಕೂಲವಾಗುತ್ತೆ ಎಂದು ಇದರೊಳಗೆ ದನ, ಕುರಿ, ಮೇಕೆ, ಇವುಗಳನ್ನೆಲ್ಲಾ ಸೇರಿಸಿಕೊಂಡು ಬರುತ್ತೀದ್ದೀರಿ. ಇದಕ್ಕೋಸ್ಕರವಾಗಿ ನಾನು ಹೇಳುವುದು ವ್ಯವಸಾಯ ಶಾಖೆ ನೀವು ನಿರೀಕ್ಷೆ ಮಾಡಿದಂತೆ ಕೆಲಸ ಮಾಡುತ್ತಿಲ್ಲ, ಹೀಗಿರುವಾಗ ಇಲ್ಲಿ ಒಂದು ಯೂನಿವರ್ಸಿಟಿ ಎಂದು ಮಾಡಿ ಇದರೊಳಗೆ Director of Agriculture ಹಾಗೂ ಇನ್ನಿತರ ಕೆಲವು ಆಫೀಸರುಗಳನ್ನು ಸೇರಿಸಿಕೊಂಡು ಇದರ ಅಧಿಕಾರವನ್ನು ತಾವೇ ಇಟ್ಟುಕೊಂಡಿದ್ದೀರಿ, ಈ ಡೈರೆಕ್ಟರ್ ಆಫ್ ಅಗ್ರಿಕಲ್‌ಚರು ಎನ್ನುವ ಅಧಿಕಾರಗಳ ಜೊತೆಗೆ, ಇನ್ನೂ ಇಬ್ಬರು ಅಧಿಕಾರಿಗಳನ್ನು ಸೇರಿಸಿದ್ದಾರೆ, ಫಿಷರೀಸ್ ಡೈರೆಕ್ಟರಿದ್ದಾರೆ, ಇನ್ನೊಬ್ಬರು ಹಾರ್ಟಿಕಲ್‌ಚರು ಡೈರೆಕ್ಟರಿದ್ದಾರೆ. ಹೀಗೆ ಇಬ್ಬರು ಮೂವರು ಅಧಿಕಾರಿಗಳನ್ನು ಇಟ್ಟು ಈ ಕಾಲೇಜಿನಲ್ಲಿ ದೇಶದ ಒಂದು ರಾಜಕೀಯರಂಗ ಮಾಡಿ ರಣರಂಗ ಮಾಡುವಂತೆ ಮಾಡುವುದು ಸರಿಯಲ್ಲ ಎಂದು ನನ್ನ ಭಾವನೆ.

ವೆಟರ್ನರಿ ಕಾಲೇಜಿನಲ್ಲಿರುವ ಡೈರೆಕ್ಟರರ ಸಂಬಂಧವನ್ನು ಅಗ್ರಿಕಲ್ಚರು ಕಾಲೇಜಿಗೆ ಇರಬೇಕೆಂದು ಅಗ್ರಿಕಲ್ಚರು ಡೈರೆಕ್ಟರೊಡನೆ ಇರುವಂತೆ ಮಾಡಿರುವುದನ್ನು ನೋಡಿದರೆ ಇದರಿಂದ ದೇಶಕ್ಕೆ ನಿಜವಾಗಿಯೂ ಇದು ಗೌರವ ತರುವಂತಹುದಲ್ಲ. ಈಗ ನಾನು ಹೇಳುವುದೇನೆಂದರೆ, ವೆಟರ್ನರಿ ಕಾಲೇಜಿಗೆ ಹೋದರೆ, ಯಾವ ಕೆಲಸವೂ ಅಲ್ಲಿ ಸರಿಯಾಗಿ ನಡೆಯುತ್ತಿಲ್ಲ, ಎಂದು ಅವರನ್ನು ತಂದು ಅಗ್ರಿಕಲ್ಚರು ಕಾಲೇಜಿಗೆ ಹಾಕಿ ಅವರ ಜೊತೆಗೆ ಹಾರ್ಟಿಕಲ್‌ಚರು ಶಾಖೆಯ ಡೈರೆಕ್ಟರನ್ನು ತಂದು ಹಾಕಿ ಇಲ್ಲಿ ಈ ಗುಂಪು ರಾಜಕೀಯ ಮಾಡಲಿ ಎಂದು ಇಲ್ಲಿಗೆ ತರುತ್ತೀರಾ? ಅಗ್ರಿಕಲ್ಚರ್ ಆಫೀಸಿಗೆ ಹೋಗಿ ನೋಡಿ. ಅಲ್ಲಿ ಒಬ್ಬರು ಡೈರೆಕ್ಟರು ಒಂದು ಕಡೆ ಇದ್ದಾರೆ, ಜಾಯಿಂಟು ಡೈರೆಕ್ಟರು ಇನ್ನೊಂದೆಡೆ ಇದ್ದಾರೆ. ಇನ್ನೊಂದು ಕಡೆಗೆ ಎಕ್‌ಸ್ಟೆನ್‌ಷನ್ನು ಡೈರೆಕ್ಟರು ಎಂದು ಬೇರೆ ಒಬ್ಬರಿದ್ದಾರೆ. ಅನಂತರ ಆಫೀಸು ಸೂಪರಿಂಟೆಂಡರು ಮತ್ತೊಂದು ಕಡೆ, ಹೀಗೆ ಒಬ್ಬೊಬ್ಬರು ಒಂದೊಂದು ರೀತಿಯಾಗಿದ್ದಾರೆ. ನಾನು ಇದನ್ನೆಲ್ಲಾ ಏಕೆ ಹೇಳುತ್ತಿದ್ದೇನೆಂದರೆ, ನೀವು ಈಗ ಎರಡು ಕೋಟಿ ಐವತ್ತೇಳು ಲಕ್ಷದಷ್ಟು ಹಣವನ್ನು ಇಲ್ಲಿ ವೆಚ್ಚಮಾಡಿ ಈ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವಾಗ ಇದು ಎಷ್ಟು ಮಟ್ಟಿಗೆ ಈ ಇಲಾಖೆಯೊಡನೆ ಹೊಂದಿಕೊಂಡು ಕೆಲಸ ನಡೆಸುತ್ತದೆ ಎನ್ನುವುದನ್ನು ಸರ್ಕಾರ ಎಚ್ಚರಿಕೆಯ ವಿವೇಚನೆ ಮಾಡಬೇಕೆಂದು ಹೇಳುತ್ತಿದ್ದೇನೆ.

ಅಧ್ಯಕ್ಷರು.—ತಾವೇನು ಹೇಳುತ್ತಿದ್ದೀರಿ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಬಿಲ್ಲಿನಲ್ಲಿ ಹೇಗಿದೆ ಎನ್ನುವುದನ್ನು ಹೇಳುತ್ತಿದ್ದೇನೆ. ಈಗ ಬಂದಿರುವ ರೋಗಕ್ಕೆ ಚಿಕಿತ್ಸೆ ಮಾಡಲು ಹೊರಟಿರುವ ದಾರಿ ಸರಿಯಲ್ಲ. ಇಂಥ ಅಡ್ಡದಾರಿ ಹಿಡಿದಿರುವ ಕಾಲೇಜಿಗೆ ಹೋಗಿ ವಿದ್ಯಾರ್ಥಿಗಳು ವಿದ್ಯಾವಂತರಾಗುವುದು ಹೇಗೆ ಎಂದು ಇಲ್ಲಿ ನಾನು ಹೇಳುತ್ತಿದ್ದೇನೆ. ಅದಕ್ಕೋಸ್ಕರ ಇದನ್ನು ಸ್ವಲ್ಪ ಅರ್ಥಮಾಡಿ ಕೊಳ್ಳಿ ಎಂದು ಹೇಳುತ್ತೇನೆ. ವೆಟರ್ನರಿ ಡೈರೆಕ್ಟರವರ ಒಂದು ಪಾರ್ಟಿ, ಇನ್ನೊಬ್ಬ ಡೈರೆಕ್ಟರರದೇ ಒಂದು ಪಾರ್ಟಿ, ಫಿಷರೀಸ್

ಡೈರೆಕ್ಟರರದೇ ಒಂದು ಪಾರ್ಟಿ, ವೆಟರ್ನರಿ ಇಲಾಖೆಯ ಹೆಡ್ ಗುಮಾಸ್ತರದೇ ಒಂದು ಪಾರ್ಟಿ, ಎಂದು ಹೀಗೆಲ್ಲ ಗುಂಪುಗಳನ್ನು ಮಾಡಿಕೊಂಡು ಇರುವುದರಿಂದ ಮುಂದಕ್ಕೆ ಈ ಡಿಪಾರ್ಟಮೆಂಟಿನ ಸಲಹೆಗಳನ್ನೇ ಕಾರ್ಯಗತ ಮಾಡುವುದಕ್ಕಾಗುವುದಿಲ್ಲ ಎಂದು ಫಿಷರೀಸ್ ಡೈರೆಕ್ಟರದೇ ಪ್ರತ್ಯೇಕವಾಗಿ ಒಂದು ಇಲಾಖೆ ಮಾಡಿ ಕೊಳ್ಳಬೇಕಾದೀತು ಎಂದು ಹೇಳಬಹುದು. ಒಬ್ಬೊಬ್ಬರೇ ಡೈರೆಕ್ಟರು ಇರುವ ಈ ಇಲಾಖೆಗಳ ನಾಲ್ಕು ಜನ ಡೈರೆಕ್ಟರುಗಳನ್ನು ಒಟ್ಟುಗೂಡಿಸಿ ಈ ಸಂಗವನ್ನು ಒಂದು ಯೂನಿವರ್ಸಿಟಿ ಎಂದು ಇಲ್ಲಿ ಹೇಳುವಂತಿದೆ. ಏಕೆ ಹೀಗೆ ಸೇರಿಸಿದ್ದೀರಿ ಎನ್ನುವುದರ ಬಗ್ಗೆ ಕಾರಣವನ್ನು ತಾವು ಉತ್ತರ ಕೊಡುವಾಗ ಸ್ವಲ್ಪ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ಈ ಇಲಾಖೆಯಲ್ಲಿ ಹೇಗಿದೆ ಎಂದರೆ ಎತ್ತು ಏರಿಗೆಳೆದರೆ, ಕೋಣ ನೀರಿಗೆ ಎಳೆಯುತ್ತದೆ, ಎನ್ನುವ ಹಾಗಿದೆ ತಾವು ಈಗ ತಾನೇ ಮಂತ್ರಿಗಳಾಗಿ ಬಂದಿರುವುದರಿಂದ ಯೋಚನೆ ಮಾಡಿ ನೋಡಿ ಎಂದು ಹೇಳುತ್ತಿದ್ದೇನೆ.

Mr. SPEAKER.—All that is going to be remedied in this Bill.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದರ ಆಡಳಿತ ಹೇಗಿದೆ ಎಂದರೆ, ಇವೊತ್ತು ನಮ್ಮ ಎದುರಿಗಿರುವ ವ್ಯವಸಾಯ ಮಂತ್ರಿಗಳಿಗೆ, ವ್ಯವಸಾಯದ ಶಾಖೆ, ವೆಟರ್ನರಿ ಖಾತೆ ಹಾಗೂ ಹಾರ್ಟಿಕಲ್ಚರು, ರೆವೆನ್ಯೂ ಮಂತ್ರಿಗಳಿಗೆ ಮತ್ತೆ ಫಿಷರೀಸು ಇಲಾಖೆ ಶ್ರೀಮಾನ್ ರಾಚಯ್ಯನವರಿಗೆ ಹೀಗೆ ಮೂರು ಜನ ಮಂತ್ರಿಗಳಿಗೆ ಬೇರೆ ಬೇರೆ ಯಾಗಿ ಹಂಚಿದ್ದಾರೆ.

The Pro-Chınceller.—The Minister for Agriculture for the State of Mysore shall by virtue of his Office be the pro-Chancellor of this University.

ರೋಗ ಬಂದಾಗ ಹೇಗೆ ಡಾಕ್ಟರು ಬಂದು ಅದನ್ನು Diogonise ಮಾಡಿ ಔಷಧಿ ಕೊಡುವಾಗ ಯಾವ ಡೋಸೇಜಿನಲ್ಲಿ ಕೊಟ್ಟರೆ ಅನುಕೂಲವಾಗುತ್ತೆ ಎಂದು ಅದಕ್ಕೆ ತಕ್ಕ ಔಷಧಿಯನ್ನು ಪ್ರಿಸ್‌ಕ್ರೈಬು ಮಾಡುತ್ತಾರೋ ಹಾಗೇ ಇದನ್ನೆಲ್ಲಾ ಈ ಮೂರು ಡಿಪಾರ್ಟಮೆಂಟಿನವರು ತಿಳಿದುಕೊಂಡು ಕೆಲಸ ಮಾಡಬೇಕು ಎಂಬುದು ತಮ್ಮ ಉದ್ದೇಶವಿರಬಹುದು. ಆದರೆ ನಾನು ತಮಗೆ ಹೇಳುವುದು—ನಿಮ್ಮಲ್ಲಿ ಅಂಥ ಒಂದು ಕೋ-ಆರ್ಡಿನೇಷನ್ನು ಎನ್ನುವುದೇ ಇಲ್ಲ. ಇಂತಹ ಒಂದು ಒಳ್ಳೆಯ ಕಾನೂನು ಬರುವಾಗ ದೇಶದ ಪ್ರಗತಿಗೋಸ್ಕರ, ದೇಶದ ಜನತೆಯ ಕಲ್ಯಾಣಕ್ಕೋಸ್ಕರ ಇಂತಹ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವಾಗ ಅದು ರಾಹು ಗ್ರಸ್ತವಾಗಬಾರದು, ದೇಶದ ಅಭಿವೃದ್ಧಿಗೆ ಕುಂಠಿತ ವಾಗಬಾರದು, ಎಂದು ನಾನು ಸರ್ಕಾರಕ್ಕೆ ಹೇಳುತ್ತಿದ್ದೇನೆ.

ನನ್ನ ಸ್ನೇಹಿತರು clause 5 ರಲ್ಲಿರುವ Administration of the University ಬಗ್ಗೆ ಹೇಳಿದರು. ಸುಪ್ರೀಂ ಕೋರ್ಟಿನಲ್ಲಿ ಹೋಗಿ ಯಾವ ರೀತಿ ತೀರ್ಮಾನ ಬಂದಿದೆಯೋ ಅದರಂತೆ ಒಪ್ಪಿಕೊಳ್ಳುವುದು ಧರ್ಮ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ, University Admission ಬಗ್ಗೆ (2) ನೇ ಕ್ಲಾಸಿನಲ್ಲಿ ಹೀಗೆ ಹೇಳಿದ್ದಾರೆ :

> "5 (2): Subject to the proviso to sub-section (1), the State Government may direct that the University shall reserve in colleges seats for women, the scheduled castes and the scheduled tribes, and such socially and educationally backward classes of citizens as may be declared by the State Government in this behalf........"

ಸುಪ್ರೀಂ ಕೋರ್ಟಿನವರು ಮೊನ್ನೆ ಮೊನ್ನೆ ತೀರ್ಮಾನ ಕೊಟ್ಟರು. ಅದು ಬಂದ ಮೇಲೆ ಬ್ಯಾಕುವರ್ಡ್ ಕ್ಲಾಸಿನ ಬಗ್ಗೆ ಸೋಷಿಯಲ್ ಬ್ಯಾಕ್‌ವರ್ಡ್‌ನೆಸ್ ಯಾವುದು, ಯಾವರೀತಿ ಷೆಡ್ಯೂಲ್ ಕ್ಯಾಸ್ಟು ಷೆಡ್ಯೂಲು ಟ್ರೈಬುಗಳಿಗೆ ರಿಸರ್ವೇಷನ್ನನ್ನು ಮಾಡಬೇಕು ಎಂಬುದನ್ನೆಲ್ಲ ಅದರಲ್ಲಿ ತಿಳಿಸಿದ್ದಾರೆ. ಆದರೆ ಇಲ್ಲಿ ಈ ಅಡ್ಮಿಷನ್ ವಿಚಾರವಾಗಿ ಯಾವ ರೀತಿಯಾಗಿ ರಿಸರ್ವೇಷನ್ನು ಇಟ್ಟಿದ್ದೀರಾ ಎಂದು ನೋಡಿದರೆ ಇದರಲ್ಲೇನೂ ವಿವರಗಳಿಲ್ಲ. ಇದಕ್ಕೋಸ್ಕರ ತಾವು ಇಲ್ಲೇನಾದರೂ ಒಂದು ಹೊಸ ಕ್ಲಾಸನ್ನು ಮಾಡಿ ವಿಶ್ವವಿದ್ಯಾನಿಲಯಕ್ಕೆ ಸೇರಲು ಬರುವ ವಿದ್ಯಾರ್ಥಿಗಳಿಗೇನಾದರೂ ರಿಸರ್ವೇಷನ್ನು ಮಾಡುತ್ತೀರಾ ಎನ್ನುವುದನ್ನು ತಾವು ಉತ್ತರ ಕೊಡುವಾಗ ಹೇಳಬೇಕು. ಸರ್ಕಾರದವರು ಸ್ಟೇಟಿನ ಬ್ಯಾಕ್‌ವರ್ಡ್ ಕ್ಲಾಸಸ್ ಬಗ್ಗೆ ರಿಸರ್ವೇಷನ್ನನ್ನು ತೆಗೆಯಬೇಕೆನ್ನುವುದು ಸುಪ್ರೀಂ ಕೋರ್ಟಿನ ತೀರ್ಪಿಗೆ ವಿರೋಧವಾಗುವ ಹಾಗಿದೆ.

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಹಾಗೇ ತಾವು ಇನ್ನೂ ಮುಂದೆ ಹೋಗಿ Chapter III ರ(9) ಕ್ಲಾಜಿನಲ್ಲಿ the following shall be the officers of the University ಎಂದು ಹೇಳುತ್ತ 14 ಜನರ ಪಟ್ಟಿ ಇದೆ. ಇದರಲ್ಲಿರುವ Director of Instruction, Veterinary College, Hebbal, Director of Instruction, Director of Research, Director of Extension ಎಂದು ಈ ಅಧಿಕಾರಿಗಳು ಎಲ್ಲಿದ್ದಾರೆ ? ಇವರು ಯಾರು ? ಇವರಿಗೆಲ್ಲ ಆಫೀಸುಗಳನ್ನು ಎಲ್ಲಿ ಮಾಡಿದ್ದೀರಿ, ಇವರ ಕೆಲಸ ವೇನು ? ಇವರನ್ನೆಲ್ಲಾ ಏಕೆ create ಮಾಡಿದ್ದೀರಿ ? ನಿಮಗೆ ಈ ಅಧಿಕಾರಿಗಳೆಲ್ಲ ಬೇಕೋ ಬೇಡವೋ ? ಇವರನ್ನೆಲ್ಲ ಕಂಟ್ರೋಲು ಮಾಡುವವರು ಯಾರಾದರೂ ಇದ್ದಾರೆಯೇ ?

Mr. SPEAKER.—Item 5 of the definition clause and clauses 20-21 deal with it. These are provisions which are found in the Bill.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇವರ ಸ್ಟೇಟಸ್ ಏನು ಎಂದು ಕೇಳುತ್ತಿದ್ದೇನೆ. ಈಗ ಅಗ್ರಿಕಲ್ಚರ್ ಡೈರೆಕ್ಟರು, ಡೆಪ್ಯುಟೀ ಡೈರೆಕ್ಟರು ಎಂದು for each Departmentಗೆ ಇದ್ದಾರೆ. ತಾವು ಈಗ Govern or of State ಎಂದಿರುವವರನ್ನು ತಾವು Chancellor ಆಗಿರಬೇಕು ಎನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ (4) ರಲ್ಲಿ ಹೇಳಿರುವಂತೆ such other powers and performs such other duties as may be conferred or imposed on him... etc., ಎಂದಿದೆ. ಇದರಂತೆ ಸ್ಟ್ಯಾಟ್ಯೂಟಿನಲ್ಲಿ create ಮಾಡುತ್ತೇವೆಂದು ಹೇಳುತ್ತಾರೆ.

ಈ ಪ್ರೋಚಾನ್ಸಲರ್ ಇವರು ಯಾರು ಸ್ವಾಮಿ ? ಇವರು ಏತಕ್ಕೆ ಬೇಕು ? ಈಗ ಇರತಕ್ಕಂಥ ಪ್ರೋಚಾನ್ಸಲರ್ ಏನೇನು ಕೆಲಸ ಮಾಡುತ್ತಾರೆ ಎನ್ನುವುದನ್ನು ನಾವು ನೋಡುತ್ತಿದ್ದೇವೆ. ಪ್ರಯೋಜನ ಏನಾದರೂ ಇದೆಯೇ ? ಪ್ರಯೋಜನ ವಿದ್ದರೆ ಇದನ್ನು ಇಟ್ಟುಕೊಳ್ಳಿ. ಏನೇ ಆದರೂ ಈ ಪ್ರೋಚಾನ್ಸಲರ್ ಹುದ್ದೆ ಮಾತ್ರ ನನಗೆ ಹಿಡಿಸುವದಿಲ್ಲ. ಆದುದರಿಂದ ಇನ್ನೊಮ್ಮೆ ಈ ಬಗ್ಗೆ ಸರಕಾರ ಕೂಲಂಕಷವಾಗಿ ವಿಮರ್ಶೆಮಾಡಬೇಕು. ಈಗ ಇರತಕ್ಕಂಥ ಮೂವರು ಡೈರೆಕ್ಟರುಗಳಲ್ಲಿ ಯಾರನ್ನು ವೈಸ್ ಚಾನ್ಸಲರ್ ಮಾಡುತ್ತೀರಿ ? ವೆಟರಿನರಿ ಡೈರೆಕ್ಟರರೇ, ಅಗ್ರಿಕಲ್ಚರಲ್ ಡೈರೆಕ್ಟರರೇ, ಫಿಶರೀಜ್ ಡೈರೆಕ್ಟರರೇ ? ಯಾರು ?

Mr. SPEAKER.—The Hon'ble Member slightly departing from the point. Vice-Chancellor cannot be a Directer of Agriculture. See page 15.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದರಲ್ಲಿ ನಾಲ್ಕು ವಿಭಾಗ ಸೇರಿಕೊಂಡಿವೆ. Agriculture, Animal Husbandry, Horticulture ಮತ್ತು Fisheries ಈ ನಾಲ್ಕು ಇಲಾಖೆಯ ಡೈರೆಕ್ಟರರಲ್ಲಿ ಯಾರನ್ನು ಮಾಡಗುತ್ತೀರಿ ? ಈ ನಾಲ್ಕು ವಿಭಾಗಗಳಲ್ಲಿ ವೈವಿಧ್ಯತೆ ಇದೆ.

Mr. SPEAKER.—If the Hon'ble Member says that the Director of Agriculture is going to be installed as a the Vice-Chancellor, then, there will be an immediate vacancy of the Director of Agriculture. The Same person cannot hold both the places.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನನ್ನ ಮನಸ್ಸಿನಲ್ಲಿ ಒಂದು ಭಯವಿದೆ. ಈ ಬಿಲ್ ಪಾಸ್ ಆದ ಮೇಲೆ ವೆಟೆರಿನರಿ ಡೈರೆಕ್ಟರ್ ಅವರನ್ನು ವೈಸ್ ಚಾನ್ಸಲರ್ ಆಗಿ ಮಾಡುವಿರಿ ಎಂದು.

ಶ್ರೀ ಜಿ. ನಾರಾಯಣಗೌಡ.—ಇವರ ಪೈಕಿ ಯಾರನ್ನು ಮಾಡಬೇಕು ಎಂಬುದು ಮಸೂದೆಯಲ್ಲಿ ಏನೂ ಇಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದು ಸ್ವಲ್ಪ ಯೋಚನೆ ಮಾಡತಕ್ಕಂಥ ವಿಷಯ. ಇದನ್ನು ಸರಿಯಾಗಿ ಮಾಡಬೇಕು. ಇನ್ನು Chapter IV—Authorities of the Universities—

24 The following shall be the authorities of the University, namely—

(1) The Board of Regents
(2) The Academic Council
(3) The Board of Studies , and
(4) Such other bodies of the University as may be declared by the statutes to be the authorities of the University.

ಇವರಲ್ಲಿ such other bodies ಅಂದರೆ ಯಾವುವು ? ಯಾವುವನ್ನು create ಮಾಡುತ್ತೀರಿ ? ಅದರಲ್ಲಿ ಕಷ್ಟ ಬಂದಿದೆ. ಅವರು ಏಟು ಹಾಕುತ್ತಾರೆ. ಸ್ವಾಮಿ, ಅದೇನೇ ಇರಲಿ ಒಂದು ಮಾತು ಹೇಳುತ್ತೇನೆ. ಈ ನಾಲ್ಕನೇ ವಿಷಯದಲ್ಲಿ ಸುಲಭವಾಗಿ ವಿವರವಾಗಿ ತಿಳಿಸಬೇಕು. ಎಂದು ಕೇಳಿಕೊಳ್ಳುತ್ತೇನೆ.

ಇನ್ನು Constitution of the Board, Vice-Chancellor, The Secretary to the Government of Mysore, Finance Department; The Secretary to the Government of Mysore, Agriculture Department; The Secretary to the Government of Mysore, Education Department; The Director of Agriculture in Mysore; The Director of Animal Husbandry in Mysore; The Director of Horticulture in Mysore; The Director of Fisheries in Mysore ಎಂದು ಇಷ್ಟು ಜನರನ್ನು ತಂದು ಹಾಕಿದ್ದೀರಿ. ಇದರಿಂದ ಏನಾಗುತ್ತದೆ ಗೊತ್ತಿದೆಯೆ ? ಕುದುರೆಗೆ ಸರಿಯಾಗಿ ಕಡಿವಾಣ ಹಾಕಿ ಇಟ್ಟರೆ ಈ ವಿಶ್ವವಿದ್ಯಾನಿಲಯಕ್ಕೆ ಮರ್ಯಾದೆ ಬರುತ್ತದೆ other persons ಯಾರು ? ಸರ್ಟಿಫಿಕೇಟ ಕೊಡುವವರು ಯಾರು ? ಯಾವ ಆಧಾರದ ಮೇಲೆ ನಾಮಿನೇಟ್ ಮಾಡುತ್ತೀರಿ ? Two persons, not being Government servants; or servants of the University, nominated by the Chancellor from among progressive farmers;

Five persons, not being Government servants, or servants of the University, nominated by the State Government from among persons interested in agriculture education; ಈ ಐದು ಜನ ಯಾರು ? ಇವರು ಪರಿಣತರು ಇರಬೇಕು. Interest in agriculture ಇದ್ದವರು ಇರಬೇಕು.

MR. SPEAKER.—Instead of that, what is your suggestion ?

ಸಿ. ಜೆ. ಮುಕ್ಕಣ್ಣಪ್ಪ.—ಶ್ರೀಮಾನ್ ಸುಂದರೇಶರವರು ಒಂದು ತಿದ್ದುಪಡಿ ಕಳಿಸಿದ್ದಾರೆ, ತಿದ್ದುಪಡಿ ಚರ್ಚೆಗೆ ಬಂದಾಗ್ಗೆ ಈ ವಿಚಾರದಲ್ಲಿ ಮಾತನಾಡುತ್ತೇನೆ. ಇನ್ನು Two persons ಎಂತ ಹೇಳಿರುವುದನ್ನು ನಾನು ಒಪ್ಪಿ ಕೊಳ್ಳುತ್ತೇನೆ. ಈ ಸಭೆಯ representatives ಇರುವುದು ಯಾರಿಗೆ ಬೇಡ ? ಕರ್ನಾಟಕ ಯೂನಿವರ್ಸಿಟಿ, ಮೈಸೂರು ಯೂನಿವರ್ಸಿಟಿಯಲ್ಲಿ ಈ ಸಭೆಯ ಪ್ರತಿನಿಧಿಗಳನ್ನು ಯಾವ ಪ್ರಮಾಣದಲ್ಲಿ ಕಳಿಸುತ್ತಿರುವಿರೋ ಅದೇ ರೀತಿ ಈ ಯೂನಿವರ್ಸಿಟಿಗಾದರೂ ಸಹ ಕಳಿಸುವ ಹಾಗೆ ಮಾಡುವದಕ್ಕಾಗಿ ಸರಕಾರದವರೇ ಒಂದು ತಿದ್ದುಪಡಿ ತಂದು ಈ ಸಭೆಯ ಒಪ್ಪಿಗೆ ಪಡೆಯಬೇಕು ಎಂಬುದನ್ನು ಸರಕಾರ ತೀವ್ರ ಯೋಚನೆ ಮಾಡಬೇಕು ಎಂದು ಹೇಳುತ್ತೇನೆ. ಈ ಯೂನಿವರ್ಸಿಟಿ ಫಂಡ್ಸ್ ಹೇಗೆ ಇರಬೇಕು, ಹೇಗೆ ಕಂಟ್ರೋಲ್ ಮಾಡಬೇಕು, ಲೆಕ್ಕ ಪತ್ರ ಹೇಗೆ ಇಡಬೇಕು, ಅದನ್ನು ಯಾರು ಪರಿಶೀಲನೆ ಮಾಡಬೇಕು ಅನ್ನತಕ್ಕಂಥಾದ್ದನ್ನು ಈ ಚಾಪ್ಟರಿನಲ್ಲಿ ಡೀಟೇಲ್ ಮಾಡುತ್ತಾ ಇದ್ದೀರಿ. ಈ ವೈಸ್ ಛಾನ್ಸಲರಿಗೆ ಸಂಬಳ ಎಷ್ಟು ; ಅದನ್ನು ಯಾರು ತೀರ್ಮಾನ ಮಾಡುವುದು, ಸರ್ಕಾರವೇ, ಅಕಾಡೆಮಿಕ್ ಕೌನ್ಸಿಲ್ಲೇ, ಬೋರ್ಡ್ ಆಫ್ ರೀಜಂಟರ್ಸ್, ಅಥವಾ ಸರ್ಕಾರವೇ, ಅಥವ ಮಂತ್ರಿಗಳೆ ? ಇದು ಎಲ್ಲಿದೆಯೋ, ನನ್ನ ಕಣ್ಣಿಗೆ ಬಿದ್ದಿಲ್ಲ. ಅದಕ್ಕೋಸ್ಕರವಾಗಿ ವೈಸ್ ಚಾನ್ಸಲರ ಸಂಬಳ ಸಾರಿಗೆ ವಿಷಯದಲ್ಲಿ ಸ್ವಲ್ಪ ಅನುಮಾನಕ್ಕೆ ಎಡೆ ಕೊಟ್ಟು ಬಿಟ್ಟಿದೆ.

4-30 P.M.

SRI G. NARAYANA GOWDA.—Please see Sec. 12 (7).

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—I.A.S. ಆಫೀಸರುಗಳಿಗೆ, ಕಂಪೆನಿ ಡೈರೆಕ್ಟರುಗಳಿಗೆ ಮುಂತಾದವರಿಗೆ ಡಿಟರಿಮಿನ್ ಮಾಡಿರುತ್ತೀರ ಯಾರಿಗಾದರೂ attractive pay ಇದ್ದರೆ ಗರುಡಗಂಬ ತಿರುವುದಕ್ಕೆ ಪ್ರಾರಂಭ ಮಾಡುತ್ತಾರೆ.

"Miscellaneous" ಚಾಪ್ಟರಿನಲ್ಲಿ ಅಷ್ಟೊಂದು ಯೋಚನೆ ಮಾಡಬೇಕಾದಂಥದ್ದು ಏನೂ ಇಲ್ಲ. ಈ ವಿಶ್ವವಿದ್ಯಾನಿಲಯವನ್ನು ತೆರೆಯಬೇಕೆಂದು ಮನಸ್ಸು ಮಾಡಿದ್ದರೆ, ಅದನ್ನು ಸರಿಯಾಗಿ ನಡೆಸುವಂತೆ ಮನಸ್ಸು ಮಾಡಬೇಕು, ಏಕೆಂದರೆ ವೆಟರಿನರಿ ಕಾಲೇಜು, ಅಗ್ರಿಕಲ್‌ಚರಲ್ ಕಾಲೇಜು ಎಲ್ಲಾ ಕೊಟ್ಟು, ಏನೇನು ಆಗಬೇಕೋ ಎಲ್ಲಾ ಆಗಿ ಹೋಯಿತು. ಅದಕ್ಕೋಸ್ಕರ ಈ ಯೋಚನೆಗೆ ಕಡಿವಾಣ ಹಾಕಿ ಭದ್ರವಾದಂಥ ಬುನಾದಿ ಮೇಲೆ, ಚೆನ್ನಾಗಿ ಸ್ಥಾಪನೆ ಮಾಡಬೇಕು.

†Sri ANNA RAO GANAMUKHI (Afzalpur).—Sir, I think that this is a very well-concieved bill and it has not come a day sooner before this Assembly. However, I have some doubts as to the desirability of starting this college right at this time because there are some difficulties in the way of proper functioning of University. We know that the University Grants Commission has been established by the Government of India and it has got purview over all the Universities in regard to the maintenance of standards. That is the body which advises the State Government on the desirability of starting colleges and also fulfilling conditions. The Resources and Economy Committee report says that during the third plan this Agricultural University should not be started. They have also expressed a doubt about its success in America itself. On the other hand we are told that in America the Land Grant Universities have brought tremendous change in the life of American Agriculturists who have become world leaders in the field of agriculture today. We have to look whether the University Grants Commission has advised properly for the starting of this University because I envisage some difficulty. As it is, the present University Act do not bar any agricultural colleges being started under its aegis. Therefore an University can straightaway start an Agricultural College or Veterinary College or any other such college.

Mr. SPEAKER.—The idea is to specialise, probe deeper. The normal Universities have a variety of sciences to be looked into. This University will be looking into a special branch with a deeper interest.

Sri ANNA RAO GANAMUKHI.—Suppose tomorrow the Karnatak or the Mysore University starts under its own aegis an agricultural college, there is nothing, no bar, in this Act to prevent it. In this bill it is stated that all the colleges under it will be constituent colleges. There is no provision for giving affiliation to any college started by an University or private agency. Just as the All India Council for Technical Education has been established by the Government of India they may establish an all-India Council for Agricultural Education, which will provide more attraction for starting more agricultural colleges of this type, even by private agencies. We know that under the present Universities Act, technical and all other arts and science colleges are functioning. In the same manner if a central agency to finance these colleges is started. I think we can multiply these colleges. Merely saying that we are disaffiliating the present college and affiliating it to this University, the difficulty is not, I think, mitigated. What is the kind of material that the present colleges are getting, colleges where research is done. The material we get is that all first and second classes are absorbed in the medical and technical colleges and the remaining III classes come to the agricultural college.

Mr. SPEAKER.—Greater reason to bestow greater attention.

Sri ANNA RAO GANAMUKHI.—Unless there is attraction, the same III class material will come to this college. Then this University may not serve any purpose at all.

Sir, the Resources and Economy Committee has said..........

Mr. SPEAKER.—Did the Resources and Economy committee go to the States and find out what was happening there? The Committee has dealt with a multitude of points with very little thought bestowed on any one point.

Sri ANNA RAO GANAMUKHI.—They have made a recommendation that no University should be started.

Mr. SPEAKER.—That is based on insufficient study.

Sri ANNA RAO GANAMUKHI.—They cannot say anything of their own accord. They have said so on the basis of the information supplied by Government. Under the U.G.C. Act also there are provisions, like that in Section 12. "The U.G.C. can advise any authority, if such advise is sought for, on the establishment of a new University or on proposals connected with the expansion of a University". I do not know whether the Government has sought the advice of the University Grants Commission. There is also a provision in the same section that if any State or Central Government requests them, they collect information on all such matters relating to University education in India or other countries. They are the agency to collect information.

Mr. SPEAKER.—They are not the only agency.

Sri ANNA RAO GANAMUKHI.—It is not the only agency but it is better suited for this task than any other agency. Otherwise such a provision would not have been made. Anyway, this bill has come and we have to consider it on merits.

Mr. SPEAKER.—These are useful suggestions even for working the University after it is established.

Sri ANNA RAO GANAMUKHI.—About the location of the college itself. Now, the Agricultural University requires about five sorts of Colleges, Agricultural College, Veterinary College, College of Home Sciences and Studies, School of Basic Sciences and Humanities and then an Agricultural Engineering and Technological College. In Uttar Pradesh, all these Colleges are located in Nainital District. They have started these Colleges in the same District. What we do here is, in order to save expenditure, we intend starting these Colleges in different areas. I do not know whether these Colleges.........

Mr. SPEAKER.—Is the Hon'ble member aware that in Gujarat there is an Agricultural University?

Sri ANNA RAO GANAMUKHI.—I do not know, Sir. In Uttar Pradesh this College has been established and the results have to be evaluated. I think, the location of this College at Hebbal is highly objectionable. Its location ought to have been in rural areas, because one-third of the time of the students is spent in the lecture hall and for two-thirds of the time the students will have to work actually in the field as farmers. Not only that. I hear that in Uttar Pradesh, there is not a single Chaprasi or a Peon appointed for this College. The students themselves work as labourers, as telephone operators, as farm boys and every thing is done by the students themselves. If the College is located near Bangalore City, then who expects that the students will do all these things. It is that kind of phylosophy that is taught in the Utter Pradesh

(SRI ANNA RAO GANAMUKHI)

institution. The kind of phylosophy cannot be imparted in an University is located very near Bangalore. Another reason is that in Uttar Pradesh they have provided 16,000 acres of land, because all sorts of sciences have to be taken to the field. Here, there is hardly about 2,000 acres of land at Hebbal. We want more land for.........

SRI G. NARAYANA GOWDA.—3,000 acres of land is available in Hebbal.

MR. SPEAKER.—Neighbouring ryots also will co-operate and they will derive benefits.

SRI ANNA RAO GANAMUKHI.—The location of the University in Hebbal itself is objectionable.

Another thing is that land should be fertile and water should be available in plenty. I want to ask the Minister whether land is in plenty and that land also is fertile—land is available at Hebbal. I think, round about Bangalore, land is not fertile. You cannot limit yourself to two or three thousand acres of land. When expansion has to be taken place, you need more land and so you must have an eye on the future. The location of this University can be taken to any other area. You can go 50 miles beyond this where land and water is available in plenty. We do not get water for drinking purposes sufficiently in Bangalore and you want to locate the University here, where no experiment can be carried out.

SRI G. NARAYANA GOWDA.—There is a farm attached to the Agricultural College at Hebbal.

MR SPEAKER.—He is supporting the Bill. He contemplates that the provision is too small and he wants you to enlarge it.

SRI ANNA RAO GANAMUKHI.—In the Bill, if the location and place had not been mentioned, I think we would have taken into consideration what steps should be taken to locate the University here or elsewhere. I am not interested in any place. It can be established in any suitable place where water is in plenty and land is fertile. The students are not expected to hear only lectures. That is not the thing. Here, the students have to work for two-thirds of the time in the farm itself. Therefore, I think, Sir, that all these factors ought to have been taken into consideration before mentioning the location at Hebbal. I should say that there should be some provision or the other barring other Universities, either giving affiliation to the College or starting Agricultural or Home Science or any other College. I think all the five sorts of Colleges should be started in the compass itself so that for integrated courses, College Lecturers, Professors and Readers, whoever they are, they may be sent to the College. The best teachers should be available for every sort of science. You have got one University in Dharwar and two Colleges here and if you want the other Colleges........

MR. SPEAKER.—Why should not one be started in Gulbarga ?

SRI ANNA RAO GANAMUKHI.—Then I must show the land at least 25 thousand acres of land.

MR. SPEAKER.—Government will find it.

Sri ANNA RAO GANAMUKHI.—As we know, there is a water dispute. I cannot commend Gulbarga as a suitable place at this stage.

Therefore, the private agencies should be asked to start all sorts of Colleges, Agricultural and other Colleges, so that they could multiply and have access to the City.

As far as Research and other things are concerned, it is a welcome thing as benefits of improved knowledge will be provided to the farmers. As far as the constitution of various bodies of the University is concerned, I should say that either the Board of Regents should be looked into from the point of view of academic conception or administrative convenience. So far as acadamic council and other things are concerned, they must be elective bodies. They must be free from all control of Government. They must be able to work in an atmosphere inhibited by any. Therefore, it is highly necessary that they must be elective bodies. Although this Bill has been brought hastily, I would commend, if not now, at least in future, that this body should be made perfectly representative on par with other Universities because we know that where some defective Bills are passed, it is promised that another Bill will be brought forward to rectify the defects. This sort of things should not happen here. As far as the Board of Regents is concerned, as suggested by other Members, this Legislature should find a place, its representative should be there, the Legislative Council should also have some representatives and from the Academic Council also there should be one or two members, and from the Farmers' Forum also there should be one or two members, and the Chancellor should be given powers to nominate one ore two persons who are farmers. I think, if this is done, then it would be perfectly all right Otherwise, nominating persons and then taking all the blame upon the Government will not be helpful; on the other hand it will hamper the activities of the College. The U.G.C. has formulated a policy recently, during the Second Five Year Plan, that the University should concentrate on research and post-graduate courses only. For the items on which the Universities may concentrate, I do not think that this University is an exception.

If the University is charged with the duty of creation of posts, making appointments and promotions, all these things in all the constituent colleges, then I think the academic atmosphere will completely disappear and there is bound to be politics, some disorder and the Board of Research will perforce have to concentrate on all these administrative matters and it will find no time for other things. Therefore, it is highly necessary that these constituent colleges should not be taken over to this University. Let the University concentrate on research and post-graduate courses and let the Government keep the Colleges with them. This is the policy formulated by the U.G.C. If the U.G.C. had been consulted, they would not have advised Government to disaffiliate the present Colleges and take over the management to the University. Administratively, it will be impossible to concentrate on research and take the results of the research to the farmers. In these two things, they must exercise their powers.

Mr. SPEAKER.—What you say may be perfectly right so far as humanities or other sciences which have established roots are concerned. It is admitted that Agriculture has not received attention. It has to build up that structure from the very bottom.

Sri ANNARAO GANAMUKHI.—I do not think the syllabus will be changed or anything will be changed. The change of outlook should be there. Instead of taking the burden of managing actually the Colleges, why not the University concentrate only on examination and setting standards and concentrate on research only and taking the results to the farmers. If this is done, they will be able to carry out the objectives of the Bill. Otherwise, they will be administration ridden bodies and they may not have the time required for such a purpose. That is why the U.G.C. has formulated this principle. If the University is expected to something different from what the U.G.C. says for other Universities, then I have nothing to say. All these things should be taken into consideration before finalising this Bill. Or, if not possible, these things should be taken note of and an amending Bill should be brought forward.

†ಶ್ರೀ ಸಿದ್ದಯ್ಯ ಕಾಶೀಮಠ.—ಅಧ್ಯಕ್ಷರೇ, ರಾಜ್ಯದ ವ್ಯವಸಾಯ ಮಂತ್ರಿಗಳು ಈ ದಿವಸ ಸಭೆಯ ಮುಂದೆ ಮಂಡಿಸಿರತಕ್ಕ ಈ ಕೃಷಿ ವಿಜ್ಞಾನ ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಮಸೂದೆಯನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ನಮ್ಮ ದೇಶದಲ್ಲಿ ರೈತನು ಒಳ್ಳೆ ಬೆಳೆಯನ್ನು ಬೆಳೆಯುವಂತೆ ಮಾಡುವುದಕ್ಕೂ ಮತ್ತು ಈ ಪಶು ಸಂಪತ್ತಿನ ಒಳ್ಳೆ ತಳಿಯನ್ನು ಹೆಚ್ಚಿಸುವುದಕ್ಕೂ ಈ ರಾಜ್ಯದಲ್ಲಿ ಹೆಚ್ಚು ಜನ ಜಮೀನು ಬೇಸಾಯವನ್ನೇ ನಂಬಿಕೊಂಡಿರುವುದರಿಂದ ಅಂಥಾ ಜನರಿಗೆ ಒಂದು ಒಳ್ಳೆ ಬೇಸಾಯ ಮಾಡತಕ್ಕ ಜ್ಞಾನ ಸಂಪತ್ತನ್ನು ಒದಗಿಸಿ ಕೊಡಲು ನಿಜವಾಗಿಯೂ ಇದೊಂದು ಒಳ್ಳೆಯ ಸಾಧನವಾಗಿದೆ. ರೈತನು ಬೆಳೆಯತಕ್ಕ ಬೆಳೆಗೆ ಎಷ್ಟೋ ರೋಗಾದಿಗಳು ಮೇಲಿಂದ ಮೇಲೆ ಬರುತ್ತವೆ. ಅತನ ಬೆಳೆಯಲ್ಲ ಹಾಳಾಗುತ್ತಿದೆ ಎಂದು ಇಲ್ಲಿಯ ತನಕ ನಾವೆಲ್ಲರೂ ಹೇಳುತ್ತಲೇ ಬಂದಿದ್ದೇವೆ. ಈ ಬಗ್ಗೆ ನನಗೆ ಗೊತ್ತಿರುವ ಒಂದೆರಡು ವಿಷಯಗಳನ್ನು ಗಣನೆಗೆ ತೆಗೆದುಕೊಂಡು ವಿಚಾರ ಮಾಡುವುದಾದರೆ ನಮ್ಮ ಕಡೆ ಗೋಧಿ ಬೆಳೆಗೆ ಬಂಡಾರ ಜಿಟ್ಟಿ ಹುಳು ಬಿದ್ದು ಬಹಳ ಕಡೆ ಈ ಬೆಳೆಗಳೆಲ್ಲ ನಷ್ಟವಾಗುತ್ತಿದೆಯೆಂಬುದು ನಮಗೆಲ್ಲರಿಗೂ ಕಂಡು ಬಂದಿದೆ. ಹಾಗೆ ಪಶು ಸಂಗೋಪನ ವಿಚಾರದಲ್ಲೂ ಕೂಡ ಆ ಹೆಸರುಘಟ್ಟ ಫಾರಂನಲ್ಲಿದ್ದ ಅಮೆರಿಕಾದ ಜರ್ಸಿ ಗೂಳಿಗಳಿಗೆ ರೆಂಡರ್‌ಪೆಸ್ಟ್ ಎಂಬ ಡಿಸೀಜ್ ಬಂದು ಅವುಗಳಿಗೊಂದು ಸರಿಯಾದ ಔಷಧಿ ಸಕಾಲಕ್ಕೆ ದೊರೆಯದೆ ಅವು ಸತ್ತೇ ಹೋದವು ಎಂಬ ವಿಷಯ ಮೊನ್ನೆ ತಾನೆ ಈದೇ ಸಭೆಯಲ್ಲಿ ಚರ್ಚೆ ಆಗಿದೆ. ಇಂಥ ಒಂದು ವಿಶ್ವವಿದ್ಯಾನಿಲಯ ನಮ್ಮಲ್ಲಿದ್ದರೆ ಇಂಥಾ ರೋಗಕ್ಕೆ ಒಂದು ಸರಿಯಾದ ಔಷಧಿಯನ್ನು ಸಕಾಲಕ್ಕೆ ತಯಾರಿಸಿದ್ದೇ ಆಗಿದ್ದರೆ ಅಂಥಾ ಅನಾಹುತಕ್ಕೆ ಅವಕಾಶವಿರುತ್ತಿರಲಿಲ್ಲ ಇದರಿಂದ ನಮಗೆ ಒಂದು ಒಳ್ಳೆಯ ಸೌಕರ್ಯ ದೊರೆಯುತ್ತಿತ್ತು. ಈಗ ನಮ್ಮ ಸರ್ಕಾರದವರು ಇಂಥ ಒಂದು ಒಳ್ಳೆಯ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಲು ಮುಂದೆ ಬಂದಿರತಕ್ಕದ್ದು ನಮ್ಮೆಲ್ಲರಿಗೂ ಒಂದು ಸಂತೋಷದ ಸಂಗತಿಯಾಗಿದೆ. ಈ ದಿವಸ ಈ ಬಿಲ್ಲಿನಲ್ಲಿ ಕೆಲವು ನ್ಯೂನತೆಗಳಿರಬಹುದು, ಆದರೆ ಈಗಾಗಲೇ ನನ್ನ ಕೆಲವು ಸ್ನೇಹಿತರು ಈ ಬಾಬಿನಲ್ಲಿ ಹೆಚ್ಚಿನ ಹಣವನ್ನು ಕಟ್ಟಡಗಳಿಗೂ ಶಿಬ್ಬಂದಿಗೂ ಖರ್ಚು ಮಾಡಲಾಗುತ್ತಿದೆ ಎಂತ ಹೇಳಿದರು. ಅದರಿಂದ ಈಗ ಈ ವಿಶ್ವವಿದ್ಯಾನಿಲಯಕ್ಕೆ ಪ್ರತ್ಯೇಕ ಕಟ್ಟಡಗಳನ್ನು ಮಾಡದೆ ಈಗಿರತಕ್ಕ ಕಾಲೇಜಿನ ಮೂಲಕವೇ ಇದನ್ನು ಮುಂದುವರಿಸಿದರೆ ಚೆನ್ನಾಗಿರುತ್ತೆಂದು ಹೇಳುತ್ತೇನೆ. ಕೆಲವರು ಈ ಹಿಂದೆ ಮಾತನಾಡುತ್ತ ಈ ಕಾಲೇಜಿನಲ್ಲಿರತಕ್ಕ ಶಿಬ್ಬಂದಿ ವರ್ಗದಲ್ಲಿ ಜಗಳಗಳುಂಟಾಗಿರುತ್ತೆಂದು ಹೇಳಿದ್ದಾರೆ. ಅದಕ್ಕೆಲ್ಲ ಪರಿಹಾರಗಳನ್ನು ಕಲ್ಪಿಸಿ ಇದನ್ನೂ ಆ ಕಾಲೇಜು ಮೂಲಕವೇ ಮುಂದುವರಿಸಿದರೆ ಇದರಿಂದ ಹೆಚ್ಚಿನ ಲಾಭವಿರುತ್ತದೆ. ಇಂಥಾ ಒಂದು ಕೆಲಸವನ್ನು ಪ್ರಾರಂಭಿಸುವಾಗ ಅನೇಕ ಎಡರು ತೊಡರುಗಳು ಬರಬಹುದು. ಆದರೆ ಈ ವಿಶ್ವವಿದ್ಯಾನಿಲಯದಿಂದ ಒಕ್ಕಲುತನದವರಿಗೆ ಬಹಳ ಸಹಾಯವಾಗುತ್ತದೆ. ಇದಿನ್ನೂ ಬಹಳ ಹಿಂದೆಯೇ ಆಗಬೇಕಾಗಿತ್ತು. ಈ ವಿಶ್ವವಿದ್ಯಾನಿಲಯಗಳ ಸ್ಥಾಪನೆ ಬಗ್ಗೆ ಸರ್ಕಾರದವರು ಒಂದಿಲ್ಲೊಂದು ತೊಂದರೆಯನ್ನು ಹೇಳುತ್ತಲೇ ಬಂದಿದ್ದಾರೆ. ನಾನೀಗ ಒಂದು ಮುಖ್ಯವಾದ ವಿಷಯವನ್ನು ಸರ್ಕಾರದವರ ಮುಂದಿಡಬೇಕೆಂದಿದ್ದೇನೆ. ಈಗಾ

ಗಲೇ ಧಾರವಾಡದಲ್ಲಿ ಒಂದು ಅಗ್ರಿಕಲ್‌ಚರಲ್ ಕಾಲೇಜು ಸ್ಥಾಪನೆ ಆಗಿದೆ. ಅಲ್ಲಿ ಭವ್ಯವಾದ ಕಟ್ಟಡವಿದೆ. ಡಾ॥ ರಾಜೇಂದ್ರಪ್ರಸಾದ್‌ಅವರು ಅದರ ಪ್ರಾರಂಭೋತ್ಸವ ಮಾಡಿದರು. ಈಗ ಅದಕ್ಕೆ ಅಲ್ಲಿ ಅಗತ್ಯವಾದ ಜಮೀನು ಇಲ್ಲವಾಗಿದೆ. ಸಿಬ್ಬಂದಿ ವರ್ಗದ ವಾಸಕ್ಕೆ ಮನೆಗಳು ಇತ್ಯಾದಿ ಎಲ್ಲ ಅನಕೂಲತೆಗಳಿವೆ. ಆದರೆ ಅದು ಈಗ ಅಲ್ಲಿ ಹಂಗಾಮಿಯಾಗಿ ಕೆಲಸ ನಡೆಸುತ್ತಿದೆ. ಇದನ್ನು ಮುಂದೆ ಹೆಬ್ಬಾಳಕ್ಕೆ ಸ್ಥಳಾಂತರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಈ Statement of objects and Reasonsನಲ್ಲಿ ಹೇಳಿರ ಮತ್ತೆ ರೈತರಿಗೆ ಬೇಕಾದ ಒಂದು ಕ್ಲಾಜನ್ನು ಇದರಲ್ಲಿ ಸೇರಿಸಲಾಗಿದೆ ಅದು ಕ್ಲಾಸ್ 6ರ (ಸಿ) ನಲ್ಲಿ ನಮೂದಾಗಿದೆ. Undertaking the extensio of such sciences to the rural people of th State ಎಂತ ಹೇಳಿರ ತಕ್ಕದ್ದು ಬಹಳ ಚೆನ್ನಾಗಿದೆ. ಇದರಿಂದ ಹಳ್ಳಿಯವರು ಒಳ್ಳೆ ಉತ್ತಮ ಬೆಳೆ ತೆಗೆಯಲು ಅನಕೂಲವಾಗುತ್ತದೆ.

ಇನ್ನು ಕಾಲೇಜಿನ ಅಡ್ಮಿಷನ್ ವಿಚಾರವಾಗಿ ಕ್ಲಾಜ್ 5 (2)ರಲ್ಲಿ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಇದು ಕೂಡ ಉತ್ತಮವಾದ ಕ್ಲಾಜಾಗಿದೆ. ಹೀಗೆ ಕ್ಲಾಜ್ 6ರ ಸಬ್‌ಕ್ಲಾಸ್ (6) ಲ್ಲಿ to provide lectures and instructions for fie d workers, vil age le ders and other persons not enrolled as regular students of the University and gr nt certificates to them as may be precribed ಎಂತ ಹೇಳಿದ್ದಾರೆ. ಆದರೆ ಇದರ ಪ್ರಕಾರ ಕೆಲವು ಉತ್ತಮ ಕೆಲಸಗಳನ್ನು ಮಾಡಬಹುದಾಗಿದ್ದರೂ to grant certificats to them as may be prescribed ಎನ್ನತಕ್ಕ ಬಗ್ಗೆ ಯಾರಿಗೆ? ಯಾವ ಸಬ್‌ಜೆಕ್ಟನಲ್ಲಿ ಕೊಡಬೇಕು? ಎಂಬುದು ಸಮಂಜಸವಾಗಿ ಕಾಣುವುದಿಲ್ಲ. ಆದ್ದರಿಂದ ಈ ಪದಗಳನ್ನು ಈ ಕ್ಲಾಜಿನಿಂದ ಡಿಲೀಟ್ ಮಾಡಬೇಕೆಂದು ಹೇಳುತ್ತೇನೆ.

ಆದರೆ ಇದರಲ್ಲಿ ಈಗ ಒಂದು ತೊಂದರೆ ಏನು ಬಂದಿದೆ ಎಂದರೆ ಈ ದಿವಸ ಕರ್ಣಾಟಕ ಯೂನಿವರ್ಸಿಟಿಯಿಂದ ಕೆಲವು ಸರ್ಕಾರಿ ನೌಕರರನ್ನು ಇಲ್ಲಿಯ ಕಾಲೇಜಿಗೆ ವರ್ಗಾಯಿಸಲಾಗಿದೆ. ಅವರ ಪೋಸ್ಟುಗಳ ಬಗ್ಗೆ ಈಕ್ವೇಷನ್ ಆಗದೆ ಅವರಿಗೆ ಬಹಳ ತೊಂದರೆಯಾಗಿದೆ. ಮೊದಲು ಈ ಬಗ್ಗೆ ಒಂದು ಸಬ ಕಮಿಟಿ ಮಾಡಿ ಪ್ರತಿಯೊಬ್ಬ ನೌಕರನಿಗೂ ಅವರವರ ಸ್ಥಾನಮಾನಗಳನ್ನು ನಿಗದಿ ಮಾಡಬೇಕೆಂದು ಹೇಳುತ್ತೇನೆ. ಇದರಲ್ಲಿ ಟ್ರಾನ್ಸ್‌ಫರ್ ಆದ ಅಧಿಕಾರಿಗಳಿಗೂ, ನೌಕರರಿಗೂ ತೊಂದರೆ ಬಾರದ ಹಾಗೆ ನೋಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಸೆಕ್ಷನ್ 9ರಲ್ಲಿ officers of the university ಎನ್ನುವುದರಲ್ಲಿ 10ನೇ item Director of Instruction, Dharwar ಎಂದು ಇದೆ. Director of Instruction, Agricultural College, Hebbal ಎಂದು ಇರುವಂತೆಯೇ ಇದು ಸಹ Director of Instruction, Agricultural College, Dharwar ಎಂದು ಮಾಡಬೇಕು.

5-00 P.M.

ವೈಸ್ ಛಾನ್ಸಲರ term of office ಮೂರು ವರ್ಷ ಎಂದು ಹೇಳಿದ್ದಾರೆ. ಈಗಾಗಲೇ ನನ್ನ ಸ್ನೇಹಿತರು ಹೇಳಿದಂತೆ ಐದು ವರ್ಷವಿರಬೇಕು. ಅದೇ ರೀತಿ ಬೋರ್ಡ್ ಸಹ ಐದು ವರ್ಷ ಕಾಲಕ್ಕೆ ರಚನೆ ಮಾಡಬೇಕೆಂದು ಈ ಸಮಯದಲ್ಲಿ ಹೇಳಬಯಸುತ್ತೇನೆ.

ಸೆನೇಟ್‌ನಲ್ಲಿ ಈ ಸಭೆಯಿಂದಲೂ ಪ್ರತಿನಿಧಿಗಳಿರಬೇಕು, ಅದರಿಂದ ಒಳ್ಳೆಯದಾಗುತ್ತದೆಂದು ನಮ್ಮ ಸ್ನೇಹಿತರು ಹೇಳಿದರು. ಅದನ್ನು ಕೂಡ ನಾನು ಅನುಮೋದಿಸುತ್ತೇನೆ.

ಕರ್ಣಾಟಕ ಮತ್ತು ಮೈಸೂರು ವಿಶ್ವವಿದ್ಯಾನಿಲಯ ಕಾನೂನುಗಳಲ್ಲಿರುವಂತೆ ಇದರಲ್ಲಿ ಕೆಲವು ಬದಲಾವಣೆಗಳನ್ನು ಮಾಡಲು ಒಂದು ತಜ್ಞರ ಸಮಿತಿಯನ್ನು ನೇಮಿಸಿ ಅದರ ಮುಖಾಂತರ ಇವುಗಳನ್ನೆಲ್ಲ ಪರಿಶೀಲಿಸಿ ಸರಿಯಾದ ಮಾರ್ಗದಲ್ಲಿ ಹೋದಲ್ಲಿ ಇದು ಯಶಸ್ವಿಯಾಗುತ್ತದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

(Some Members rose)

Mr. SPEAKER.—I do not think there will be any chance for any body.

Sri SANJEEVANATH AIKALA (Suratkal).—About selection of place I want to say one or two poins.

ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಈ ಮಸೂದೆಯನ್ನು ಗೊತ್ತಾದ ಕಾಲದಲ್ಲಿ ಅವಸರವಾಗಿ ಚರ್ಚೆ ಮಾಡಿ ನಾವು ಪಾಸ್ ಮಾಡುವುದರ ಔಚಿತ್ಯವಾದರೂ ಏನು ಎಂಬುದ ನನಗೆ ತಿಳಿಯಲಿಲ್ಲ. ಈಗ ಶ್ರೀ ನಾಗ ಅಣ್ಣಾರಾಯರು ಹೇಳಿರುವ ರೀತಿ ಮತ್ತು ಕೆಲವು ಸದಸ್ಯರು ಹೇಳಿರುವ ರೀತಿ ನೋಡಿದರೆ ಕೇಂದ್ರದಿಂದ ಹಣ ಬರುತ್ತದೆ, ಅಮೆರಿಕದವರಿಂದ ಕೂಡ ಹಣ ಬರುತ್ತದೆ. ಅದೆಲ್ಲ lapse ಆಗುತ್ತದೆಂದು ಯಾವ ಯಾವದೋ ಸೇರಿಸಿ ಒಂದು ವಿಶ್ವವಿದ್ಯಾನಿಲಯವನ್ನು ಮಾಡಬೇಕು ಎಂದು ಹೇಳುವುದಾದರೆ............

Mr. SPEAKER.—My difficulty is hat I have heard the speeches. They ge into details which are to be worked out at a late stage. If we spend time on these details at this stage, what shall I do?

ಶ್ರೀ ಎಸ್. ಗೋಪಾಲ ಗೌಡ.—ವಿಶ್ವವಿದ್ಯಾನಿಲಯಗಳು research, Post-graduate Course ಇಂಥವನ್ನೆಲ್ಲ handle ಮಾಡುವ ಸ್ಥಾಪನೆ ಮಾಡುವುದು ಸರಿ. ಆದರೆ ಕಟ್ಟಡಗಳ ಮೇಲೆ ಕೋಟ್ಯಾಂತರ ರೂಪಾಯಿಗಳನ್ನು ಹಾಕುವುದು ಸರಿಯೇ ಎನ್ನುವ ಮೂಲ ಭೂತ ಪ್ರಶ್ನೆಗಳು ಚರ್ಚೆಯಾಗಬೇಕು........

Mr. SPEAKER.—My difficulty comes in when I allow Members to participate, they go at a tangent and it does not look nice for me to say 'sit down' every now and then. What time does the Hon'ble Minister require for reply?

Sri G. NARAYANA GOWDA.—Half an hour, Sir.

Mr. SPEAKER.—There are 18 amendments.

Sri V. S. PATIL (Belgaum-I).—Of course, I had not devoted my attention to his Bill, Sir, But when I listened to persons who have studied, it appears that it is a very important Bill.

Mr. SPEAKER The importance is that the University Grants Commission has not been consulted. Are we discussing these details in passing that Bill now?

Sri V. S. PATIL It appears the points raised by some Hon'ble Members do deserve some consideration and my suggestion is this. Time may be extended for the consideration of this subject, Sir.

Mr. SPEAKER.—From 4-30 P.M. it was extended We shall sit till 8 of the clock. My difficulty comes in when every Hon'ble Member wants to speake I should like every one of you to appreciate that I cannot make any distinction.

Sri SANJEEVANATH AIKAL.—Sir, I will take only five minutes and no more Sir.

Mr. SPEAKER.—Sir, I welcome the measure for the establishing of an Agricultural University in Mysore State, this being the second in the the whole of India, the first having been a ready established in Redrapur in U.P. This is the second and another is to be established in Gujarat.

Mr. SPEAKER.—The second one is established at Gujarat. I have gone and seen it. I have brought all the literature also.

Sri SANJEEVANATH AIKAL.- I beg to be corrected, Sir. Sir, we must be thankful to the Central Government for sanctioning the third university to be located at Mysore State. Neverthel ss our Government has not visualised the full implication of establishing this university. They have not foreseen the correct picture that will be available after the establishment of the university. Dr. Srimali Committee which

went into the question of establishment of rural agricultural university and rural institute for higher education, has clearly said, about the location of the place, the following points.

Extract from Rural Higher Education—Annual—issued by the Ministry of Education—1958

"It can hardly be denied that the men and women who live most closely related to the rhythm of the natural world possess a greater integration among themelves than is common among those incities. They are more serene and inwardly poised, less susceptible to fluctuations in spiritual moods and depression of material resources." Further, "in the great cities, relations tend to be episodic, Kalidoscopic, as in a cinema film; in the village they continue in an enduring setting as in a saga", and "the countryman finds his food for thought in his own experience of life rather than in literature or views from the outside world. The country man may not be a philosopher, but he is a moralist." (page 6).

* * * *

Again in page 19 of the same book it is said :

"A Rural institute should be founded ideologically on the conviction that there are certain material, mental and spiritual values in the ancient rural civilisation and culture of India which require to be rediscovered and renourished and that not necessarily, in conflict with the values of the scientific and technological developments in the modern world."*

They emphatically say that such rural university should be established in a rural background. If you only go into ancient history, we are aware that our ancient universities. The Taksha sila and the famous Nalanda, were established in the rural parts of the country. Again Sir, Mahatma Gandhiji had his Ashram not in the cities, but in midst villages. He thought that an institution which is supposed to be of help and assistance to villagers must be in the village itself. So, I think the selection of the place—Hebbal as the place to found this university is highly erroneous.

Then again about the various provisions of the Bill, many of my Hon'ble friends have spoken at length. I only say that the Hon'ble Minister should find his way to change the location of the University to some other place. I understand, already a private institution has come forward to establish a Forest University and an Agricultural University somewhere at Bhadra Reservoir.

** Expunged as ordered by the Chair.

(SRI SANJEEVANATH AIKALA)

There was a proposal and I think the Government may be knowing about it They wanted to start a Forest University on the model of the Agricultural University.

Sri G. NARAYANA GOWDA.—Government are not aware of any such thing.

Sri SANJEEVANATH AIKALA.—Anyhow, I suggest that the Government must see the feasibility of starting this University in a rural part. I wish the Minister changes the location of this University in the rural parts. I welcome this Bill.

† Sri GANJI VEERAPPA (Harihar).—Mr. Speaker, Sir, I very much welcome this Bill because in a matter like a University for Agricultural Science, it is a good effort of the Mysore Government that they have thought of establishing a University like this with the help of the Centre and of America. But, when we go into the details, I cannot help but express that we are disappointed, especially, in the matter of autonomy to the University. The Minister himself is a Member of the syndicate and senate for a long time. After knowing the things, I wish a better autonomy ......

Sri G. NARAYANA GOWDA.—May I know the number of elected members on the present Senate of Mysore ?

Sri GANJI VEERAPPA.—There are four out of fourteeen. Not even that is here.

Mr. SPEAKER.—Have you given notice of any amendment ?

Sri GANJI VEERAPPA.—No, but as a Member, am I not entitled to criticise ?

Mr. SPEAKER.—You are certainly entitled. I wanted to know whether you have given any amendment or not.

Sri GANJI VEERAPPA.—Sir, you know my difficulty ; I cannot send amendment.

Mr. SPEAKER.—I am not aware of any such disability. I am prepared to receive it.

Sri GANJI VEERAPPA.—Any way, I am pointing out some of these defects so that even at this stage, if the Minister makes up his mind, he can send the Bill to a Select Chmmittee or as Mr. Anna Rao suggested to suggest certain amendments from the Government itself. Sir, this second University of its kind in the South and I wish it to be a model Bill, a Bill to be copied by others.

About the Board of Regents, there are two Universities existing here and I expect some representation from the two Universities, at least one representative from the Mysore University and the other from the Karnataka University or the two Vice-Chancellors had been included in this Board of Regents. It was pointed out that some members of this House and members of the Upper House should also be in this. Sir, this Board of Regents is an appointing body. His offices are mentioned like the Director of Research, Director of Extension, Director of Instruction and so on. All these high dignitories are all to be appointed by this

Board. Sir, I think, for the appointment of such high places, there must be a Board of Appointment. It is a lacuna here. I do not know whether they propose to make provision for this while framing the rules for appointing these people. That is one point. Then, Sir, with regard to the authorities of the University, no doubt they have said, such other authority as the Board of Regents deem fit. As you may be aware, Sir, one person is exclusively set apart for the examinations. It is necessary to have a person exclusively for these examinations.

With regard to the Dean, in clause 14, it is provided for a Dean and the Dean is a person appointed by the Chancellor on the recommendation of the Board and he will be a whole-time officer of the University. It requires a little bit clarification. With regard to scope of powers, whether it excluded the Dean of the Faculties must be clarified. This is going to be an independent body.

With regard to Heads of Divisions, are they to be appointed by the Vice-Chancellor in consultation with the Board of Regents or whether these appointments are being made by virtue of seniority? I do not know what it is.

MR. SPEAKER.—What is your suggestion ?

SRI GANJI VEERAPPA.—Sir, in this matter, let the Government take the advise of the Legal Department and make a provision for the constitution of a Board of Appointments. Then, all these difficulties would be solved. That is my suggestion. Any way, I do not want to into the other details. Sir, perhaps, the Minister is anxious that the University must come into being very early. Whatever suggestions he can implement in the oppositions already made here, let him do so. As regards the other things, it is open for him to bring amendments to this Bill in the next session. With these remarks, I welcome this Bill and I commend it for the acceptance of the House.

(Several Members rose)

MR. SPEAKER.—I am calling the Minister to reply. I am unable to give any more time for Members.

ಶ್ರೀ ಎಸ್. ಗೋಪಾಲಗೌಡ.—ಒಂದು ಮಾತು ಹೇಳಬೇಕಾಗಿದೆ. ಕೆಲವು ಪದಗಳ ಅರ್ಥ ಸರಿಯಾಗಿಲ್ಲ.

"Agriculture means, basic and applied sciences". Does it mean only that ?

MR. SPEAKER.—Defination is intended only for the purpose of the Bill. It is not dictionary meaning nor is it a glossary.

ಶ್ರೀ ಎಸ್. ಗೋಪಾಲಗೌಡ.—ಈ ಮಸೂದೆಯ ಬಗ್ಗೆ ಇಷ್ಟು ಅವಸರ ಮಾಡುವುದು ಸಮಂಜಸವಲ್ಲ ಎಂದು ಹೇಳುತ್ತೇನೆ.

MR. SPEAKER.—The Hon. Member seems to be unconscious or oblivious of certain things. He must know that the Bill should be closed today. Let the House agree that it should go on for two days. I have no objection.

ಶ್ರೀ ಎಸ್. ಗೋಪಾಲಗೌಡ.—ನಾನು ಮಾತನಾಡಿ ನನ್ನ ಅಭಿಪ್ರಾಯ ವ್ಯಕ್ತಪಡಿಸಲು ಇಚ್ಛಿಸುತ್ತೇನೆ. ಈ ಮಸೂದೆಯ ಚರ್ಚೆ ಕಾಲ ಸ್ವಲ್ಪ ಹೆಚ್ಚಿಸಬೇಕು ಎಂದು ಹೇಳುತ್ತೇನೆ.

Mr. SPEAKER.—The Hon. Member has said enough. If he can convince the House I have no objection.

ಶ್ರೀ ಎಸ್. ಗೋಪಾಲಗೌಡ.—ನಮಗೆ ಮಾತನಾಡಲು ಅವಕಾಶ ದೊರೆಯುದೇ ಇದ್ದರೆ ನಾವು ಇಲ್ಲಿ ಇದ್ದು ಏನು ಮಾಡುವುದು ಸ್ವಾಮಿ ? ಸ್ವಲ್ಪ ಕಾಲ ಹೆಚ್ಚಿಸಿ, ನನಗೆ ಮಾತನಾಡಲು ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Sri R. N. LAKSHMI PATHI (Gowribidnur).—Some Members speak very rarely. They may like to speak now.

Mr. SPEAKER—There are cases where for 5 years a Member has not been able to get a chance. What can we do ? The structure is like that. If everyyone of the 208 Members wants to speak on every subject, what can I do ?

Sri G. NARAYAN GOWDA.—If the Hon. Members are so anxious, we may sit 30 minutes or 45 minutes more. I have no objection.

Mr. SPEAKER.—We will allow the debate to go on till 6 o' clock.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆರು ಗಂಟೆಗೆ ಸರಿಯಾಗಿ ಚರ್ಚೆ ಮುಗಿಸಬಹುದು ಆರು ಗಂಟೆಯಾವರೆಗೆ ಚರ್ಚೆಯ ಅವಧಿ ಹೆಚ್ಚಿಸಬಹುದು.

Mr. SPEAKER.—What will you do with the amendments. You do not seem to have a grip over it.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಚರ್ಚೆಯನ್ನು 6½ ಗಂಟೆಯ ವರೆಗೆ ಮುಂದುವರಿಸಿ ಉತ್ತರಕ್ಕಾಗಿ 15 ನಿಮಿಷ ತೆಗೆದುಕೊಂಡು ತಿದ್ದುಪಡಿಗಳನ್ನು ಅನಂತರ ತೆಗೆದುಕೊಳ್ಳಬಹುದು.

Mr. SPEAKER.—We will go on with the debate for the rest of the day and take up amendments tomorrow. These are things which should be co-ordinated between the whips, and not leave it to me and that too on the floor of the House. If the whips come to me during leisure time, I can talk about it.

ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ (ತಿಪಟೂರು).—ನಿಮ್ಮ ವ್ಹಿಪ್ ಈಗತಾನೆ ಬಂದಿದ್ದಾರೆ. ಇಷ್ಟೊತ್ತಿನ ವರೆಗೆ ಅವರು ಇರಲಿಲ್ಲ.

Mr. SPEAKER.—Where is your whip ? He sends me three slips, each contradictory to the other.

Sri K. PUTTUSWAMY (Minister for Muncipal Administration).—A suggestion was made that the House may, if it is pleased, sit till 7. Regarding the amendments, considering their number, the Chair may decide.

Mr. SPEAKER.—I am grateful to the Minister but if the ruling party also insist—so many requests have come from the party—my position becomes difficult. That is why the two whips should sit and help me. Otherwise I am rudderless. If the Minister knows how many slips I have received, he will understand.

Sri Gopal Gowda will speak now but only till 5.45 P.M. I would mention one thing. The last time he coolly ignored my calls to him to stop. Let him not do it to-day.

†**ಶ್ರೀ ಎಸ್. ಗೋಪಾಲಗೌಡ** (ತೀರ್ಥಹಳ್ಳಿ).–ಸ್ವಾಮಿ, ಮಾನ್ಯ ವ್ಯವಸಾಯ ಮಂತ್ರಿಗಳು ಸಭೆಯ ಮುಂದೆ ಚರ್ಚೆಗಾಗಿ ಮಂಡಿಸಿರುವ ವ್ಯವಸಾಯ ವಿಜ್ಞಾನಗಳ ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಶಾಸನ 1963 ಮಸೂದೆಯ ವಿಷಯದಲ್ಲಿ ಕೆಲವು ಮಾತುಗಳನ್ನು ಆಡಲೇಬೇಕೆಂದು ಅಪೇಕ್ಷೆ ಪಡುತ್ತೇನೆ. ಈಗಾಗಲೇ ಕೆಲವು ಮಾನ್ಯ ಸದಸ್ಯರು ಮಾತನಾಡಿ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಈ ಮಸೂದೆಯ ಉದ್ದೇಶ ಮತ್ತು ಸರಕಾರದ ಸದ್ಭಾವನೆ ಬಹಳ ಸ್ವಾಗತಾರ್ಹವಾದುದು. ಆದರೆ ಇಷ್ಟು ಅವಸರದಿಂದ ಈ ಮಸೂದೆ ಬಂದಿರತಕ್ಕಂಥ ಕ್ರಮ. ಮಾರ್ಗ ಅದು ಅಷ್ಟು ಸಮಂಜಸವಾಗಿಲ್ಲ ಎಂದು ಮಾತ್ರ ಹೇಳುತ್ತೇನೆ. ನಮಗೆ ಗೊತ್ತಿರುವ ಹಾಗೆ ಇಷ್ಟು

ಅವಸರ ಮುಖ್ಯವಾಗಿ ಯಾವ ಕಾರಣದಿಂದ ಉಂಟಾಯಿತು ಅಂದರೆ ಕೇಂದ್ರ ಸರ್ಕಾರ ಕೊಡ ತಕ್ಕಂಥ ಒಂದುವರೆ ಕೋಟಿ ರೂಪಾಯಿ ಸಹಾಯ ಧನದ ಜೊತೆಗೆ ನಾವೂ ಸ್ವಲ್ಪ ಹಣ ಹಾಕಿ ಇಂಥ ಒಂದು ಮಸೂದೆ ಮಾಡಿ, ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡಬೇಕು ಎನ್ನುವ ಅಭಿಪ್ರಾಯ ಹುಟ್ಟಿದಂತೆ ಕಾಣುತ್ತದೆ. ಈ ವಿಶ್ವವಿದ್ಯಾನಿಲಯ ಸ್ಥಾಪನೆಯಾದ ಮೇಲೆ ಒಂದು ವರ್ಷಕ್ಕೆ ಸುಮಾರು 25 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಈ ಮಾನ್ಯ ಸಭೆಯಲ್ಲಿ ಕೆಲವು ಸದಸ್ಯರು ಏನು ಒಂದು ಅಭಿಪ್ರಾಯ ವ್ಯಕ್ತಪಡಿಸಿದರು ಅಂದರೆ ಉಪಕರಣ ಮತ್ತು ಕಟ್ಟಡ ಕ್ಕಾಗಿ ಹೆಚ್ಚು ಹಣ ಹಾಕುವುದು ಉಚಿತವಲ್ಲ, ನಮ್ಮ ದೇಶದ ಈಗಿನ ಸ್ಥಿತಿಗತಿಗಳಿಗೆ ಇಂಥ ಖರ್ಚು ವೆಚ್ಚಗಳು ಸರಿಯಾಗಿದೆಯೇ? ಎನ್ನತಕ್ಕಂಥದ್ದನ್ನು ಸರಕಾರ ಪುನಃ ಪರಿಶೀಲನೆ ಮಾಡಬೇಕು ಎಂದು ತಿಳಿಸಿದ್ದಾರೆ. ಈ ತುರ್ತು ಪರಿಸ್ಥಿತಿ ದೇಶದ ಮುಂದೆ ಇರುವಾಗ್ಗೆ ಅನೇಕ ಕೆಲಸ ಕಾರ್ಯ ಗಳನ್ನು ಹಿಂದೆ ತಳ್ಳುತ್ತಿದ್ದೇವೆ. ಅದನ್ನು ದೃಷ್ಟಿಯಲ್ಲಿಟ್ಟುಕೊಂಡರೆ ಬಹುಶಃ ಬೆಂಗಳೂರಿನಲ್ಲಿ ಸ್ಥಾಪನೆಯಾಗತಕ್ಕಂಥ ಫೆಡರಲ್ ಯೂನಿವರ್ಸಿಟಿ ಅನಿವಾರ್ಯವಾಗಿ ಯಾವ ರೀತಿ ಮುಂದೆ ಹಾಕು ತ್ತಾರೆಯೋ ಅದೇ ರೀತಿ ಇದನ್ನು ಸಹ ಮುಂದೆ ಹಾಕುತ್ತಾರೆ ಏನೋ ಎಂದು ಕಾಣುತ್ತದೆ. ಇದರಲ್ಲಿ ಮಾನ್ಯ ಸದಸ್ಯರಾದ ಶ್ರೀ ಅಣ್ಣಾರಾಯರು ಒಂದು ಮುಖ್ಯವಾದ ವಿಷಯವನ್ನು ಸರಕಾರದ ಮುಂದೆ ಇಟ್ಟಿದ್ದಾರೆ. ಅವರು ಈ ಹಿಂದೆ ವಿದ್ಯಾಮಂತ್ರಿಗಳು ಕೂಡ ಆಗಿದ್ದರು. ಈ ವಿಷಯ ಅಷ್ಟು ಮಹತ್ವಪಡೆದಿಲ್ಲ. ಆದರೆ ಅವರ ಮಾತುಗಳಿಗೆ ಹೆಚ್ಚಿನ ಬೆಲೆ ಸರಕಾರ ಕೂಡ ಕೊಡಬೇಕಾಗು ತ್ತದೆ. ಈ ಮಸೂದೆಯಲ್ಲಿ ಈ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡುವ ಸ್ಥಳದ ವಿಚಾರದಲ್ಲಿ ಹೆಬ್ಬಾಳದಲ್ಲಿ ಎಂದು ಒಂದು ಶಬ್ದ ಸೇರಿಸಿದ್ದಾರೆ, ನಾನು ಹೆಬ್ಬಾಳ ನೋಡಿದ್ದೇನೆ. ಇಂಥ ಒಂದು ದೊಡ್ಡ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡುವುದಕ್ಕೆ ವಿಶಾಲವಾದ ಪ್ರದೇಶ, ಕೆರೆ, ನೀರಾವರಿ ಸೌಕರ್ಯ ಬೇಕಾಗುತ್ತದೆ. ಆದರೆ ವ್ಯವಸಾಯಕ್ಕೆ ಸಾಕಷ್ಟು ಭೂಮಿ ಹೆಬ್ಬಾಳದಲ್ಲಿಲ್ಲ. ಹೆಬ್ಬಾ ಳವು ಈಗ ಬೆಂಗಳೂರಿನ ಒಂದು ಭಾಗವಾಗಿದೆ. ದಿನದಿನಕ್ಕೆ ಬೆಂಗಳೂರು ನಗರ ಬೆಳೆಯುತ್ತಾ ಹೋಗುತ್ತಿದೆ.

ಹೆಬ್ಬಾಳಿನ ಸುತ್ತಮುತ್ತಲಿರುವ ಜಾಗದಲ್ಲಿ ಈಗಾಗಲೇ ಸೈಟುಗಳೂ, ಮನೆಗಳೂ ಏಳು ತ್ತಿವೆ. ಅಂಥ ಒಂದು ಸನ್ನಿವೇಶವಿರುವ ಪ್ರದೇಶದಲ್ಲಿ ಕೃಷಿಗೆ ಸಂಬಂಧಪಟ್ಟ ವಿಶ್ವವಿದ್ಯಾನಿಲಯ ವನ್ನು ಸ್ಥಾಪನೆ ಮಾಡುವುದಕ್ಕೆ ಅದು ಸರಿಯಾದ ಜಾಗವಲ್ಲ ಅನ್ನುವುದು ನನ್ನ ಅಭಿಪ್ರಾಯ ಕೂಡ ಆಗಿದೆ. ಸರ್ಕಾರದವರೂ ಮತ್ತು ಸಂಬಂಧಪಟ್ಟ ಅಧಿಕಾರಿಗಳೂ ಕೂಡ ಇದನ್ನು ಮನಗಾಣು ತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ಇದು ಬೆಳೆಯತಕ್ಕಂಥ ಸಂಸ್ಥೆ ಎಂದು ಎಲ್ಲರೂ ಯಾವ ಭಿನ್ನಾಭಿಪ್ರಾಯವೂ ಇಲ್ಲದೆ ಒತ್ತಿ ಹೇಳಿದ್ದಾರೆ. ಇದಕ್ಕೆ ಒಂದು ರೀತಿಯ ಗ್ರಾಮೀಣ ವಾತಾವರಣ ಇರಬೇಕು ಎನ್ನುವ ಮಾತನ್ನೂ ಹೇಳಿದ್ದಾರೆ. ಬೆಂಗಳೂರು ಸುತ್ತ ಮುತ್ತಲೂ ಇದಕ್ಕೆ ಇಂಥ ಒಂದು ವಾತಾವರಣ ಸಿಗುವುದಿಲ್ಲ. ಇದು ಎಲ್ಲಿಗೆ ಆಗಬೇಕೆಂದು ನಾನು ಹೇಳುವು ದಿಲ್ಲ. ಸೂಚ್ಯವಾಗಿ ಹೇಳಬಹುದಾದರೆ ಶಿವಮೊಗ್ಗ ಜಿಲ್ಲೆಯಲ್ಲಿ ಸಾಕಾದಷ್ಟು ಜಮೀನನ್ನು ಪಡೆದುಕೊಳ್ಳಲು ಅವಕಾಶವಿದೆ. ಬೇಕಾದಷ್ಟು ಕಾಲುವೆ, ನೀರಾವರಿ ಸೌಕರ್ಯಗಳೂ ಇವೆ; ಸಾಕಾದಷ್ಟು ವಿಸ್ತಾರ ಮಾಡಿಕೊಳ್ಳುವುದಕ್ಕೆ ಭೂಮಿಯೂ ದೊರೆಯುತ್ತದೆ. ಈಗಾಗಲೇ ಕೆಲವು ಈ ವ್ಯವಸಾಯದ ಕಾಲೇಜುಗಳು ಎಲ್ಲಿ ನಡೆಯುತ್ತವೆಯೋ ಅಲ್ಲಿಯೇ ಇದನ್ನು ಸ್ಥಾಪನೆ ಮಾಡುವ ಉದ್ದೇಶ ಇಟ್ಟುಕೊಂಡರೆ, ಇದು ದೂರದೃಷ್ಟಿಯಿಂದ ಸಫಲವಾಗುವುದಿಲ್ಲ ಎಂಬ ಒಂದು ಬಹಳ ಮುಖ್ಯವಾದ ವಿಷಯವನ್ನು ಸರ್ಕಾರದವರು ಗಮನಿಸಬೇಕು.

5–30 P.M.

ಎರಡನೆಯದಾಗಿ ಮಾನ್ಯ ಅಣ್ಣಾರಾವ್‌ರವರು ಹೇಳಿದ ಹಾಗೆ ಈಗ ಉತ್ತರ ಪ್ರದೇಶದಲ್ಲಿ ನೈನಿಟಾಲಿನಲ್ಲಿ ಸ್ಥಾಪನೆ ಮಾಡಿರತಕ್ಕಂಥಾದ್ದು ಹೇಗೆ ಡೆವಲಪ್ ಆಗಿದೆಯೋ, ಆ ರೀತಿ ಇದು ಆಗುವುದಿಲ್ಲ. ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿರುವ ಕಾಲೇಜು ಮತ್ತು ಹುಬ್ಬಳ್ಳಿ, ಧಾರ ವಾಡದಲ್ಲಿರುವ ಕಾಲೇಜುಗಳೆಲ್ಲವನ್ನೂ ಸೇರಿಸಿಕೊಂಡು ಈ Agricultural ವಿಶ್ವವಿದ್ಯಾನಿಲಯ ವನ್ನು ರಚನೆ ಮಾಡಲು ತಾವು ಹೊರಟಿದ್ದೀರಾ. ಆದರೆ ಈ ವಿಶ್ವವಿದ್ಯಾನಿಲಯದ ಉದ್ದೇಶಗಳನ್ನು ಸಾರ್ಥಕಗೊಳಿಸುವುದಕ್ಕೆ ನಿಮಗೆ ಆಗುವುದಿಲ್ಲ. ಕೇವಲ ಕಾಲೇಜುಗಳನ್ನು ನಡೆಸಿಕೊಂಡು ಹೋಗ ತಕ್ಕಂಥ ಆಡಳಿತದ ಹೊಣೆಗಾರಿಕೆಯನ್ನು ಈ ವಿಶ್ವವಿದ್ಯಾನಿಲಯದ ಬೋರ್ಡಾಗಲೀ ಅಥವಾ ಆಡಳಿತ ಸಂಸ್ಥೆಯಾಗಲಿ ಹೊರಬೇಕಾಗುತ್ತದೆಯೇ ಹೊರತು, ಕಾಲೇಜುಗಳಲ್ಲಿ ವ್ಯಾಸಂಗದ ಕಡೆ ಹೆಚ್ಚಾದಷ್ಟು ಗಮನ ಕೊಟ್ಟು ಅದು ಊರ್ಜಿತಕ್ಕೆ ಬರುವ ಚಿಹ್ನೆಗಳು ಕಂಡು ಬರುವುದಿಲ್ಲ. ಮೇಲಾಗಿ ಸಂಶೋಧನೆ ಮತ್ತು ಸ್ನಾತಕೋತ್ತರ ವಿದ್ಯಾಭ್ಯಾಸಕ್ಕೆ ಏನು ಒಂದು ಅವಕಾಶ ಕಲ್ಪಿಸಬೇಕೆಂದು

(ಶ್ರೀ ಎಸ್. ಗೋಪಾಲಗೌಡ)

ಹೇಳಿ ತಾವು ಅಭಿಪ್ರಾಯ ಪಡುತ್ತೀರೋ ಅದು ಇದರಲ್ಲಿ ಸಾರ್ಥಕವಾಗುವುದರಲ್ಲಿ ನನಗೆ ದೊಡ್ಡ ಅನುಮಾನ.

ಈ ಮಸೂದೆಯನ್ನು ತಾವು ಯಾರಾದರೂ ಆಮೂಲಾಗ್ರವಾಗಿ ಓದಿದರೆ ಇದರಲ್ಲಿ ಅನೇಕ ರೀತಿಯ ಲೋಪದೋಷಗಳಿವೆ. ಈ ನಾಮಕರಣದ ಅಧಿಕಾರವನ್ನು ಏನು ಇದರಲ್ಲಿ ಇಟ್ಟುಕೊಂಡಿದ್ದೀರೋ, ಆ ಒಂದು ಮುಖ್ಯ ವಿಷಯದ ಮೇಲೆ ಹೇಳಬೇಕೆಂದು ಮಾಡಿದ್ದೇನೆ. ಒಂದು ಕಡೆ ಈ ವಿಶ್ವವಿದ್ಯಾನಿಲಯಗಳು ಸ್ವಯಂ ಆಡಳಿತವನ್ನು ಉಳ್ಳಂಥ ಸಂಸ್ಥೆ ಅಂತ ಹೇಳುತ್ತೀರ. ಆದರೆ ಈ ಮಸೂದೆಯನ್ನು ನೋಡುತ್ತಾ ಹೋದರೆ, ಹೆಚ್ಚಿನ ಅಧಿಕಾರಗಳನ್ನು ಸರ್ಕಾರದವರೇ ತಮ್ಮ ಕೈಯಲ್ಲಿ ಇಟ್ಟುಕೊಂಡಿದ್ದಾರೆ. ಕೆಲವು ಸಂದರ್ಭಗಳನ್ನು ನೋಡಿದರೆ ಸರ್ಕಾರದವರು ಈ ಹೆಚ್ಚಿನ ಅಧಿಕಾರಗಳನ್ನು ಹೊಂದುವುದರಿಂದ ಪ್ರಯೋಜನವಿದೆಯೆಂದು ಅನಿಸುತ್ತದೆ. ಏಕೆಂದರೆ ಮೈಸೂರು ವಿಶ್ವವಿದ್ಯಾನಿಲಯದವರು ಎ. ಜಿ. ಆರ್. ಸಮಿತಿಯವರು, ಅವರನ್ನು ಏನೋ ಪ್ರಶ್ನೆಗಳನ್ನು ಕೇಳಿದಾಗ, ''ನಾವು ಸ್ವಯಂ ಸ್ವತಂತ್ರರು, ಆದ್ದರಿಂದ ನಿಮ್ಮ ಮುಂದೆ ಹೇಳಿಕೊಳ್ಳುವುದೇನೂ ಇಲ್ಲ'' ಎಂದು ಹೇಳಿದ್ದು ನೋಡಿದರೆ, ಎಷ್ಟು ಅಧಿಕಾರ ಬೇಕು ಅಷ್ಟು ಅಧಿಕಾರವನ್ನು ಸರ್ಕಾರ ಇಟ್ಟುಕೊಳ್ಳಲು ಅಲ್ಲಿ ಒಂದು ಸಲಹೆಯೂ ಇದೆ. ಅಂಥ ದೃಷ್ಟಾಂತಗಳನ್ನು ಹಾಗೆಯೇ ಅನೇಕ ವೇಳೆ ನೋಡಿದ್ದೇವೆ. ಏನಾದರೂ ವಿಶ್ವವಿದ್ಯಾನಿಲಯಗಳಲ್ಲಿ ಘಟನೆಗಳು ನಡೆದರೆ, ಅವುಗಳ ಬಗ್ಗೆ ಇಲ್ಲಿ ಪ್ರಶ್ನೆ ಕೇಳಿದಾಗ, ಅವುಗಳು ಅಟಾನಮಸ್ ಬಾಡಿಗಳಾಗಿರುತ್ತವೆ, ಇಲ್ಲಿ ಅವುಗಳ ಬಗ್ಗೆ ಚರ್ಚಿಸುವುದಕ್ಕೆ ಅವಕಾಶವಿಲ್ಲ ಎಂದು ಸರ್ಕಾರದವರು ಉತ್ತರ ಕೊಟ್ಟಿದ್ದನ್ನು ನೋಡಿದರೆ ಈ ಸನ್ನಿವೇಶಗಳನ್ನು ಗಮನಕ್ಕೆ ತೆಗೆದುಕೊಂಡರೆ, ಆಗ ಕೆಲವು ಅಧಿಕಾರಗಳನ್ನು ಸರ್ಕಾರದವರು ಹೊಂದಲು ಅವಶ್ಯಕವೇನೋ ಎಂದು ಒಂದು ಸಲ ಅನ್ನಿಸುತ್ತದೆ. ಆದರೆ ಇದರಲ್ಲಿ ಏನು ಅಧಿಕಾರವನ್ನು ಸರ್ಕಾರದವರು ಇಟ್ಟುಕೊಂಡಿದ್ದಾರೆಯೋ ಅಷ್ಟು ಬೇಕೆ. ಇಲ್ಲಿ ಒಂದು ಬರೀ ಉದಾಹರಣೆ ಹೇಳುತ್ತೇನೆ.

''Such other purposes as the State Government, may, by Notification in the Official Gazette specify.''

ಅಂಥ ಹೇಳಿದ್ದಾರೆ. ಈ notification, orders, ಸರ್ಕಾರದವರು ಒಂದು ಸಲ ಷುರು ಮಾಡಿದರೆ, ಅವು ತಾನಾಗಿಯೇ ಮುಂದುವರಿಯುತ್ತಿರುತ್ತವೆ. ಈಗ ಒಂದು ಸ್ಕೀಮು ಪ್ರಾರಂಭ ಮಾಡಿದರೆ, ಅಮೇರಿಕಾಕ್ಕೆ ಹೋಗಿ ಬಂದವರು ಅದನ್ನು ಮುಚ್ಚಿ ಅಂತ ಹೇಳುತ್ತಾರೆ ಎಂದು ಹೇಳಿ ಮುಚ್ಚುತ್ತೀರಾ; ಹೀಗೆಲ್ಲಾ ಎಲ್ಲಾ ಕಾಲೇಜುಗಳಲ್ಲಿಯೂ ಮಾಡುತ್ತಾ ಇದ್ದಾರೆ. ಈಗ ಒಂದು ಕಾಲೇಜಿನಲ್ಲಿ Instruments mechanics ಎಂಬ ವಿಭಾಗ ಆದರೆ, ಅಲ್ಲಿ ಬೇಕಾದಷ್ಟು ರಾಜಕೀಯ ನಡೆದಿದೆ. ವಿದ್ಯಾಭ್ಯಾಸ ಸಾಧ್ಯವಾದ ಮಟ್ಟಿಗೂ ರಾಜಕೀಯದಿಂದ ದೂರವಿರಬೇಕು, ರಾಜಕೀಯದ ಕಳಂಕ ಅದರ ಹತ್ತಿರ ಬರಬಾರದು ಅಂತ ನಾವೆಲ್ಲರೂ ಸಾಮಾನ್ಯವಾಗಿ ಹೇಳುತ್ತಾ ಬಂದಿದ್ದೇವೆ.

ಆದರೆ ಎಲ್ಲಾ ವಿದ್ಯಾಸಂಸ್ಥೆಗಳೂ ಹೆಚ್ಚಾಗಿ ರಾಜಕೀಯಕ್ಕೆ ತುತ್ತಾಗಿ, ಬಲಿಯಾಗಿ, ನರಳುತ್ತಿವೆ. ನಾಮಕರಣ ಎಲ್ಲಿ ಇರುತ್ತದೆಯೋ ಅಲ್ಲಿ ರಾಜಕೀಯ, ಹಸ್ತಕ್ಷೇಪ ಇದ್ದೇ ಇರುತ್ತದೆ. ಈ ಎಲ್ಲ ದೃಷ್ಟಿಯಿಂದ ಏನಾಗಿದೆಯೆಂದರೆ ಈ ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳಿಗೆ ಮತ್ತು ಆಡಳಿತಗಾರರಿಗೆ ಯಾವಾಗಲೂ, ನಿರಂತರವಾಗಿ ಒಂದು ಭಯ ಇದ್ದೇ ಇರುತ್ತದೆ. ಅದೇನೆಂದರೆ ಹೊರಗಿನವರು ಯಾರು ಯಾವಾಗ ಬರುತ್ತಾರೆಯೋ, ತಮಗೆ ಪ್ರಮೋಷನ್ ಸಿಗುತ್ತದೆಯೋ ಇಲ್ಲವೋ ಆದ್ದರಿಂದ ಕಾರ್ಯಾಂಗದ ಕೃಪಾಕಟಾಕ್ಷದಲ್ಲಿರಬೇಕು ಅನ್ನುವುದು ಅದಕ್ಕೋಸ್ಕರ ಎಂ. ಎಲ್. ಎ. ಗಳನ್ನು ಹಿಡಿದುಕೊಂಡು ಓಡಾಡುತ್ತಾರೆ, ಎಂ. ಎಲ್. ಎ.ಗಳನ್ನು ಹಿಡಿಯುವುದಕ್ಕೆ ಬೆಂಗಳೂರಿಗೆ ಬರಲು ಶುರು ಮಾಡುತ್ತಾರೆ. ವಿಶ್ವವಿದ್ಯಾನಿಲಯದ ಉದ್ಯೋಗಸ್ಥರು ತುಂಬಾ ಬುದ್ಧಿವಂತರಾಗಿರುತ್ತಾರೆ, Ph.D. ತೆಗೆದುಕೊಂಡಿರುತ್ತಾರೆ. ಆದರೆ ಒಬ್ಬೊಬ್ಬ ಎಂ. ಎಲ್. ಎ. ಕಚ್ಚೆ ಹಿಡಿದುಕೊಂಡು. ಅವನ ಹಿಂದೆ ಬೆಂಗಳೂರು; ಮೈಸೂರಿಗೆ ಓಡಾಡುತ್ತಿರುತ್ತಾರೆ. ನೂರಾರು ಜನ ಎಂ. ಎಲ್. ಎ.ಗಳಿಗೆ ಪಾಠ ಹೇಳಿದಂಥ, ಹೇಳುವಂಥ ಈ ಮಹಾ ಪಂಡಿತರುಗಳ ಗತಿ ಹೀಗಾದರೆ ಏನು ಹೇಳೋಣ? ಈ ಎಂ. ಎಲ್. ಎ.ಗಳ ಬಾಲ ಹಿಡಕೊಂಡು ತಿರಗಾಡುತ್ತಿರುವ ಇವರನ್ನು ನೋಡಿ ನನಗೆ ಎಷ್ಟೋ ಸಲ ಪಶ್ಚಾತ್ತಾಪವಾಗಿದೆ; ಇವರನ್ನು ಈ ಸ್ಥಿತಿಗೆ ಇಳಿಸಿದ್ದೇವಲ್ಲಾ ಎಂದು ವಿಷಾದವಾಗುತ್ತದೆ. ದೊಡ್ಡ ದೊಡ್ಡ ಹುದ್ದೆಯಲ್ಲಿದ್ದು ಸಾವಿರಗಟ್ಟಲೆ ಸಂಬಳ ತೆಗೆದುಕೊಳ್ಳುತ್ತಿರುವವರು ಏಕೆ ಇದನ್ನು ಮಾಡುತ್ತಾರೆಂದರೆ, ''ನನ್ನ ಅಧಿಕಾರ ಎಂದು ಕಳೆದುಹೋಗುತ್ತದೋ'' ಎಂಬ ಕತ್ತರಿ ಅವರ ತಲೆ ಮೇಲೆ ಕೂತು ತೂಗಾಡುತ್ತಾ ಇರುತ್ತದೆ, ಅದನ್ನು ಬಚಾವು ಮಾಡಿಕೊಳ್ಳುವುದರಲ್ಲಿ ಇವರೂ ರಾಜಕಾರಣಿಗಳೂ ಆಗಿ ಬಿಡುತ್ತಾರೆ

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಎಂ. ಎಲ್. ಎ ಗಳ "ಬೌಲ" ಹಿಡಕೊಂಡು ಓಡಾಡುತ್ತಾರೆ ಅನ್ನುವುದು ಸರಿಯೇ?

ಶ್ರೀ ಎಸ್. ಗೋಪಾಲಗೌಡ.—ನಾನು ಏನು ಹೇಳಿದೆ ಅನ್ನುವುದು ಜ್ಞಾಪಕವಿಲ್ಲ. ಹಾಗೆ ಹೇಳಿದ್ದರೆ ನನ್ನನ್ನು ಕ್ಷಮಿಸಿ, ಸ್ವಾಮಿ.

Mr. SPEAKER.—Administration, mal-administration with regard to the other matters has nothing to-do with the provisions of the Bill. That is a point to be agitated under the Budget.

ಶ್ರೀ ಎಸ್. ಗೋಪಾಲಗೌಡ.—ಆದ್ದರಿಂದ ಈ ಅಧಿಕಾರಗಳನ್ನು ನಾವು ಹೆಚ್ಚು ಇಟ್ಟುಕೊಳ್ಳುವುದರಿಂದ, ಈ ಮಸೂದೆಯನ್ನು ಮಾಡಿದರೂ ಕೂಡ ಪ್ರಯೋಜನವಾಗುವುದಿಲ್ಲ. ವಿಶ್ವವಿದ್ಯಾನಿಲಯದವರಿಗೆ ಮಾನಸಿಕವಾಗಿ ಒಂದು ಸಮಾಧಾನಕರವಾದ ವಾತಾವರಣವನ್ನು ಒಳಗಡೆ ಉಂಟುಮಾಡುವುದಿಲ್ಲ. ಪ್ರತಿಸಲವೂ ಹೊರಗಡೆಯಿಂದ ಏನು ಪ್ರತಿಕ್ರಿಯೆ ಉಂಟುಮಾಡುತ್ತಾರೋ ಎಂಬ ಭಯದಿಂದ ತಮ್ಮ ಕೆಲಸ ಕಾರ್ಯಗಳನ್ನು ಬಿಟ್ಟು ಕೂತುಕೊಳ್ಳಬೇಕಾಗುತ್ತದೆ. ಸರ್ಕಾರದವರು ಇಷ್ಟೊಂದು ಅಧಿಕಾರವನ್ನು ತಮ್ಮಲ್ಲಿ ಇಟ್ಟುಕೊಂಡರೆ, ವಿಶ್ವವಿದ್ಯಾನಿಲಯ ಅಂತ ಹೇಳಿ ಹೆಸರನ್ನು ಹೇಳಿಸಿಕೊಂಡರೂ ಕೂಡ, ಅದು ಏನೊಂದು ಕೆಲಸವನ್ನು ಮಾಡುವುದಕ್ಕೆ ಸಾಧ್ಯ; ಮುನಿಸಿಪಾಲಿಟಿಗಳನ್ನು ಮಂತ್ರಿಗಳು ಸೂಪರ್‌ಸೀಡ್ ಮಾಡಿದಂತೆ ಈ ಬೋರ್ಡಿನ ಹಣೆಬ್ಬರಹ ಆಗುತ್ತದೆ. ಯಾವ ಕ್ಷಣದಲ್ಲಿ ಬೇಕಾದರೂ, ಏನಾದರೂ ಕಾರಣ ಕೊಟ್ಟು ಸೂಪರ್‌ಸೀಡ್ ಮಾಡುವ, ರದ್ದುಗೊಳಿಸುವ ಅಧಿಕಾರ ಸರ್ಕಾರದವರು ಇಟ್ಟುಕೊಂಡಿದ್ದಾರೆ.

ಮತ್ತೆ ಎಲ್ಲ ವಿಶ್ವವಿದ್ಯಾನಿಲಯಕ್ಕೆ ಬೇಕಾದ ಆಭರಣ, ಮುಕುಟಗಳು ಇವೆ. Pro-chancellor Vice-chancellor ಇರಲೇಬೇಕು, ಈ ಒಂದು ಪ್ರಪಂಚದಲ್ಲಿ ಇದು ಬಹಳ ಮಟ್ಟಿಗೆ ಬಂದುಬಿಟ್ಟಿದೆ. ಒಂದು ಕಾನ್‌ವೊಕೇಷನ್ನಿನಲ್ಲಿ ಭೂಷಣವಾಗಿ ಕೂತುಕೊಳ್ಳುವುದಕ್ಕೆ ಯಾರ್‍ಯಾರು ಬೇಕೋ ಅಂಥವರೆಲ್ಲಾ ಇದ್ದಾರೆ; ಅದನ್ನು ಬಹುಶಃ ಮಾನಸಿಕವಾಗಿ ತಡೆಹಾಕುವುದಕ್ಕೆ ಈ ದೇಶದಲ್ಲಿ ಕೆಲಸ ಮಾಡುವವರಿಗೆ ಸಾಧ್ಯವಿಲ್ಲ.

ಇದರಲ್ಲಿ ವಿಚಾರ ಮಾಡಬೇಕಾದಂಥಾದ್ದು ಮುಖ್ಯವಾಗಿ ಏನು ಇದೆಯೆಂದರೆ ಈ ನಾಮಿನೇಷನ್ಸ್ ವಿಷಯ. ಇದರಲ್ಲಿ ಮಾನ್ಯ ವ್ಯವಸಾಯ ಮಂತ್ರಿಗಳು ಒಂದು ಸಲ Progressive farmers ಅಂತ ಹಿಂದೆ ಹೇಳಿದರು.

ಈ ದೇಶದಲ್ಲಿ ರೈತ ವರ್ಗದವರು ಕೆಲವರು ಅಮೆರಿಕಾಕ್ಕೆ ಹೋಗಿ ಬಂದರು. ರೈತರು ಅಂತ ಹೇಳಿಕೊಂಡು ಕಂಚಿ, ಮಧುರೆ, ರಾಮೇಶ್ವರ ಅಲ್ಲೆಲ್ಲಾ ಟೂರಿಸ್ಟು ಬಸ್‌ನಲ್ಲಿ ಓಡಾಡುತ್ತಾ ಇದ್ದಾರೆ, ಅವರ ಹೆಸರಿನಲ್ಲಿ ಈ ರೀತಿ ಎಲ್ಲಾ ಆಗುತ್ತಿರುವುದನ್ನು ನೋಡುತ್ತಾ ಇದ್ದೇನೆ. ಈ ತರಹ ರೈತರು ಓಡಾಡುವುದು ಏಕೆ, ಏನು ಎಂಬ ಪ್ರಶ್ನೆ ಬರುತ್ತದೆ. ಇಲ್ಲಿ ಪ್ರೋಗ್ರೆಸಿವ್ ಫಾರ್ಮರ್ಸ್ ಎಂದು ಇದೆ ಇದನ್ನು ಹೇಗೆ ಡಿಫೈನ್ ಮಾಡುತ್ತೀರಿ ? ಇನ್ನು ಯಾರು ಇದ್ದಾರೆ ಪ್ರೋಗ್ರೆಸೀವ್ ಫಾರ್ಮರ್ಸ್ ಅಂತ ಹುಡುಕಬೇಕು. Persons interested in agricultural Education ಅವರು ಐದು ಜನ. ಯಾರಿಗೆ interest ಇಲ್ಲ ? ಯಾರಾದರೂ ಒಬ್ಬರು ಹೇಳಲಿ ನಮಗೆ interest ಇಲ್ಲ ಎಂದು ನೋಡೋಣ. ನಮಗೆ ಪ್ರತಿಯೊಬ್ಬರಿಗೂ ಬಹಳ ಆಸಕ್ತಿ ಇದೆ. ಎಷ್ಟು ಆಸಕ್ತಿ ಇದೆ ಎಂದರೆ ವ್ಯವಸಾಯದ ಹೊರತು ಬೇರೆ ವಿಷಯ ಯೋಚನೆ ಮಾಡುವುದಕ್ಕೂ ಕೂಡ ಸಾಧ್ಯವಿಲ್ಲ, ಅಷ್ಟು ಆಸಕ್ತಿ ನಮಗೆ ಏಕೆಂದರೆ 100ಕ್ಕೆ 80 ಜನ ವ್ಯವಸಾಯದಲ್ಲೇ ಜೀವನ ಮಾಡುವವರು, ಆದ್ದರಿಂದ ಆಸಕ್ತಿ ಇಲ್ಲ ಎಂದು ಹೇಳುವ ಪ್ರಶ್ನೆ ಇಲ್ಲ. ಆರಿಸುವಾಗ ಹೇಗೆ ಆರಿಸಬೇಕೆನ್ನುವುದು ; ಆಧಾರವೇನು ? ಈ ರೀತಿ ನಿಯಮಗಳನ್ನು ಹಾಕುವುದರಿಂದ ಅಪಾಯ ಜಾಸ್ತಿಯಾಗುತ್ತದೆ. ಸ್ನೇಹಿತರು ಆಗಲೇ ಹೇಳುತ್ತಾ ಇದ್ದರು. ಈಗಾಗಲೇ ನಾಮಕರಣವಾಗಿದೆ ಎಂದು. ಕೆಲವು ಸಲ ಎತ್ತು ಹಾರುವುದಕ್ಕೆ ಮುಂಚೆ ಗೋಣಿ ಹಾರಿತು ಎಂದು ಗಾದೆ ಇದೆ, ಆ ರೀತಿ ಇದು ಆಗುತ್ತದೆ. ಎಲ್ಲ ಅಧಿಕಾರಿಗಳನ್ನು ಎಕ್ಸ್ ಆಫೀಷಿಯೋ ಮೆಂಬರ್ಸ್ ಆಗಿ ಇಟ್ಟುಕೊಂಡಿದ್ದೀರಿ. ಈ constitution of board ಎನ್ನುವುದು ಸಮಂಜಸವಾಗಿಲ್ಲ ಎಂದು ಮಾತ್ರ ಹೇಳುತ್ತೇನೆ. ಇದಕ್ಕೆ ನನ್ನ ಮೂಲವಿರೋಧವೇನೆಂದರೆ ಇಲ್ಲಿ ಉದ್ದೇಶಗಳೇ ಒಂದು ಇವೆ. ನೀವು ಕಾನೂನಿನಲ್ಲಿ ಬರೆದಿರತಕ್ಕ ವಿಷಯಗಳೇ ಮತ್ತೊಂದು ಇದೆ. ನಿಮ್ಮ ಉದ್ದೇಶ ಏನಿದೆಯೋ ಅದರ ಕಡೆಗೆ ಹೋಗಿ ಸೇರುವುದಕ್ಕೆ ಇದರಿಂದ ಆಗುವುದಿಲ್ಲ. Statement of objects and reasons ನಲ್ಲಿ :

> "The urgency of bringing about rapid increase in food production in the State necessitates......"

(ಶ್ರೀ ಎಸ್. ಗೋಪಾಲಗೌಡ)

ಎಂದು ಹೇಳಿದ್ದೀರಿ. ನಾನಾದರೂ ಮೂಲವಾಗಿ ತಮ್ಮ ಈ ಅಭಿಪ್ರಾಯವನ್ನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಎರಡು ವಿಷಯದಲ್ಲಿ ನೀವು ನಿಮ್ಮ ದೃಷ್ಟಿ ಕೋನವನ್ನು ಬದಲಾಯಿಸಿಕೊಳ್ಳಬೇಕಾಗಿದೆ. ಒಂದು ವ್ಯವಸಾಯಕ್ಕೆ ಸಂಬಂಧಪಟ್ಟ ಹಾಗೆ ಹೆಚ್ಚು ವಿಷಯಗಳನ್ನು ನೀವು ತಿಳಿದುಕೊಳ್ಳುವುದು ಆಗಿದೆ. ಇವತ್ತು ನಮ್ಮ ದೇಶದಲ್ಲಿ ಏನಾಗಿದೆ ಎಂದರೆ ಅನಕ್ಷರಸ್ತರೇ ಹೆಚ್ಚು. ರೈತ ಎಂದರೆ ದಡ್ಡ, ಅನಕ್ಷರಸ್ತ, ತಿಳಿವಳಿಕೆ ಇಲ್ಲದವ ಎಂಬ ಅಭಿಪ್ರಾಯವೇ ಇದೆ ಮತ್ತು ಆ ಕಸಬು ಅನೂಚಾನವಾಗಿ ಬಂದಿದೆ, ಹೊಟ್ಟೆಪಾಡಿಗೆ ಆ ಕಸಬು ಮಾಡಿಕೊಂಡು ಹೋಗುತ್ತಾನೆ ಎಂಬ ಅಭಿಪ್ರಾಯ ಇದೆ. ಈ ಕಾರಣದಿಂದಲೇ ಇವತ್ತು 100ಕ್ಕೆ 80 ಜನ ರೈತರಾಗಿ ಇದ್ದರೂ ಉಳಿದ 20 ಜನಕ್ಕೆ ಅನ್ನ ಕೊಡಲಾರದಷ್ಟು ಹೀನ ಸ್ಥಿತಿಯಲ್ಲಿ ಬೇಸಾಯ ನಡೆಯುತ್ತಾ ಇದೆ. 100 ಕೋಟಿ ರೂಪಾಯಿನ ಆಹಾರ ಧಾನ್ಯಗಳನ್ನು ಹೊರಗಿನಿಂದ ತರಿಸಿಕೊಳ್ಳಬೇಕಾದ ಪರಿಸ್ಥಿತಿ ಬಂದಿದೆ, ಈಗ ಆಧುನಿಕ ಯುಗದಲ್ಲಿ ಇದ್ದೇವೆ. ಆದ್ದರಿಂದ ಆಧುನಿಕವಾಗಿ ದೃಷ್ಟಿ ಕೋಣ ಮಾರ್ಪಾಡು ಮಾಡಿಕೊಳ್ಳಬೇಕು ಮತ್ತು ವ್ಯವಸಾಯ ಕ್ಷೇತ್ರದಲ್ಲಿ ಆಧುನಿಕವಾಗಿ ಏನು ಪ್ರಯೋಗ ನಡೆದಿದೆ ಎಂಬುದನ್ನು ಗಮನಿಸಿ ಅದನ್ನು ಅನುಷ್ಠಾನಕ್ಕೆ ತರಲು ವ್ಯವಸ್ಥೆ ಮಾಡಬೇಕು. ಈ ಎಲ್ಲಾ ವಿಷಯದಲ್ಲೂ ನಮಗೆ ತಜ್ಞರ ಸಲಹೆಬೇಕು. ಪ್ರಾಯೋಗಿಕವಾಗಿ ಪ್ರಾಮುಖ್ಯವಾದ ತಿಳಿವಳಿಕೆ ಏನು ಇವತ್ತು ಮಾನವನ ಕರಗತವಾಗಿದೆ ಆ ತಿಳಿವಳಿಕೆ ಜನ ಸಾಮಾನ್ಯರ ಮಟ್ಟಕ್ಕೆ ಹರಿದು ಹೋಗತಕ್ಕ ಒಂದು ವ್ಯವಸ್ಥೆಯನ್ನು ಕಟ್ಟಿಸಿಕೊಡಬೇಕಾದ್ದು ಬಹಳ ಅತ್ಯಗತ್ಯವಾಗಿದೆ. ಅದು ಆಗದ ಹೊರತು ನಾವಿಲ್ಲಿ ಎಷ್ಟೇ ಪ್ರವಾಸ ಮಾಡಿದರೂ ಕೂಡ, ಹೆಚ್ಚು ಆಹಾರ ಬೆಳೆಯಿರಿ ಎಂಬ ಕೂಗು ನಿರರ್ಥಕವಾಗುತ್ತದೆ......

ಇನ್ನು 5 ನಿಮಿಷ ಕೊಡಿ ಸ್ವಾಮಿ, ಅದೇನಾಗುತ್ತದೆಯೋ ನೋಡೋಣ.

Mr. SPEAKER.—You must conclude now.

ಶ್ರೀ ಎಸ್. ಗೋಪಾಲಗೌಡ.—ವಿಷಯ ಹೇಳುವ ಸಂದರ್ಭದಲ್ಲಿ ಹೀಗೆ ಮಾಡಿದರೆ ಹೇಗೆ?...

Mr. SPEAKER.—I can't permit you to speak further.

ಶ್ರೀ ಎಸ್. ಗೋಪಾಲಗೌಡ.—ಇಷ್ಟು ನಿಷ್ಠೂರವಾಗಿ ಇದ್ದರೆ ಬಹಳ ಕಷ್ಟವಾಗುತ್ತದೆ.

ಅಧ್ಯಕ್ಷರು.—ನನ್ನ ಕಷ್ಟವನ್ನು ನೋಡಬೇಕು. ಕಳೆದ ಸಾರಿ ಸಹ ಹೀಗೆಯೇ ಆಯಿತು. 5 ನಿಮಿಷ ಕೊಟ್ಟಿದ್ದಕ್ಕೆ 10 ನಿಮಿಷ ಆಯಿತು.

ಶ್ರೀ ಎಸ್. ಗೋಪಾಲಗೌಡ.—ಹಳ್ಳಿ ಜನ ನಾವು, ಕಾಲಕ್ಕನುಸಾರವಾಗಿ ಅಷ್ಟು ನಿಖರವಾಗಿ ನಿಲ್ಲಿಸುವುದು ಕಷ್ಟ......

ಅಧ್ಯಕ್ಷರು.—ಪ್ರತಿಯೊಬ್ಬರೂ ಕಾಲಕ್ಕನುಸಾರವಾಗಿ ಇತರರಿಗೆ ಅನುಕೂಲವಾಗುವಂತೆ ಮಾತನಾಡಬೇಕು......

ಶ್ರೀ ಎಸ್. ಗೋಪಾಲಗೌಡ.—ಹೀಗೆಲ್ಲಾ ತಾವು ಹೇಳಿದರೆ ನಾವು ಮತ್ತೇನಾದರೂ ಮಾಡಬೇಕಾಗುತ್ತದೆ ಆಗ ತಮಗೆ ಮತ್ತೆ ಬೇಜಾರಾಗುತ್ತದೆ. ಈ ರೀತಿ ನನ್ನ ಬಾಯಿ ಮುಚ್ಚಿಸುವುದಕ್ಕೆ ಪ್ರಯತ್ನ ಮಾಡಿದರೆ ಏನೂ ಪ್ರಯೋಜನವಾಗುವುದಿಲ್ಲ.

Mr. SPEAKER.—I cannot allow any more time.

ಶ್ರೀ ಎಸ್. ಗೋಪಾಲಗೌಡ.—As a protest ನಾನು ಈಗ ಇಲ್ಲಿಂದ ಹೊರಟು ಹೋಗುತ್ತೇನೆ.

Mr. SPEAKER.—I have got my own way of protesting. You will not catch my eye for three days.

ಶ್ರೀ ಎಸ್. ಗೋಪಾಲಗೌಡ.—ಅದು ಬೇರೆ ಪ್ರಶ್ನೆ, ಹೋಗುತ್ತೇನೆ, ನೋಡಿಕೊಳ್ಳುತ್ತೇನೆ.

Mr. SPEAKER.—Are you holding out a threat? ಏಂಥದು ನೋಡಿಕೊಳ್ಳುತ್ತೀರಿ?

ಶ್ರೀ ಎಸ್. ಗೋಪಾಲಗೌಡ.—ನನ್ನ ವಿಚಾರ ನಾನು ನೋಡಿಕೊಳ್ಳುತ್ತೇನೆ.

ಅಧ್ಯಕ್ಷರು.—ನೀವೇನು ಬೇಕಾದರೂ ನಿಮ್ಮ ಮನಸ್ಸಿನಲ್ಲಿ ನೋಡಿಕೊಳ್ಳಿ ಹೋಗಿ, ಇಲ್ಲ ಆ ರೀತಿ ಮಾತನಾಡಬೇಡಿ.

†ಶ್ರೀ ಕೆ. ವಿ. ಬೈರೇಗೌಡ (ಯಶವಂತಪುರ).—ಈ ಮಸೂದೆಗೆ ನನ್ನ ಪೂರ್ಣ ಬೆಂಬಲವನ್ನು ಕೊಡುತ್ತೇನೆ. ಈ ಒಂದು ಕಾರ್ಯ ಬಹಳ ದಿವಸಗಳಿಗೆ ಮುಂಚೆಯೇ ಆಗಬೇಕಾಗಿತ್ತು, ಈಗ ನಮ್ಮ ಮುಂದೆ ಬಂದಿದೆ. ಕೆಲವು ಮಾನ್ಯ ಸದಸ್ಯರು ಈ ಯೂನಿವರ್ಸಿಟಿಯನ್ನು ಹೆಬ್ಬಾಳದ ಹತ್ತಿರ ಮಾಡಬೇಕೆಂದು ಏಕೆ ನಮೂದು ಮಾಡಿದ್ದೀರಿ, ಅದು ಸರಿಯಾದ ಜಾಗವಲ್ಲ ಎಂದು ಹೇಳಿ

ದರು. ಹಿಂದೆ ಇದ್ದಂಥ ಸರ್ಕಾರ ಇಡೀ ದೇಶದಲ್ಲಿ ತಜ್ಞರನ್ನು ಮತ್ತು ಖಾಸಗೀ ಮುಖಂಡರನ್ನು ಕರೆಸಿ ಸ್ಥಳದ ಅನುಕೂಲ ವಗೈರೆ ಎಲ್ಲವನ್ನು ಪರಿಶೀಲನೆ ಮಾಡಿ ವ್ಯವಸಾಯದ ಕಾಲೇಜು ಸ್ಥಾಪನೆ ಮಾಡುವುದಕ್ಕೆ ಹೆಬ್ಬಾಳವೇ ಉತ್ತಮವಾದ ಜಾಗ ಎಂದು ತೀರ್ಮಾನ ಮಾಡಿತ್ತು. ಈ ದಿವಸ ಅಲ್ಲಿ ಜಾಗ ಸಾಲದು ಎಂದು ಹೇಳುತ್ತಾ ಇದ್ದಾರೆ. ಹೆಸರುಘಟ್ಟದ ಲೈವ್‌ಸ್ಟಾಕ್ ಫಾರಂನಲ್ಲಿ 3,000 ಚಿಲ್ಲರೆ ಎಕರೆ ಜಮೀನು ಇದೆ, ನೀರು ಇದೆ ಮತ್ತು ಪ್ರಪಂಚದ ಯಾವ ಭಾಗದ ತಜ್ಞರು ಬಂದರೂ ಸಹ ಬೆಂಗಳೂರಿನ ಸುತ್ತ 50 ಮೈಲಿಯಲ್ಲಿ ಉತ್ತಮ ಬೆಳೆಯಾಗುತ್ತದೆ ಮತ್ತು ಪ್ರಾಣಿಗಳನ್ನು ಸಾಕುವುದಕ್ಕೆ ಉತ್ತಮ ವಾತಾವರಣ ಇದೆ, ಹವಾಗುಣ ಇದೆ ಎಂದು ನಿರ್ದಿಷ್ಟವಾಗಿ ಹೇಳುತ್ತಾ ಇದ್ದಾರೆ. ಈ ಎಲ್ಲಾ ಕಾರಣದಿಂದಲೂ ಅಲ್ಲಿ ವಿಶ್ವವಿದ್ಯಾನಿಲಯ ಸ್ಥಾಪನೆಯಾಗುವುದು ಸೂಕ್ತ ವಾಗಿದೆ. ನಮ್ಮ ಸ್ನೇಹಿತರು ಈ ಒಂದು ಕಾಲೇಜು ಗ್ರಾಮೀಣ ಸನ್ನಿವೇಶದಲ್ಲಿರಬೇಕೆಂದು ಹೇಳುತ್ತಾ ಇದ್ದಾರೆ. ವ್ಯವಸಾಯ ಮತ್ತು ಪಶುಸಂಗೋಪನೆ ಇತ್ಯಾದಿಗಳನ್ನು ವ್ಯಾಸಂಗ ಮಾಡ ತಕ್ಕ ಮಕ್ಕಳನ್ನು ನಾಗರೀಕರ ಸಹವಾಸದಲ್ಲೇ ಬಿಡಬಾರದು ಎಂದು ಅವರ ಮನಸ್ಸಿನಲ್ಲಿದ್ದ ಹಾಗೆ ಕಾಣುತ್ತದೆ. ಮೆಡಿಕಲ್ ಕಾಲೇಜು, ಇಂಜನಿಯರಿಂಗ್ ಕಾಲೇಜುಗಳಲ್ಲಿ ವಿದ್ಯಾವಂತರಾದವರು ಹಳ್ಳಿಗಳಲ್ಲಿ ಹೋಗಿ ಕೆಲಸ ಮಾಡುತ್ತಿಲ್ಲವೇ ? ಇವರನ್ನು ಏಕೆ ಆ ರೀತಿ ನೋಡಬಾರದು ಎಂಬ ಪ್ರಶ್ನೆ ಬರುತ್ತದೆ. ಆದ್ದರಿಂದ ಒಂದು ಉತ್ತಮವಾದ ವಾತಾವರಣ ಕಲ್ಪನೆ ಮಾಡಬೇಕೇ ಹೊರತು ವ್ಯವ ಸಾಯ ಎಂದಾಕ್ಷಣಕ್ಕೇ ಕಾಡಿನಲ್ಲೇ ಬಿಟ್ಟಿರಬೇಕು, ನಾಗರಿಕರ ಸಂಪರ್ಕವೇ ಇರಬೇಕು ಎನ್ನುವುದು ಅಷ್ಟು ಯೋಗ್ಯವಾದ ವಿಚಾರವಲ್ಲ ಎಂದು ಕಾಣುತ್ತದೆ.

ಸ್ವಾಮಿ, ಈ ದಿವಸ ಈ ಒಂದು ಇಲಾಖೆಯಲ್ಲಿ ತಜ್ಞರಾಗಿರತಕ್ಕವರಿಗೂ, ಈ ಕಾಲೇಜಿನಿಂದ ಪದವೀಧರರಾಗಿ ತೇರ್ಗಡೆಹೊಂದಿ ಬರತಕ್ಕವರಿಗೂ ಇಲ್ಲಿ ಸೂಚಿಸಿರುವಂತೆ ಹಳ್ಳೀ ಜನರ ಸಂಪರ್ಕ ವನ್ನು ಉಂಟುಮಾಡದೆ ಹೋದರೆ ಇದಕ್ಕೆ ಒಂದು ಪ್ರೋತ್ಸಾಹ ಕೊಡದೆ ಹೋದರೆ ಮುಂದೆ ಈ ಜನರಿಗೂ ಆ ಹಳ್ಳೀ ಜನರಿಗೂ ಸಂಪರ್ಕವಿಲ್ಲದೆ ಹೋಗುತ್ತದೆ. ವಿದ್ಯಾವಂತ ಜನರು ಮುಂದೆ ಹಳ್ಳಿ ಜೀವನದಲ್ಲಿ ನಿಲ್ಲಲು ತೊಂದರೆಯಾಗುತ್ತದೆ. ಆಗ ಇದರ ತತ್ವವೇ ಬೇರೆಯಾಗುತ್ತದೆ. ಹಾಗಾಗ ಬಾರದು. ದೇಶದಲ್ಲಿರತಕ್ಕ ಶೇ 80-85 ರಷ್ಟು ಜನರ ಯೋಗಕ್ಷೇಮವನ್ನು ನೋಡಿಕೊಳ್ಳತಕ್ಕ ಜವಾಬ್ದಾರಿ ಇವರಮೇಲೆ ಬೀಳುತ್ತದೆ. ಎಲ್ಲರೂ ವಿಶ್ವಾಸದಿಂದ ಒಂದು ಕಡೆ ಕೂಡಿ ಕೆಲಸಮಾಡತಕ್ಕ ಸಂದರ್ಭ ಇದರಲ್ಲಿದೆ. ಇವರಿಗೆ ಈಗ ಇಂಥ ಒಂದು ಶಿಕ್ಷಣವಿಲ್ಲದೆ ಹೋದರೆ ಮುಂದೆ ಇವರ ಮನಸ್ಸು ಈ ಕೆಲಸಗಳನ್ನೆಲ್ಲ ಮಾಡುವುದಕ್ಕೆ ಒಪ್ಪುತ್ತದೆಯೋ ಅಥವಾ ಇಲ್ಲವೋ ಅದು ಗೊತ್ತಾಗುವುದಿಲ್ಲ. ಆದ್ದರಿಂದ ಇಂದು ಬೆಳೆಯುತ್ತಿರುವ ಸನ್ನಿವೇಶವನ್ನು ತಿದ್ದಿ ಸರಿಪಡಿಸುವ ದೃಷ್ಟಿಯಿಂದ ಈಗ ಇಂಥ ಒಂದು ಯೂನಿವರ್ಸಿಟಿಯನ್ನು ಸ್ಥಾಪಿಸತಕ್ಕದ್ದು ಅಗತ್ಯ. ಆದರೆ ಕೆಲವರು ಇದು ಜಯಪ್ರದ ಆಗುತ್ತ ದೆಯೋ ಹೋಗುತ್ತದೆಯೋ ಎಂತ ಒಂದು ಶಂಕೆಯನ್ನು ವ್ಯಕ್ತಪಡಿಸುತ್ತಿದ್ದಾರೆ ಕೇಂದ್ರ ಸರ್ಕಾರ ದವರ ಒಂದು ದೃಷ್ಟಿಯಿಂದಲೂ ಮತ್ತು ಇತರ ರಾಜ್ಯ ಸರ್ಕಾರಗಳ ದೃಷ್ಟಿಯಿಂದಲೂ ಹೇಳುವು ದಾದರೆ ದೇಶದಲ್ಲಿ ಈ ದಿವಸ ಹೆಚ್ಚು ಆಹಾರ ಧಾನ್ಯ ಬೆಳೆಯಬೇಕೆಂಬ ವಾದವನ್ನು ಎಲ್ಲರೂ ಒಪ್ಪಿ ದ್ದಾರೆ. ಈ ಧ್ಯೇಯ ಸಾಧನೆಗಾಗಿ ಎಲ್ಲ ರಾಜ್ಯಗಳು ಕೆಲಸ ಮಾಡಲೇ ಬೇಕಾಗಿದೆ. ಆದ್ದರಿಂದ ಈ ದಿವಸ ಈ ಕಾಲೇಜಿಗೆ ಒಂದು ಹೆಚ್ಚಿನ ಪ್ರೋತ್ಸಾಹವಿದ್ದೇಇದೆ. ಇದರ ಖರ್ಚುವೆಚ್ಚಗಳನ್ನು ಭಾರತ ಸರ್ಕಾರದವರೂ ಕೂಡ ವಹಿಸುತ್ತಾರೆಂಬ ಅಂಶವನ್ನು Statement of Objects and Reasons ನಲ್ಲಿ ತಿಳಿಸಲಾಗಿದೆ. ಈ ಕೆಲಸ ಹತ್ತಾರು ವರ್ಷಗಳ ಹಿಂದೆಯೇ ಆಗಬೇಕಾಗಿತ್ತು. ಆದರೆ ಆಗದೆ ನಿಂತಿತ್ತು. ಈಗ ಇದಕ್ಕೆ ಕಾಲ ಒದಗಿದೆ. ಈ ದಿವಸ ನಮ್ಮ ದೇಶದ ಶೇ. 75ರಷ್ಟು ಭಾಗದ ಜನರ ಆಕಾಂಕ್ಷೆಗಳನ್ನು ಈಡೇರಿಸತಕ್ಕಂಥ ಅವಕಾಶ ಇದರಲ್ಲಿದೆ. ಈ ದಿವಸ ಅಮೆರಿಕಾ ದೇಶದಲ್ಲಿರ ತಕ್ಕ ಕೃಷಿಗಾರರು ಅಲ್ಲಿ ದೇಶದ ಆಡಳಿತವನ್ನು ಡಿಕ್ಟೇಟ್ ಮಾಡುತ್ತಿದ್ದಾರೆ. ಈ ದಿವಸ ನಮ್ಮ ರಾಜ್ಯದಲ್ಲಿರತಕ್ಕ ಈ ಯೂನಿವರ್ಸಿಟಿಗೆ ಸಂಬಂಧಪಟ್ಟ ಇಲಾಖೆ ಆಡಳಿತ ಸರಿಯಾಗಿಲ್ಲ. ಇಲಾಖೆಯ ಅಭಿವೃದ್ಧಿಗೆ ಕುಗ್ರಾಮ ಬಂದಿದೆ. ಇಲಾಖೆ ಅಧಿಕಾರಿಗಳಲ್ಲಿ ವೈಮನಸ್ಸಿದೆ ಹೀಗಿರುವಾಗ ಇದರ ಅಭಿವೃದ್ಧಿ ಎಷ್ಟರಮಟ್ಟಿಗೆ ಆಗಿ ಇದರಿಂದ ದೇಶಕ್ಕೊಂದು ಒಳ್ಳೆಯದಾಗುತ್ತದೆಯೋ ಎಂಬ ಶಂಕೆ ಯನ್ನು ಕೆಲವರು ವ್ಯಕ್ತಪಡಿಸುತ್ತಿದ್ದಾರೆ. ಆದರೆ ಈ ಅಧಿಕಾರಿಗಳೇನೂ ಖಾಯಂ ಆಗಿ ಇರತಕ್ಕವರಲ್ಲ. ಇಂಥ ಅವ್ಯವಸ್ಥೆಯನ್ನು ಸರಿಪಡಿಸದಷ್ಟು ಸರ್ಕಾರ ಹೀನಾವಸ್ಥೆಯಲ್ಲಿಲ್ಲ. ಎಲ್ಲೋ ಕೇವಲ ಒಂದೆರಡು ವ್ಯಕ್ತಿಗಳು ಅಂಥ ಅಚಾತುರ್ಯ ನಡೆಸಿದ್ದರೆ ಅದನ್ನು ಸರ್ಕಾರದವರು ಸರಿಪಡಿಸುತ್ತಾರೆ. ಅದರೆ ನಾವು ಸದಾ ಹೀಗೆ ಪ್ರತಿಯೊಂದು ಬಾಬಿನಲ್ಲೂ ಟೀಕೆಗಳನ್ನು ಮಾಡುತ್ತಾ ಹೋದರೆ ಯಾವ ಕಾರ್ಯವನ್ನೂ ಸಾಧನೆ ಮಾಡುವುದಕ್ಕಾಗುವುದಿಲ್ಲ. ಮೇಲಾಗಿ ಇಂಥ ಒಂದು ಆಟಿಟ್ಯೂಡಿನಿಂದ ಮುಂದೆ ನಮಗೆ ಬಹಳ ತೊಂದರೆ ಆಗುತ್ತದೆ. ಈ ದಿವಸ ನಮ್ಮ ದೇಶದಲ್ಲೆಲ್ಲ ಈ ಸಂಬಂಧವಾದ ಕಾಲೇಜುಗಳು ಮೂರು ಮಾತ್ರ ಇರುತ್ತವೆ. ಈ ಒಂದು ಕಾಲೇಜಿನ ಸ್ಥಾಪನೆ ಈಗಾಗಲೇ ಬಹಳ ನಿಧಾನವಾಗಿದೆ. ಇದನ್ನು ಕೂಡಲೆ ಸ್ಥಾಪನೆ ಮಾಡಬೇಕೆಂದು ಹೇಳುತ್ತೇನೆ. ಈ ಕಾಲೇಜು ಸ್ಥಾಪನೆಗೆ

(ಶ್ರೀ ಕೆ. ವಿ. ಬೈರೇಗೌಡ)

ಹೆಬ್ಬಾಳದಲ್ಲಿ ಎಲ್ಲ ಅನುಕೂಲತೆಗಳೂ ಇರುತ್ತವೆ. ಇಲ್ಲಿ ಈ ಕಾಲೇಜನ್ನು ಸ್ಥಾಪಿಸತಕ್ಕ ಬಗ್ಗೆ ಎಲ್ಲ ತಜ್ಞರ ಅಭಿಪ್ರಾಯವೂ ಅನುಕೂಲವಾಗಿದೆ. ಹೆಬ್ಬಾಳದ ಪಕ್ಕದಲ್ಲೇ Indian Institute of Science ಎಂಬ ಸಂಸ್ಥೆ ಕೂಡ ಇವೆ. ಅಲ್ಲಿ ನೀರಿನ ಸೌಕರ್ಯವಿದೆ; ಉತ್ಕೃಷ್ಟವಾದ ಜಮೀನಿದೆ, ಬೋರ್‌ವೆಲ್‌ಗಳನ್ನೂ ಹಾಕಬಹುದು, ಕೆರೆಗಳಿವೆ, ಮೇಲಾಗಿ ಸಧ್ಯದಲ್ಲೇ ಇಲ್ಲಿಗೆ ಕಾವೇರಿ ನೀರು ಬರತಕ್ಕ ಅವಕಾಶ ಕೂಡ ಇದೆ. ಇಷ್ಟೆಲ್ಲಾ ಅನುಕೂಲಗಳಿರುವುದರಿಂದ ಅಲ್ಲಿ ಈ ಯೂನಿವರ್ಸಿಟಿ ಯನ್ನು ಜಾಗ್ರತೆ ಪ್ರಾರಂಭಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಈ ಯೂನಿವರ್ಸಿಟಿಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳತಕ್ಕ ವಿಚಾರವನ್ನು ಈ ಮಸೂದೆ ಯಲ್ಲಿ ಸೂಚಿಸಿದ್ದಾರೆ. ಇಲ್ಲಿ ಷೆಡ್ಯೂಲ್ಡ್ ಟ್ರೈಬ್ಸ್ ಮತ್ತು ಷೆಡ್ಯೂಲ್ಡ್ ಕ್ಲಾಸುಗಳ ಮತ್ತು ಹಿಂದುಳಿದ ತಂಗತಿ ಜನರ ವಿಚಾರವನ್ನು ಹೇಳಿದ್ದಾರೆ. ಆದರೆ ಇದರ ಜೊತೆಗೆ ಇನ್ನೊಂದು ವಿಚಾರವನ್ನು ಸೇರಿಸಬೇಕಾಗಿದೆ ಅದೇನೆಂದರೆ—ನೇರವಾಗಿ ಯಾರ ಮಕ್ಕಳು ಯಾವಾಗ್ಲೂ ಈ ವ್ಯವಸಾಯದ ಕಸುಬನ್ನೇ ಅವಲಂಬಿಸಿಕೊಂಡಿರುತ್ತಾರೋ ಅಂಥವರಿಗೆ ಮೊದಲು ಇಲ್ಲಿ ಅವಕಾಶ ದೊರೆಯುವಂತೆ ಮಾಡಬೇಕು. ಆದರೆ ಈಗ್ಗೆ ಒಂದೆರಡು ವರ್ಷಗಳ ಹಿಂದೆ ನಮ್ಮ ವ್ಯವಸಾಯದ ಕಾಲೇಜಿಗೆ ಸೇರಲು ಯಾರೂ ವಿದ್ಯಾರ್ಥಿಗಳು ಮುಂದೆ ಬರಲಿಲ್ಲ. ಆಗ ನಮ್ಮ ಅಕ್ಕ ಪಕ್ಕದ ರಾಜ್ಯಗಳಾದ ಮದ್ರಾಸ್ ಮತ್ತು ಕೇರಳದ ರಾಜ್ಯದಿಂದ ಬಂದ ವಿದ್ಯಾರ್ಥಿಗಳಿಗೆ ಇಲ್ಲಿ ಸೀಟುಗಳನ್ನು ಕೊಟ್ಟು ಭರ್ತಿ ಮಾಡ ಬೇಕಾದಂಥ ಸಂದರ್ಭ ಒದಗಿತ್ತು. ಈ ದಿವಸ ನಮ್ಮ ಕಾಲೇಜು ರೆಕಗ್ನೈಜ್ ಆಗಿದೆ. ಇನ್ನು ಮುಂದಕ್ಕೆ ರೂರಲ್ ಸೈಡಿನಿಂದ ಬರತಕ್ಕ ವಿದ್ಯಾರ್ಥಿಗಳಿಗೆ ಹೆಚ್ಚಿನ ಅವಕಾಶ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ಈ ಯೂನಿವರ್ಸಿಟಿ ಆಡಳಿತ ವಿಚಾರದಲ್ಲಿ ಸರ್ಕಾರ ಪದೇ ಪದೇ ಕೈಹಾಕುತ್ತಿದೆ ಎಂಬುದಾಗಿ ಜನರು ಮಾತನಾಡಿಕೊಳ್ಳುತ್ತಿದ್ದಾರೆ. ಅದಕ್ಕೆಲ್ಲ ಅವಕಾಶ ಕೊಡಬಾರದು. ನಮ್ಮ ವಿದ್ಯಾಭ್ಯಾಸವು ಒಂದು ಪರಿಶುದ್ಧವಾದ ರೀತಿಯಲ್ಲಿ ಮುಂದುವರಿಯಲು ಅವಕಾಶವಿರಬೇಕಾದ್ದು ಆವಶ್ಯಕ. ಈ ಸಂಸ್ಥೆಯೂ ಸಹ ಜುಡಿಷಿಯಲ್ ಇಲಾಖೆಯಂತೆ ಬಹಳ ತೀವ್ರತಮದಿಂದ ನಿರ್ದಾಕ್ಷಿಣ್ಯ ವಾಗಿ–ನಿಷ್ಪಕ್ಷಪಾತವಾಗಿ ಕೆಲಸ ಮಾಡಬೇಕಾಗಿದೆ. ಈ ಯೂನಿವರ್ಸಿಟಿ ಈ ದೇಶದ ಜನರಿಗೆ ಒಂದು ಉತ್ತಮ ಮಾರ್ಗದರ್ಶನ ಕೊಡುವಂತಾಗಲೆಂದು ಆಶಿಸಿ ನಾನು ಇದಕ್ಕೆ ನನ್ನ ಸಂಪೂರ್ಣ ಬೆಂಬಲ ವನ್ನು ನೀಡುತ್ತೇನೆ.

†ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಸ್ವಾಮಿ, ಈ ಮಸೂದೆಯ ಬಗ್ಗೆ ಇದರಲ್ಲಿ ಏನೇನು ತಪ್ಪುಗಳಿವೆ, ಏನೇನು ನ್ಯೂನತೆಗಳಿವೆ ಎಂಬುದನ್ನೆಲ್ಲ ಈಗಾಗಲೇ ನನ್ನ ಮಾನ್ಯ ಸ್ನೇಹಿತರನೇಕರು ಹೇಳಿದ್ದಾರೆ. ಈಗ ಈ ವಿಶ್ವವಿದ್ಯಾನಿಲಯವನ್ನು ಎಲ್ಲಿ ಸ್ಥಾಪನೆ ಮಾಡಬೇಕೆಂಬ ಬಗ್ಗೆ ಈಗಾಗಲೆ ಶ್ರೀ ಅಣ್ಣಾರಾಯರು ಹೆಬ್ಬಾಳದಲ್ಲಿ ಈ ಕಾಲೇಜನ್ನು ಸ್ಥಾಪನೆ ಮಾಡುವುದಕ್ಕೆ ಸಾಧ್ಯವಿಲ್ಲವೆಂಬು ದಾಗಿ ಸ್ಪಷ್ಟವಾಗಿ ತಿಳಿಸಿದ್ದಾರೆ. ಹೆಬ್ಬಾಳದ ಹತ್ತಿರ ಅಂಥ ಉತ್ಕೃಷ್ಟವಾದ ಜಮೀನಿಲ್ಲ ಅಂತ ಅವರು ತಿಳಿಸಿದ್ದಾರೆ. ಆದರೆ ಹೆಬ್ಬಾಳ ಈಗ ಶ್ರೀ ಬೈರೇಗೌಡರ ಕ್ಷೇತ್ರದಲ್ಲಿದೆ. ಆದ್ದರಿಂದ ಅವರು ಈ ಅಧ್ಯಯನಕ್ಕೆ ಹೆಬ್ಬಾಳ ಬಹಳ ಉತ್ಕೃಷ್ಟವಾದ ಜಾಗವಾಗಿದೆ ಎಂಬುದಾಗಿ ಹೇಳುತ್ತಿದ್ದಾರೆ. ಈ ವಿಚಾರದಲ್ಲಿ ಮಂತ್ರಿಗಳು ಉತ್ತರ ಕೊಡುವಾಗ ಯಾವ ಯಾವ ಪರಿಣತರಿಂದ ಈ ಜಾಗ ಉತ್ತಮ ವಾದುದೆಂದು ತೀರ್ಮಾನವಾಗಿದೆ ಎಂಬುದನ್ನು ವಿವರವಾಗಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಸರ್ಕಾರಕ್ಕೆ ಪ್ರತಿಯೊಂದು ಕಾಲೇಜುಗಳನ್ನು, ಕೈಗಾರಿಕೆಗಳನ್ನು ಈ ಬೆಂಗಳೂರಿನಲ್ಲೇ ಸ್ಥಾಪನೆ ಮಾಡಬೇಕೆಂದು ಹೇಳತಕ್ಕ ಜಾಡ್ಯ ಇವರಿಗೆ ಹೊಸದೇನೂ ಅಲ್ಲ. ಈಗಲಾದರೂ ಅವರು ಈ ಜಾಡ್ಯ ದಿಂದ ಎಚ್ಚೆತ್ತು ಈ ಕಾಲೇಜನ್ನು ಬೇರೆ ಜಿಲ್ಲೆಯಲ್ಲಿ ಸ್ಥಾಪನೆ ಮಾಡಲು ಅವಕಾಶ ಮಾಡಿಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ. ಈ ದಿವಸ ಬೆಂಗಳೂರು ನಗರದ ಸುತ್ತ ಮುತ್ತಲೂ ದೊಡ್ಡ ದೊಡ್ಡ ಕೈಗಾರಿಕೆಗಳು ವಿಪರೀತವಾಗಿ ಬೆಳೆಯುತ್ತಿರುತ್ತವೆ. ಆ H.M.T. ಫ್ಯಾಕ್ಟರಿ ಹೆಬ್ಬಾಳದ ಪಕ್ಕಕ್ಕೇ ಇದೆ. ಮಹಾತ್ಮ ಗಾಂಧೀ ಭಕ್ತರು ಈ ದಿವಸ ಆಡಳಿತದಲ್ಲಿ ವಿಕೇಂದ್ರಿಕರಣ ಮಾಡಬೇಕು ಎಂದು ವಾದಿಸತಕ್ಕವರು ಈ ದಿವಸ ಏತಕ್ಕೆ ಈ ಕಾಲೇಜನ್ನು ಬೇರೆ ರೂರಲ್ ಏರಿಯಾಕ್ಕೆ ಕೊಡಬಾರದು ? ಈ ಕಾಲೇಜನ್ನು ಈ ಕೈಗಾರಿಕಾ ಕ್ಷೇತ್ರದಿಂದ ದೂರವಿರತಕ್ಕ ಯಾವುದಾದರೊಂದು ಅನುಕೂಲವಿರ ತಕ್ಕ ಜಾಗಕ್ಕೆ ಹಾಕಬೇಕೆಂದು ಹೇಳುತ್ತೇನೆ. ಇದು ನನ್ನ ಸ್ಪಷ್ಟವಾದ ಅಭಿಪ್ರಾಯ. ಈ ವಿಚಾರದಲ್ಲಿ ಸರ್ಕಾರದವರು ಸಾಕಷ್ಟು ಪರಿಶೀಲನೆ ಮಾಡಬೇಕು. ಆತುರಾತುರದಲ್ಲಿ ಏನನ್ನೂ ಮಾಡಬಾರದು. ಈ ಬಿಲ್ಲನ್ನು ನಾನೀಗ ಸಲೆಕ್ಟ್ ಸಮಿತಿಗೆ ಕಳುಹಿಸಬೇಕೆಂದು ಸೂಚನೆ ಮಾಡುತ್ತೇನೆ.

ಈ ಜಾಗದ ವಿಷಯದಲ್ಲಿ ತೀರ್ಮಾನಕ್ಕೆ ಬರಲು ಬಹಳ ಕಷ್ಟವಿದೆ. ಸರ್ಕಾರದವರು ವ್ಯವಸಾ ಯಾಭಿವೃದ್ಧಿ ವಿಚಾರದಲ್ಲಿ ಈ ಯೂನಿವರ್ಸಿಟಿ ಆಡಳಿತದ ಅಧಿಕಾರವನ್ನು ಬೋರ್ಡ್ ಆಫ್ ರೀಜೆಂಟ್ಸ್ ಕೈಲಿ ಕೊಡಬೇಕೆಂತ ಹೇಳಿರುವುದನ್ನು ನೋಡಿದರೆ ನನಗೇಕೋ ಇದು ಸ್ವಲ್ಪ ವ್ಯತ್ಯಾಸವಾಗಿರುಂತೆ

ಕಾಣುತ್ತಿದೆ. ಈ ದಿವಸ ವ್ಯವಸಾಯದ ಇಲಾಖೆಗೆ ಬರತಕ್ಕ ಡೈರೆಕ್ಟರುಗಳೇನಿದ್ದಾರೆ-ಅವರ ವಿಚಾರ ನನಗೂ ಸ್ವಲ್ಪ ಗೊತ್ತಿದೆ, ಅವರಿಗೆ ದೇಶದಲ್ಲಿ ಈ ವ್ಯವಸಾಯ ಪದ್ಧತಿಯನ್ನು ಮುಂದುವರಿಸಬೇಕು, ಇದನ್ನು ಅಭಿವೃದ್ಧಿಗೊಳಿಸಬೇಕು, ದೇಶದಲ್ಲಿ ಈ ವ್ಯವಸಾಯದ ಕಸುಬಿನಲ್ಲಿ ತೊಡಗಿರತಕ್ಕವರ ಅಭಿವೃದ್ಧಿಯನ್ನು ಸಾಧಿಸಬೇಕು ಎನ್ನತಕ್ಕ ದೇಶಭಕ್ತಿ ಇರತಕ್ಕಂಥ ಜನರು ಆ ಸ್ಥಾನಕ್ಕೆ ಬರುವುದು ಬಹಳ ಕಡಮೆ. ಇವರೇನಿದ್ದರೂ ಈ ಬೆಂಗಳೂರಿನಲ್ಲೇ ಇರಬೇಕು, ಇಲ್ಲಿಯ ಸುಖಸಂಪತ್ತನ್ನೇ ಅನುಭವಿಸುತ್ತಿರಬೇಕು, ಈ ಸ್ಥಳವನ್ನು ಬಿಟ್ಟು ಈ ಕಾಲೇಜನ್ನು ಬೇರೆ ಸ್ಥಳಕ್ಕೆ ಹಾಕಿದರೆ ನಮ್ಮ ಗತಿ ಏನು ಎಂಬ ಅಭಿಪ್ರಾಯಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಸರ್ಕಾರದವರಿಗೆ ಈ ದಿವಸ ಈ ಕಾಲೇಜು ಗಳನ್ನೆಲ್ಲ ಬೆಂಗಳೂರಿನಲ್ಲೇ ಸ್ಥಾಪನೆ ಮಾಡಬೇಕೆಂದು ಸಲಹೆಗಳನ್ನು ಮಾಡುತ್ತಿದ್ದಾರೆಂಬುದು ನನ್ನ ಖಚಿತವಾದ ಅಭಿಪ್ರಾಯ. ಈ ವಿಷಯವನ್ನು ಸರ್ಕಾರದವರು ತೀವ್ರವಾಗಿ ಆಲೋಚನೆ ಮಾಡಬೇಕು. ಈ ಕಾಲೇಜನ್ನು ಬೆಂಗಳೂರಿಗೆ ದೂರವಾಗಿರತಕ್ಕ ಪ್ರದೇಶದಲ್ಲಿ ಸ್ಥಾಪನೆ ಮಾಡ ಬೇಕೆಂದು ನಾನು ತಮಗೆ ಒತ್ತಾಯ ಮಾಡುತ್ತೇನೆ.

ಈ ವಿಶ್ವವಿದ್ಯಾ ನಿಲಯವನ್ನು ನಡೆಸಲಿಕ್ಕೆ ಎಲ್ಲ ನಾಮಕರಣ ಸದಸ್ಯರೇ ಇರಬೇಕು ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಶಾಸನಸಭೆಗಳು ಏಕೆ ಇರಬೇಕು. ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ಅವಕಾಶವಿರುವಂತೆ, ಈ ವಿಶ್ವವಿದ್ಯಾನಿಲಯದಲ್ಲಿಯೂ ಶಾಸನಸಭೆಗಳ ಪ್ರತಿನಿಧಿಗಳಿರಲು ಅವಕಾಶ ವಿರಲೇಬೇಕು. Progressive farmers, ವ್ಯವಸಾಯ ವಿದ್ಯಾಭ್ಯಾಸದಲ್ಲಿ ಆಸಕ್ತಿಯಿರುವ ಜ ರನ್ನು ನಾಮಕರಣ ಮಾಡಬಹುದು ಎಂದು ಹೇಳಿದ್ದಾರೆ. ಇದರಿಂದ ಸರ್ಕಾರದವರು ತಮಗೆ ಬೇಕಾದವರನ್ನು ನಾಮಕರಣ ಮಾಡುವುದಕ್ಕೆ ಅವಕಾಶವಾಗುತ್ತದೆ. ಕೋಟ್ಯಂತರ ರೂಪಾಯಿ ಖರ್ಚು ಮಾಡುವಂಥ ಈ ವಿಶ್ವವಿದ್ಯಾನಿಲಯದ ಆಡಳಿತದ ಮಂಡಳಿಯಲ್ಲಿ ಶಾಸನಸಭೆಯ ಪ್ರತಿನಿಧಿ ಗಳಿರುವುದಕ್ಕೆ ಖಂಡಿತವಾಗಿಯೂ ಅವಕಾಶವಿರಬೇಕು ಎಂದು ತಿಳಿಸುತ್ತೇನೆ.

6.00. P. M.

ಇನ್ನೊಂದು ವಿಷಯವೆಂದರೆ ಈ ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರನ್ನು ಮತ್ತು ಪ್ರೊಫೆಸರುಗಳನ್ನು ನೇಮಕ ಮಾಡುವ ಸಂದರ್ಭದಲ್ಲಿ ಇಲಾಖೆಗಳಲ್ಲಿರತಕ್ಕ ಪರಿಣತರು ಮತ್ತು ಹತ್ತಾರು ವರ್ಷಗಳಿಂದ ಇಲಾಖೆಯನ್ನು ನಡೆಸಿ ಮೀನುಗಾರಿಕೆ, ಪಶು ಸಂಗೋಪನೆ ಇವುಗಳನ್ನು ಅಭಿವೃದ್ಧಿಗೆ ತಂದಂಥ ಜನರನ್ನು ವಿಶ್ವವಿದ್ಯಾನಿಲಯದ ಅಧ್ಯಾಪಕರನ್ನಾಗಿ ಮಾಡುವುದರಲ್ಲಿ ಅರ್ಥವಿಲ್ಲ. ಇವರಿಗೆ ಇಲಾಖೆಯಲ್ಲಿ ಯಾರನ್ನು transfer ಮಾಡಬೇಕು ಎನ್ನುವ ಆಡಳಿತವಿಚಾರ ಗೊತ್ತಿರುತ್ತದೆ. ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರ ಕೆಲಸ ಮಾಡಲು ಪರಿಣತರನ್ನು ನೇಮಕಮಾಡಬೇಕು. ನಮ್ಮ ವರು ವ್ಯವಸಾಯ ವಿಷಯಗಳನ್ನು ತಿಳಿಯಲು ಪರದೇಶಗಳಿಗೆ ಹೋಗುತ್ತಾರೆ, ಇಲ್ಲಿಂದ ಜನರನ್ನು ಬೇರೆ ದೇಶಗಳಿಗೆ ಕಳುಹಿಸಿ ಹತ್ತಾರು ಸಾವಿರ ರೂಪಾಯಿ ಖರ್ಚು ಮಾಡುವುದಕ್ಕಿಂತ ಬೇರೆ ದೇಶ ಗಳಿಂದ ತಜ್ಞರನ್ನು ಕರೆಸಿ ಸರಿಯಾದ ಶಿಕ್ಷಣ ದೊರೆಯುವಂಥ ನಿಜವಾದ ವ್ಯವಸಾಯ ಕಾಲೇಜನ್ನು ಮಾಡಬೇಕು. ಬೇರೆ ವಿಶ್ವವಿದ್ಯಾನಿಲಯಗಳು ಈದಿನ ಪದವೀಧರರನ್ನು ತಯಾರಿಸುವ ಕಾರ್ಖಾನೆ ಗಳಾಗಿರುವಂತೆ ಇದು ಆಗಬಾರದು. ಇದು ಒಂದು ವ್ಯವಸಾಯದ ಕಾರ್ಖಾನೆಯಾಗಿ ಕೆಲವು ಜನ ಪದವೀಧರರನ್ನು ತಯಾರುಮಾಡಿ, ಅವರಿಗೆ ಕೆಲಸ ಸಿಕ್ಕದೆ ಊರಿಂದೂರಿಗೆ ಅಲೆಯತಕ್ಕ ಪರಿಸ್ಥಿತಿ ಬರಬಾರದು. ಈ ವಿಶ್ವವಿದ್ಯಾನಿಲಯದಲ್ಲಿ ಅವರಿಗೆ ಸರಿಯಾದ ವಿದ್ಯಾಭ್ಯಾಸ ದೊರೆಯುವಂತೆ ಮಾಡಿ ಅವರಿಗೆ ಪದವೀಧರರಾದ ಮೇಲೆ ಕೆಲಸ ಸಿಕ್ಕದೆ ಇದ್ದರೂ ಕೂಡ ವ್ಯವಸಾಯದಲ್ಲಿ ಪ್ರಗತಿಪರವಾದ ಕಾರ್ಯಗಳಲ್ಲಿ ಅವರು ತೊಡಗುವಂತೆ ಮಾಡಬೇಕು. ಇಂಥ ವಿದ್ಯಾಭ್ಯಾಸವನ್ನು ಕೊಡುವುದಕ್ಕೆ ತಜ್ಞರನ್ನು ಬೇರೆ ರಾಜ್ಯಗಳಿಂದ ಅಥವಾ ಹೊರ ದೇಶಗಳಿಂದ ಕರೆಸಿ ಸರಿಯಾದ ಅಧ್ಯಾಪಕರನ್ನು ನೇಮಿಸಬೇಕು. ಹಾಗೆ ಮಾಡದೆ ನಮ್ಮವರಿಗೆ ಕೆಲಸ ಸಿಕ್ಕಲಿಲ್ಲವೆನ್ನುವ ದೃಷ್ಟಿಯಿಂದ ವ್ಯವಸಾಯ ವಿಜ್ಞಾನದಲ್ಲಿ ಆಸಕ್ತಿಯಾಗಲೀ, ತಿಳುವಳಿಕೆಯಾಗಲಿ ಇಲ್ಲದಂಥ ಜನರನ್ನು ತುಂಬಿಸಿ ಒಂದು ನಾಟಕ ನಡೆಯದ ರೀತಿ ಸರ್ಕಾರ ಎಚ್ಚರಿಕೆ ವಹಿಸಬೇಕು ಮತ್ತು ಇದನ್ನು ಹೆಬ್ಬಾಳದಲ್ಲಿ ಸ್ಥಾಪನೆ ಮಾಡದೆ ಬೇರೆಕಡೆ ಸರಿಯಾದ ಜಾಗದಲ್ಲಿ ಸ್ಥಾಪನೆ ಮಾಡಬೇಕೆಂದು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ನಾರಾಯಣ ಗೌಡ.—ಸ್ವಾಮಿ, ಈ ಮಸೂದೆಯ ಮೇಲೆ ಮಾತನಾಡುತ್ತ ಅನೇಕ ಮಾನ್ಯ ಸದಸ್ಯರುಗಳು ಸೂಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಆ ಸಲಹೆಗಳನ್ನು ಸಾಧ್ಯವಾದ ಮಟ್ಟಿಗೂ ಮನಸ್ಸಿನಲ್ಲಿಟ್ಟುಕೊಂಡು ಯಾವ ಯಾವ ಸಂದರ್ಭದೊಳಗೆ ನಾವು ಅವುಗಳನ್ನು ಎಷ್ಟು ಮಾತ್ರ ಕಾರ್ಯ ನಿರ್ವಹಣೆಯಲ್ಲಿ ತರಬಹುದೋ ಅದನ್ನು ಮಾಡುವಹಾಗೆ ಈ ಸಮಯದಲ್ಲಿ ನಾನು ಹೇಳುತ್ತೇನೆ.

(ಶ್ರೀ ಜಿ. ನಾರಾಯಣಗೌಡ)

ಮುಖ್ಯವಾಗಿ, ಮೊದಲನೆಯದಾಗಿ ಈ ವಿಶ್ವವಿದ್ಯಾನಿಲಯ. ಇಲ್ಲಿ ಸಾಧಾರಣವಾಗಿ ಅನೇಕ ಮಾನ್ಯಸದಸ್ಯರುಗಳಿಗೆ ತಿಳಿದಿರುವ ಹಾಗೆ ನಮ್ಮ ರಾಜ್ಯದಲ್ಲಿ ಭಾರತದಲ್ಲೇ ಪ್ರಥಮವಾಗಿ ಸ್ಥಾಪನೆ ಯಾಗಬೇಕಾಗಿತ್ತು. ಆದರೆ ಕಾರಣಾಂತರಗಳಿಂದ ಇದಾಗುವುದಕ್ಕೆ ಅವಕಾಶವಾಗಲಿಲ್ಲ. ಹಾಗೂ ನಾಲ್ಕು ರಾಜ್ಯಗಳಲ್ಲಿ ಸ್ಥಾಪನೆಯಾದ ಮೇಲೆ ಇಲ್ಲಿ ನಾವು ಈಗ ಸ್ಥಾಪನೆ ಮಾಡುವುದಕ್ಕೆ ಈ ಮಸೂದೆಯನ್ನು ತಂದಿದ್ದೇವೆ. ಈಗ ಅನೇಕ ಮಾನ್ಯಸದಸ್ಯರುಗಳು ಈ ಮಸೂದೆಯನು ಸೆಲೆಕ್ಟ್ ಕಮಿಟಿಗೆ ಕಳಿಸಿಕೊಡಬೇಕೆಂದು ಸಲಹೆ ಮಾಡಿದ್ದಾರೆ. ನಾನು ಮೊದಲೇ ತಿಳಿಸಿದಹಾಗೆ, ನಾವು ಈ ಮಸೂದೆಯನ್ನು ಮೂರು ನಾಲ್ಕು ವರ್ಷಗಳ ಹಿಂದೆಯೇ ತಂದು, ಕಾನೂನಾಗಿ ಮಾಡಿ ಅದರ ಪ್ರಯೋಜನವನ್ನು ಪ್ರಥಮವಾಗಿ ಪಡೆಯಬೇಕಾಗಿತ್ತು ಎಂದು ಹೇಳಿದೆ. ಆದುದರಿಂದ ಈಗ ಈ ಮಸೂದೆಯನ್ನು ನಾವು ಕಾನೂನಿನ ಕಡತದಲ್ಲಿಡದೆ ಹೋದರೆ ನಾವು ಈ ಮಸೂದೆಯಿಂದ ಏನು ಫಲವನ್ನು ಅಪೇಕ್ಷಿಸುತ್ತೇವೆಯೋ ಅದು ಬಹುಶಃ ಮೂರನೆಯ ಯೋಜನೆಯೊಳಗಾಗಿ ಆಗುವದಿಲ್ಲ ವೆನ್ನುವುದನ್ನು ಮಾತ್ರ ಈ ಸಭೆಯಲ್ಲಿ ನಾನು ಹೇಳಬಯಸುತ್ತೇನೆ.

ಆಮೇಲೆ ಈ ವಿಶ್ವವಿದ್ಯಾನಿಲಯವನ್ನು ಹೆಬ್ಬಾಳದಲ್ಲಿ ಏಕೆ ಸ್ಥಾಪನೆಮಾಡಬೇಕಾಗಿತ್ತು, ಬೇರೆ ಹಳ್ಳಿಗಾಡಿನ ಸ್ಥಳಗಳಿರಲಿಲ್ಲವೇ ಎಂದು ಅನೇಕ ಮಾನ್ಯಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ನಾನು ಈ ಮಸೂದೆಯನ್ನು ಈ ಸಭೆಯಲ್ಲಿ ಪರಿಶೀಲನೆಗೆ ಇಡುವಾಗ ಹೇಳಿದ ಹಾಗೆ ಕೇಂದ್ರ ಸರ್ಕಾರದವರು ಇಂಥ ವಿಶ್ವವಿದ್ಯಾನಿಲಯಗಳ ಸ್ಥಾಪನೆ ನಮ್ಮ ದೇಶಕ್ಕೆ ಎಷ್ಟು ಅರ್ಹವಾಗಿದೆ ಎನ್ನುವುದನ್ನು ಅನೇಕ ಸಂದರ್ಭಗಳಲ್ಲಿ ತಮ್ಮ ಸಿಫಾರಸುಗಳ ಮೂಲಕ ತಿಳಿಸಿ ದ್ದಾರೆ. ಹಾಗೂ ಡಾಕ್ಟರ್ ರಾಧಾಕೃಷ್ಣನ್ ಅವರ ಅಧ್ಯಕ್ಷತೆಯೊಳಗೆ ನೇಮಕವಾಗಿದ university commission ಅವರೂ ಸಹ ತಿಳಿಸಿದ್ದಾರೆ. ಅದೇರೀತಿ ಕೇಂದ್ರಸರ್ಕಾರದವರು ಈ ವಿಶ್ವ ವಿದ್ಯಾನಿಲಯಗಳನ್ನು ಸ್ಥಾಪನೆ ಮಾಡುವ ವಿಷಯದೊಳಗೆ ಡಾ॥ ಕನಿಂಗ್ಸ್ ಅವರ ಅಧ್ಯಕ್ಷತೆಯೊಳಗೆ ಒಂದು ಕಮಿಟಿಯನ್ನು ಮಾಡಿದ್ದು ಅವರೂ ಸಹಿತ ಎಲ್ಲ ರಾಜ್ಯಗಳಿಗೂ ಹೋಗಿ ಅಲ್ಲಿನ ತಜ್ಞರೊಂದಿಗೆ ಮಾತನಾಡಿದ್ದಾರೆ. ಮತ್ತು ಎಲ್ಲೆಲ್ಲಿ ಈ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಬೇಕೋ ಆ ಸ್ಥಳಗಳನ್ನು ಸಹಿತ ಅಜಮಾಯಿಷಿಮಾಡಿ ಈ ಸ್ಥಳಗಳಲ್ಲಿ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡು ವುದಕ್ಕೆ ಯೋಗ್ಯವೆಂದು ಹೇಳಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಸ್ಥಳವಲ್ಲದೆ ಬೇರೆ ಯಾವುದಾದರೂ ಜಾಗ ಅವರಿಗೆ ತೋರಿಸಿ ದ್ದಾರೆಯೇ ಸ್ವಾಮಿ ?

ಶ್ರೀ ಜಿ. ನಾರಾಯಣಗೌಡ.—ತೋರಿಸಿದ್ದಾರೆ. ನಮ್ಮ ಮಾನ್ಯ ಸದಸ್ಯರನೇಕರು ಹೇಳಿದರು, ಹಳ್ಳಿಗಳಕಡೆ ಎಲ್ಲಿಯಾದರೂ ಈ ವಿಶ್ವವಿದ್ಯಾನಿಲಯವನ್ನು ಮಾಡಬಹುದಾಗಿತ್ತು ಎಂದು. ಈಗಾಗಲೇ ಹೆಸರಘಟ್ಟದಲ್ಲಿ ಮೂರು ಸಾವಿರ ಚಿಲ್ಲರೆ ಎಕರೆ ಜಮೀನಿದೆ. ಹೆಬ್ಬಾಳದ ಕಾಲೇಜಿನ ಸುತ್ತ ಮುತ್ತ ಹೆಚ್ಚು ಕಡಮೆ 700-800 ಎಕರೆ ಜಮೀನನ್ನು ಅಕ್ವೈರ್ ಮಾಡಿಕೊಳ್ಳುವುದರಲ್ಲಿ ದ್ದೇವೆ. ಇದೇ ಸಾಲದು ಎಂದು ಹೇಳುವ ಮಾನ್ಯಸದಸ್ಯರುಗಳಿರುವಾಗ ಇಂಥ ಅವಕಾಶ ಬೇರೆ ಕಡೆ ಎಲ್ಲಿ ಸಿಕ್ಕುತ್ತದೆ ?

ಶ್ರೀ ಪಿ. ವೆಂಕಟಗಿರಿಯಪ್ಪ.—ಇಲ್ಲಿ 20 ಲಕ್ಷ ರೂಪಾಯಿ ಆಗುವ ಜಮೀನು ಬೇರೆ ಕಡೆ ಐದು ಲಕ್ಷ ರೂಪಾಯಿ ಆಗುತ್ತದೆ.

ಶ್ರೀ ಜಿ. ನಾರಾಯಣಗೌಡ.—ಬೇರೆ ಕಡೆ ಸರಿಯಾದ ಭೂಮಿ ಸಿಕ್ಕಬೇಕು, ನೀರಿನ ವಸತಿ ಯಿರಬೇಕು. ಈಗಾಗಲೇ ಇಲ್ಲಿ ಒಂದು ಕಾಲೇಜು ಇರುವಾಗ ಬೇರೆ ಹೊಸದಾಗಿ ಕಟ್ಟಡಗಳನ್ನು ಕಟ್ಟುವುದಾದರೂ ಏಕೆ ? ಕಟ್ಟಡಗಳಿಗಾಗಿ ಹೆಚ್ಚು ಖರ್ಚುಮಾಡಬಾರದು ಎಂದು ತಾವೇ ಹೇಳು ತ್ತಿದ್ದೀರಿ. ಹೊಸದಾಗಿ ಕಟ್ಟಡಗಳೆಲ್ಲ ಆಗಬೇಕಾದರೆ ಇವಕ್ಕೆ ಎರಡರಷ್ಟು ಖರ್ಚು ಮಾಡಬೇಕಾಗು ತ್ತದೆ. ಇದನ್ನೆಲ್ಲ ಮನಸ್ಸಿನಲ್ಲಿಟ್ಟುಕೊಂಡು ಈ ವಿಶ್ವವಿದ್ಯಾನಿಲಯ ಹೆಬ್ಬಾಳದಲ್ಲಿ ಆಗುವುದು ಉತ್ತಮವೆಂದು ಹೇಳಿದ್ದರ ಮೇಲೆ ಇಲ್ಲಿ ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಚಿಕ್ಕನಹಳ್ಳಿ ಹತ್ತಿರ ಎಂಥ ಜಮೀನಿದೆ, ಸ್ವಾಮಿ ?

ಶ್ರೀ ಜಿ. ನಾರಾಯಣಗೌಡ.—ಅದು ಸಿರಾ ತಾಲ್ಲೂಕಿನಲ್ಲಿರುವುದರಿಂದ ಅವರು ಹಾಗೆ ಹೇಳುತ್ತಿದ್ದಾರೆ ಸ್ವಾಮಿ.

ಹೀಗೆ ಈ ನಮ್ಮ ದೇಶದಲ್ಲಿ ಇಂತಹ ಒಂದು ವಿಶ್ವವಿದ್ಯಾನಿಲಯ ಸ್ಥಾಪನೆಯಾಗುವುದರ ಉದ್ದೇಶ ನಾನು ಮೊದಲೇ ಹೇಳಿದ ಹಾಗೆ, ಆಹಾರ ಉತ್ಪತ್ತಿ ಹೆಚ್ಚಿಗೆ ಆಗಬೇಕು ಎನ್ನುವುದು

ತಮಗೆಲ್ಲರಿಗೂ ಗೊತ್ತಿರುವ ಹಾಗೆ ವಿಶ್ವವಿದ್ಯಾನಿಲಯಕ್ಕೆ ಮುಖ್ಯವಾದದ್ದು ಮೂರು ಬಾಬುಗಳು. ಮೊದಲನೆಯದು ಶಿಕ್ಷಣ, ಎರಡನೇದು ಸಂಶೋಧನೆ ಮತ್ತು ಮೂರನೆಯದು ವಿಸ್ತರಣೆ ಸಂಶೋಧನೆ ಬಹಳ ಮಹತ್ತರವಾದುದು ಎಂದು ಅನೇಕರು ಹೇಳಿದ್ದಾರೆ. ರೈತ ತನ್ನ ಹೊಲಗದ್ದೆಗಳಲ್ಲಿ ಸಂಶೋಧನೆಯಾದ ಕೆಲಸಗಳನ್ನು ಅಳವಡಿಸಿಕೊಳ್ಳದೆ ಹೋದರೆ ಏನೂ ಪ್ರಯೋಜನವಿಲ್ಲ. ಅದಕ್ಕೋಸ್ಕರ ವಿಸ್ತರಣೆಯ ಒಂದು ಭಾಗವನ್ನು ಇಲ್ಲಿ ಏರ್ಪಾಡು ಮಾಡಿರುವುದರಿಂದ ದೇಶದಲ್ಲಿ ಆಹಾರದ ಉತ್ಪತ್ತಿ ಹೆಚ್ಚುವ ಒಂದು ಭರವಸೆ ಇದೆ.

ಆ ಮೇಲೆ ಈ ವಿಶ್ವವಿದ್ಯಾನಿಲಯದೊಳಗೆ Board of Regents ಮತ್ತು ಅದರ ರಚನೆ ಬಗ್ಗೆ ಅನೇಕರು ಪ್ರಸ್ತಾಪ ಮಾಡಿದ್ದಾರೆ. ಇದರ ಅಂಗರಚನೆ ವಿಷಯವಾಗಿ ಕೆಲವು ಮಾನ್ಯ ಸದಸ್ಯರು ಮಾತನಾಡುತ್ತ ಇದರೊಳಗೆ ಈ ಮಾನ್ಯಸಭೆಯ ಸದಸ್ಯರೂ ಇಲ್ಲದೇ ಹೋದರೆ ಇದು ಎಂತಹ ಬೋರ್ಡು ಎಂದರು. ನನಗೆ ಖಂಡಿತವಾಗಿಯೂ ಈ ಮಾನ್ಯ ಸಭೆಯ ಸದಸ್ಯರುಗಳಲ್ಲಿ ಬಹಳ ನಂಬಿಕೆಯೂ ಉಂಟು. ಪೂರ್ಣ ವಿಶ್ವಾಸವೂ ಉಂಟು. ಆದರೂ ಸಹ ಅವರು ಇದರೊಳಗಿರುವುದಿಲ್ಲ ಎನ್ನುವ ಅಪನಂಬಿಕೆ ನಿಮಗೇಕೆ ಇರುತ್ತೋ ನನಗೆ ಅರ್ಥವಾಗುತ್ತಿಲ್ಲ. ಈಗ ಇರುವ ಪ್ರಕಾರ ಇನ್ನೂ ಇಬ್ಬರು ಪ್ರಗತಿಪರ ರೈತರನ್ನು ಚಾನ್ಸಲರ್‌ರವರೇ ನೇಮಕಮಾಡುತ್ತಾರೆ. ಆ ಪ್ರಗತಿಪರರಾದ ರೈತರೇ ಯಾರಾದರೂ ಈ ಮಾನ್ಯ ಸಭೆಯಲ್ಲಿ ಸದಸ್ಯರಾಗಿದ್ದರೂ ಇರಬಹುದು. ಏಕೆ ಇರಬಾರದು ? ವ್ಯವಸಾಯದ ವಿದ್ಯಾಭ್ಯಾಸದಲ್ಲಿ ಪರಿಣತರಾದವರು ಐದು ಮಂದಿ ವ್ಯವಸಾಯಗಾರರಾದವ್ರು ಈ ಮಾನ್ಯ ಸಭೆಯಲ್ಲಿ ಸದಸ್ಯರಾಗಿರಬಹುದು. ಇಂತಹವರಲ್ಲಿ ಕೆಲವರಾದರೂ ಏಕೆ ಇಲ್ಲಿರಬಾರದು ! ರಿಜಿಸ್ಟರ್ಡ್ ಗ್ರ್ಯಾಜುಯೇಟುಗಳಾಗಿರುವವರು ಈ ಸಭೆಯಲ್ಲಿ ಇದ್ದಾರೆ. ಮಾನ್ಯ ಸದಸ್ಯರಾರೂ ಇಂತಹ ಶಂಕೆಗಳನ್ನು ಇಡುವುದಕ್ಕೆ ಅವಕಾಶವೇ ಇಲ್ಲ. ಆ ಶಂಕೆಗಳು ನಿರಾಧಾರವಾದವುಗಳೆಂದು ಹೇಳುತ್ತೇನೆ. Dr. Cunnings ರವರ ಅಧ್ಯಕ್ಷತೆಯಲ್ಲಿ ಏನು ಒಂದು ಸಮಿತಿ ಏರ್ಪಾಡಾಗಿತ್ತೋ ಅವರೇ ಇಲ್ಲಿಗೆ ಬಂದು ಇದನ್ನು ಯೂನಿವರ್ಸಿಟಿ ಆಫೀಸರುಗಳೊಡನೆ ಬೆರೆತು, ಮಾತನಾಡಿ ಈ ಬಿಲ್ಲನ್ನು ತಯಾರು ಮಾಡುವುದಕ್ಕೆ ಅವರೇ ಹೆಚ್ಚಾಗಿ ನೆರವಾಗಿದ್ದಾರೆ.

ಆ ಮೇಲೆ ವೈಸ್ ಚಾನ್ಸಲರ್‌ರವರ ಅವಧಿ ಇಲ್ಲಿ ಮೂರು ವರ್ಷವೆಂದಿರುವುದನ್ನು ಐದು ವರ್ಷ ಮಾಡಿ ಎಂದು ಹೇಳಿದ್ದಾರೆ. ಸರ್ವಸಾಧಾರಣವಾಗಿ ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಮೂರು ವರ್ಷದ ಅವಧಿ ಎಂದಿಟ್ಟುಕೊಂಡಿದ್ದಾರೆ. ಅದೇ ರೀತಿ ಇದರಲ್ಲಿಯೂ ಮೂರು ವರ್ಷ ಇರುವುದು ಸೂಕ್ತ ಎಂದು ಈ ರೀತಿ ಮಾಡಲಾಗಿದೆ. ಒಂದು ವೇಳೆ ಇದನ್ನು ಐದು ವರ್ಷಕ್ಕೇರಿಸಬೇಕು ಎಂದರೆ ಆ ಸಲಹೆಯನ್ನು ನಾವು ಯೋಚನೆ ಮಾಡಿ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ.

ಒಬ್ಬರು ಮಾನ್ಯ ಸದಸ್ಯರು ಈ ವಿಶ್ವವಿದ್ಯಾನಿಲಯವನ್ನು ಧಾರವಾಡದಲ್ಲಿ ಪ್ರಾರಂಭ ಮಾಡಿ ಅಲ್ಲಿ ಸ್ಥಾಪನೆ ಮಾಡಿ, ಅಲ್ಲಿ ಪ್ರಯೋಗ ನಡೆಸಿದಮೇಲೆ ನಾವು ಅದನ್ನು ಹೆಬ್ಬಾಳಕ್ಕೆ ತರಬಹುದು ಎಂದರು. ಈಗ ಹೆಬ್ಬಾಳದಲ್ಲಿ ಪ್ರಾರಂಭಮಾಡಿ ಪ್ರಯೋಗ ಮಾಡಿ ನೋಡೋಣ. ಆಮೇಲೆ ಅದನ್ನು ನೋಡೋಣ.

ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಸುಂತಾನ್‌ಕರ್‌ರವರು ಅನೇಕ ಒಳ್ಳೆಯ ಮತ್ತು ಸೂಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅವುಗಳಲ್ಲಿ ಕೆಲಕೆಲವನ್ನು ನಾನಿಲ್ಲಿ ಪ್ರಸ್ತಾಪ ಮಾಡುತ್ತೇನೆ. ಅವರು ಕರ್‌ಕ್ಯುಲಂನ್ನು ಹೇಳಿದಂತೆ ಸ್ವಲ್ಪ ಹೆಚ್ಚು ಕಡಿಮೆ ರಿಜಿಡ್ ಆಗಿದ್ದರೆ ಅವನ್ನು flexible ಆಗಿ ಮಾಡಬಹುದು. ಇವನ್ನೆಲ್ಲಾ ಲಕ್ಷದಲ್ಲಿಟ್ಟುಕೊಂಡು ಮುಂದೆ ಮಾಡಲಾಗುತ್ತದೆ.

ಅವರು ಇದರೊಳಗೆ research ಎಂದರೆ ಸಂಶೋದನೆ ಬಗ್ಗೆ ಇದರ ಕೆಲಸಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕು ಎಂದು ಹೇಳಿದರು. ಇದರಲ್ಲಿ ಈಗಿರುವುದು ಅಷ್ಟೇ. ಸಂಶೋಧನೆಗಾಗಿ ಹೆಚ್ಚಿನ ಪ್ರಾಶಸ್ತ್ಯ ಈ ಮಸೂದೆಯೊಳಗೆ ಅಡಕ ಮಾಡಲಾಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಎಷ್ಟಿದೆ ?

ಶ್ರೀ ಜಿ. ನಾರಾಯಣ ಗೌಡ.—ಎಷ್ಟಿರಬೇಕೋ ಅಷ್ಟೇ ಇದೆ. ಕೆಲವು ಮಾನ್ಯ ಸದಸ್ಯರುಗಳು ಮತ್ತು ಮಾನ್ಯ ಶ್ರೀಮಾನ್ ಸಿ. ಜೆ. ಮುಕ್ಕಣ್ಣಪ್ಪನವರು Admission to the University ಬಗ್ಗೆ Backward Classes ಗೆ ರಿಸರ್ವೇಷನ್ನನ್ನು ಸರ್ಕಾರದವರು ಹೇಗೆ ಮಾಡುತ್ತಾರೆಂದು ಕೇಳಿದ್ದಾರೆ. ಸುಪ್ರೀಮ್ ಕೋರ್ಟು ಏನು ತೀರ್ಪು ಕೊಟ್ಟಿದ್ದಾರೋ ಅದರಮೇಲೆ ಸರಕಾರ ಒಂದು ತೀರ್ಮಾನಕ್ಕೆ ಬರಬೇಕಾಗಿದೆ. ಅದಕ್ಕೋಸ್ಕರವಾಗಿ ನಿರ್ದಿಷ್ಟವಾಗಿ ಇಲ್ಲಿ ಯಾವುದನ್ನು ಹೇಳಿರುವುದಿಲ್ಲ.

ಮಾನ್ಯ ಸದಸ್ಯರಾದ ಶ್ರೀಮಾನ್ ಗಾಂಜಿ ವೀರಪ್ಪನವರು Controller of Examinations ಎಂಬುದಾಗಿ ಒಬ್ಬರು ಅಧಿಕಾರಿಗಳಿರಬೇಕು, ಎಂದರು. ಆ ಅಧಿಕಾರಿಯನ್ನು ನೇಮಿಸಿಕೊಳ್ಳಲು ಈಗಿನ ಯೂನಿವರ್ಸಿಟಿಗಳಲ್ಲಿ ಒಂದು ಪ್ರಾವಿಜನ್ ಮಾಡಲಾಗಿದೆ. ಆ ರೀತಿ ಇಲ್ಲ,

(ಶ್ರೀ ಜಿ. ನಾರಾಯಣಗೌಡ)

ನೇಮಿಸಿಕೊಳ್ಳುವುದಕ್ಕೆ ಏನೂ ತಡೆಯಿಲ್ಲ. ಯಾವ ಅಧಿಕಾರಿಗಳನ್ನಾಗಲೀ ನೇಮಿಸಿಕೊಳ್ಳುವುದಕ್ಕೆ Section (9) ನಲ್ಲಿರುವ 14ನೇ ಕಲಮ್ಮಿನಲ್ಲಿ:

"Such other officers in the Service of the University as may be declared by the Statutes to be officers of the University"

ಎಂದು ಹೇಳಿರುವುದರಿಂದ ಇದನ್ನು ಮಾಡಿಕೊಳ್ಳುವುದಕ್ಕೆ ಅನುಕೂಲವಿದೆ. ಇನ್ನು Board of Appointments ವಿಷಯವಾಗಿ ಬಹಳ ದೀರ್ಘವಾಗಿ ಮಾತನಾಡಿದರು. ಅಧಿಕಾರಿ ಹುದ್ದೆಗಳಲ್ಲಿ ಯಾರ್‍ಯಾರು ಯಾವ ಯಾವ ಹುದ್ದೆಗಳಲ್ಲಿರಬಹುದು ಎನ್ನುವ ವಿಷಯವಾಗಿ ಒಂದು ಬೋರ್ಡು ರಚನೆಮಾಡಲು ಈಗಿನ ಮಸೂದೆಯಲ್ಲಿ ಅವಕಾಶ ಮಾಡಿದೆ. ಅಲ್ಲಿ ಈ ವಿಷಯಗಳನ್ನೆಲ್ಲಾ ಹೇಳಿದೆ. ಇದರಲ್ಲಿರುವ Section 24ರಲ್ಲಿರುವ (4) ನೇ ಕಲಮಿನಲ್ಲಿ Such other Bodies of the University as may be declared by the Statutes to be the authorities of the University. ಎಂದು ಹೇಳಿರುವುದರಿಂದ ಇಲ್ಲಿ ಒಂದು ಬೋರ್ಡನ್ನು ಮಾಡಿಕೊಳ್ಳುವುದಕ್ಕೆ ಅನುಕೂಲವಿದೆ. ಇದನ್ನು ಮಾಡಿಕೊಳ್ಳುವದಕ್ಕೆ ಅವಕಾಶವಿಲ್ಲದೇ ಇಲ್ಲ. ಶ್ರೀಮಾನ್ ಗಾಂಜಿ ವೀರಪ್ಪನವರು ಸೀರಿಯಸ್ಸಾಗಿ ಇದ್ದು ಇದ್ದೇ ತೀರಬೇಕೆಂದು ಹೇಳಿದ್ದಾರೆ. ಇನ್ನು ಅನೇಕ ಸದಸ್ಯರೂ ಹೇಳಿದರು. ನಮ್ಮ ವಿರೋಧಪಕ್ಷದ ನಾಯಕರೂ ಸಹ ಇರಲೇಬೇಕೆಂದು ಹೇಳಿದ್ದಾರೆ. ನಮ್ಮ ವಿರೋಧಪಕ್ಷದ ನಾಯಕರು ಈಗಿನ ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿನ ಮೆಂಬರಾಗಿದ್ದಾರೆ. ಅವರಿಗೆ ಇದರ ಸಾಧಕ ಬಾಧಕಗಳೆಲ್ಲಾ ಪೂರ್ಣವಾಗಿ ಮನವರಿಕೆಯಾಗಿದೆ. ಇಂತಹ ಸಂದರ್ಭ ಬಂದರೆ ನಾವು ಸೂಕ್ತ ಕಾರ್ಯಕ್ರಮ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಅದುವರೆಗೂ ಸ್ವಲ್ಪ ಹಿಡಿತದಿಂದಿರುವುದು ಒಳ್ಳೆಯದು.

ನಮ್ಮ ಮೈಸೂರು ಯೂನಿವರ್ಸಿಟಿಯಲ್ಲಿಯೂ ಕೂಡ ಪ್ರೊಚಾನ್ಸ್‌ಲ್ಯರ್ ಇದ್ದಾರೆ. ಪ್ರಾರಂಭದಲ್ಲಿ ಈ ವ್ಯವಸ್ಥೆ ಇರಲಿ ಎಂದು ಮಾಡಲಾಗಿದೆ. ಆದರೆ ಅವರಿಗೆ ಏನು ಕೆಲಸವಿದೆ ಎನ್ನುವುದನ್ನು ನಮೂದು ಮಾಡಿಲ್ಲವೆಂದು ಶ್ರೀ ಮುಕ್ಕಣ್ಣಪ್ಪನವರು ಹೇಳಿದರು ಸೆಕ್ಷನ್ 11 (2) ನೋಡಿದರೆ ಅದು ಅವರಿಗೆ ಗೊತ್ತಾಗುತ್ತದೆ.

"The Pro-Chancellor shall exercise such powers and functions of the Chancellor as may be conferred on him by or under this Act or under the Statutes. He shall also exercise such other powers and perform such other duties of the Chancellor as the Chancellor may by order in writing delegate to the Pro-Chancellor, and such delegation may be subject to such restrictions and conditions as may be specified in such order.

Sri C. J. MUCKANNAPPA.—Except this one clause, nowhere will the Pro-Chancellor come into the picture at all. That is why I had that fear.

ಶ್ರೀ ಜಿ. ನಾರಾಯಣ ಗೌಡ.—ಇದಕ್ಕೆ ಸ್ಟ್ಯಾಚ್ಯೂಟ ಮಾಡಬಹುದು. ಇನ್ನೊಂದು ವಿಷಯವನ್ನು ಮಾನ್ಯ ಸದಸ್ಯರಾದ ವೆಂಕಟಗಿರಿಯಪ್ಪನವರು ಹೇಳಿದರು. ಈ ಇಲಾಖೆಯ ಲ್ಲಿ ಇರುವವರನ್ನೇ ಅಧಿಕಾರಸ್ಥಾನಕ್ಕೆ ತಂದುಬಿಟ್ಟರೆ ಬಹಳ ಅನಾಹುತವಾಗುತ್ತದೆ ಆದುದರಿಂದ ಹೊರಗಿನಿಂದ ತಜ್ಞರನ್ನು ಕರೆದುಕೊಂಡು ಬರುವ ಹಾಗೆ ಮಾಡಬೇಕು ಎಂದು ಹೇಳಿದರು. ಇಲ್ಲಿ ಕಾಲೇಜುಗಳಲ್ಲಿ ಯಾರು ಯಾರು ಇದ್ದಾರೆಯೋ ಅವರ ಸೇವೆಯನ್ನು ತೆಗೆದುಕೊಂಡು ಉಳಿದ ಸ್ಥಾನಗಳಿಗೆ ಹೊರಗಡೆಯಿಂದ ತೆಗೆದುಕೊಳ್ಳುವುದಕ್ಕೆ ಯಾವ ನಿರ್ಬಂಧವಿಲ್ಲ. ಕೆಲವು ಸಂದರ್ಭದಲ್ಲಿ ಕೆಲವರನ್ನು ಹೊರಗಿನಿಂದ ಕರೆಸಿಕೊಳ್ಳಬೇಕಾಗುತ್ತದೆ. ಅದಕ್ಕೆ ಅಡ್ಡಿಯಿಲ್ಲ. ಒಟ್ಟಿನಲ್ಲಿ ಅನೇಕ ಮಾನ್ಯ ಸದಸ್ಯರು ಒಂದು ಮಾತು ಹೇಳಿದರು. ಈ ವಿಶ್ವವಿದ್ಯಾನಿಲಯ ಮಾಡಿದ ಮೇಲೆ ವ್ಯವಸಾಯ ಗ್ರ್ಯಾಜ್ಯುಯೇಟ್ಸ್ ಆದ ಮೇಲೆ ಹಳ್ಳಿಕಡೆ ಹೋಗದೆ ಸರಕಾರಿ ಉದ್ಯೋಗಕ್ಕಾಗಿ ಅಲೆದಾಡುತ್ತಾರೆ ಎಂಬ ವಿಷಯ ಪ್ರಸ್ತಾಪ ಮಾಡಿದರು ನಾನು ಅದಕ್ಕೆ ಇಷ್ಟೇ ಹೇಳುತ್ತೇನೆ. ಈ ವಿಶ್ವವಿದ್ಯಾನಿಲಯದಿಂದ ಹೆಚ್ಚು ಮಂದಿ ವಿದ್ಯಾವಂತರಾದರೂ ಕೂಡ ಇರತಕ್ಕ ಹುದ್ದೆಗಳು ಬಹಳ ಕಡಿಮೆಯಾಗಿರುವುವು. ಹುದ್ದೆ ಹುಡುಕುತ್ತ ಹೋಗುವ ಕಾಲ ಹೋಗುತ್ತದೆ. ಅವರೆಲ್ಲರೂ ಭೂಮಿಯ ಮೇಲೆ ಕೆಲಸ

ಮಾಡಲೇ ಬೇಕಾಗುತ್ತದೆ. ಹೆಚ್ಚೆಚ್ಚು ವಿದ್ಯಾವಂತರಾದರೂ ಕೂಡ ಅನ್ ಎಂಪ್ಲಾಯ ಮೆಂಟ ಪ್ರೊಬ್ಲೆಮ್ ಬರುವುದಿಲ್ಲ ಎಂದು ಹೇಳುತ್ತೇನೆ. ಇಷ್ಟು ಮಾತ್ರ ಹೇಳಿ, ಇನ್ನು ಕೆಲವು ಸಲಹೆಗಳ ವಿಚಾರದಲ್ಲಿ ನಮ್ಮ ಮಿತ್ರರು ಹೇಳಿದ ಹಾಗೆ ರೂಲ್ಸ ಫ್ರೇಮ್ ಮಾಡುವ ಕಾಲಕ್ಕೆ ಅಗಲಿ ಸ್ಟ್ಯಾಚ್ಯೂಟ ಮಾಡುವ ಕಾಲದಲ್ಲಾಗಲೀ ಮನಸ್ಸಿನಲ್ಲಿಟ್ಟುಕೊಂಡು ಅಂಥ ಸಂದರ್ಭದಲ್ಲಿ ಉಚಿತ ವಾದ ರೀತಿಯಲ್ಲಿ ಯೋಚನೆ ಮಾಡುತ್ತೇವೆಂದು ಹೇಳುತ್ತೇನೆ. ಇಷ್ಟು ಹೇಳಿ, ಈ ಮಸೂದೆಗೆ ಎಲ್ಲರೂ ಬೆಂಬಲ ಕೊಡಬೇಕೆಂದು ಮತ್ತೊಮ್ಮೆ ಹೇಳುತ್ತೇನೆ.

Mr. SPEAKER.—I put the question to the vote of the House. The question is .—

"That the University of Agricultural Sciences Bill, 1963, be taken into consideration."

The motion was adopted

Consideration of Clauses.

Sri B. R. SUNTHANKAR : Sir, I beg to move :—

"That in line 4 of item (2) the words "home economics" shall be deleted."

"That in line 5 of item (2), the following words shall be added between the words 'Technology' and 'marketing'

"Agricultural Chemistry, Plant Pathology, Entomology, agricultural economics including."

Mr. SPEAKER : Amendment on moved :—

"In line 4 of item (2) the words "home economics" shall be deleted."

"That in line 5 of item (2), the following words shall be added between the words 'Technology' and 'marketing'.

"Agricultural Chemistry, Plant Pathology, Entomology, agricultural economics including."

Sri B. R. SUNTHANKAR.—Sir, I am moving this amendment with a view to make the definition of the word 'agriculture' specific and more comprehensive. Here, according to me, the Sciences of Agricultural Chemistry, Plant Pathology, Entomology and Agricultural Economics should have been there, because these branches of science are very important and they are very essential for the science of agriculture as such. I must say, the framer of this Bill has not taken proper precaution to frame this Bill or to make the definitions as comprehensive as possible. I doubt, it may be, perhaps due to the ignorance of the framer of this Bill. Otherwise, he would not have omitted these very important branches of agricultural science. Agricultural Chemistry, Plant Pathology, Entomology, are very important branches of science and they must be included in agriculture They are very closely connected or I may say, they are essential parts

(SRI B. R. SUNTHANKAR)

of our agriculture. The importance of Agricultural Chemistry can be very well seen from the fact that the British Government In India, the first measure they took for agricultural improvement was the appointment of an Agricultural Chemist in 1890. Till that time there was no Agricultural officer with the Central Government. Even before the appointment of Director-General of Agriculture, the Agricultural Chemist was appointed by the Government of India in 1890. Agricultural Chemistry is a part of agricultural science, chemistry or chemical science. It is a chemical science dealing with agriculture.

Mr. SPEAKER.—Don't you think it is Chemistry? When Agricultural Science without any limitations is embodied, why do you doubt ?

Sri B. R. SUNTHANKAR.—I want to make the definition more comprehensive.

Mr. SPEAKER : In clause 6 this is what is provided :-

"to provide for instruction in agriculture, horticulture, veterinary and animal science, dairying, fisheries, agricultural engineering, home economics and........."

Why should you think 'Agricultural Chemistry' will not come in there ?

Sri B. R. SUNTHANKAR.—Other sciences are mentioned there, but these are not mentioned.

Mr. SPEAKER.—Why not 'Agricultural Physics'? In Clause 6, There are other words "other allied sciences," which is wide enough. Why should you not take chemical chemistry as a part of agricultural chemistry ?

Sri G. NARAYANA GOWDA.—As the Hon'ble Member himself put it, agricultural science is a sience of sciences.

Sri B. R. SUNTHANKAR.—I want that to be specifically mentioned in the Bill.

Sri G. V. GOWDA.—Because there are a number of amendments I suggest that this can be taken up to-morrow.

Mr. SPEAKER.—Hon. Sri G. V. Gowda was not here when something transpired and something was decided.

†Sri B. R. SUNTHANKAR.—Agricultural chemistry deals with various chemical processes dealing with agriculture—chemical processes, chemical actions and so many other things. There is physical chemistry; there is animal chemistry; there is food chemistry. Know of these is very essential for agriculture. As an instance, I may say that in order to know the requirement of fertiliser for a crop, knowledge of agricultural chemistry is very essential. An area of land where sugarcane is grown requires 150 pounds of nitrogen. We supply fertiliser in the form of ammonium sulphate or any other nitrogenous fertiliser. We prescribe requirements of fertiliser to any plant on the basis of the finding of agricultural chemistry that such and such

quantity of nitrogen, such and such quantity of potash, phosphorous and so on is required for crops. On the pasis of that, we determine the quantity of fertiliser required for crops. From this view point, knowledge of agricultural chemistry is very essential. Similarly about soil chemistry. Our soils are very deficient and the deficiency has to be found out.

6-30 P. M.

Mr. SPEAKER.—According to the definition 'agriculture' means the basic and applied sciences of soil and water management, crop production including production of all garden crops, animal husbandry, including dairying, and veterinary science, fisheries, farm forestry, home economics, etc. There is a clear provision.

Sri B. R. SUNTHANKAR.—In the definition, so many things are given-animal husbandry, dairying and veterinary science, fisheries, farm forestry, home economics, agricultural engineering and technology, marketing, processing, etc., Except agricultural chemistry ; similarly about plant pathology, entomology, etc. As I have already said, knowledge of these branches is very essential because pests and diseases cause enormous damage to the crops, the damage may amount of 20 per cent of our production. To prevent and check this damage, knowledge of sciences is quite essential. I may again point out that in 1900 the Government of India appointed the first Mycologist. Mycology is plant pathology. Plant pathology deals with plant diseases, pathological diseases of plant—pest of areca-nut and so many prastitic plants and parastitic diseases. Plant pathology covers a wide application. So it should be included in the definition. Similarly, Entomolgy which is a science dealing with pests like grasshoppers, locusts and other insects. In this branch of science we know the life and conditions of these creatures and find out the effective ways of preventing damage and destroying these pests. This branch of knowledge, Entomology, is very essential and should be included. Similarly, home economics; it is something like household economics. It is aping from the terminology used in America.

Mr. SPEAKER.—It has served well there. It is not aping.

Sri B. R. SUNTHANKAR.—In Land Grant Colleges, they appoint home demonstration agents. They conduct research and carry research and all these improved methods to the homes of the cultivators. In that particular context it is called home economics. I do not understand why we should not adopt a more comprehensive term 'agricultural economics'. 'Agricultural economics' has got a wider application, wider connotation. It includes marketing, cost of cultivation. Cost of cultivation is very important. The budget of the peasant or the cultivator is normally a deficit budget. His labour is never taken into consideration; his labour costs nothing. It should be included in the cost of cultivation. Instead of limiting it to home science, the term

(SRI B. R. SUNTHANKAR)

'agricultural economics' should be adopted and it should replace the term here. So I hope that the Honourable Minister will accept my amendments.

Sri G. NARAYANA GOWDA.—The term 'home economics' cannot be deleted for the simple reason that this is one of the most important branches for the development of agriculture. Without improving the home, the farmer's economy cannot be built up. Probably, the Hon'ble Member has understood home economics in a different aspect and thought it as agricultural economics. But it is not so. A home economics agent is actually called the home maker and is responsible for several activities of a housewife and building a proper home. Therefore, this amendment cannot be accepted.

There is no need to include the term 'agricultural chemistry; plant pathology, etc., as indicated by the Hon'ble Member in his amendment, because these and other branches are also indicated in the comprehensive term 'basic and applied sciences of soil and water management, crop production including production of all garden crops. Hence, this cannot be accepted.

Mr. SPEAKER.—Is the Hon'ble Member pressing.—

Sri B. R. SUNTHANKAR.—Yes, Sir.

Mr. SPEAKER.—The question is :—

"That in line 4 of item (2) the words 'home economics' shall be deleted."

The amendment was negatived.

Mr. SPEAKER.—The question is :

"That in line 5 of item (2), the following words shall be added between the words 'Technology' and 'marketing'

"Agricultural Chemistry, Plant pathology, Entomology, agricultural economics including"

The motion was negatived.

Mr. SPEAKER.—I now put clause 2 to the vote of the House. The question is :

"That clause 2 stand part of the Bill."

The motion was adopted.

Clause 2 was added to the Bill.

Mr. SPEAKER.—Clause 3. There are no amendments. The question is :

"That Clause 3 stand part of the Bill."

The motion was adopted.

Clause 3 was added to the Bill.

Mr. SPEAKER.—Clause 4. There are two amendments more or less similar. They may be moved:

Sri B. R. SUNTHANKAR.—I beg to move:

"That in item (a) for the words "home economics" the words "agricultural economics, plant pathology, entomology, agricultural chemistry, farm management" shall be substituted."

"The following item shall be added after (c); (d) improving methods of farm technique and item (d) shall be relettered as (e)."

Mr. SPEAKER.—Amendment moved:

"That in item (a) for the words 'house economics the words "agricultural economics, plant pathology, entomology, agriculture chemistry, farm management" shall be substituted."

"That the following item shall be added after (*c*)

(*d*) improving methods of farm technique etc. item (d) shall be relettered as (e)."

†Sri B. R. SUNTHANKAR.—About the objectives of the University, I wish to make these objects more comprehensive and more specific. That is why I have moved these two amendments that it may include agricultural chemistry, plant pathology and entomology. I want one more subject to be introduced in the objectives—farm management. Farm Management is a very important subject and it should be included in the objectives of the University.

Similarly about my second amendment, Sir.

Mr. SPEAKER.—In clause 4 sub-clause (*a*), any other allied sciences are there. If you think that it is necessary, you can ask the Government to make it clear in the rules.

Sri B. R. SUNTHANKAR.—Allied sciences means something like, etc. It becomes a minor subject. I want these sciences to get an important place. That is why I am moving the amendment.

However, I wish to add one more object to be the objective of the university. That is about improved methods of farm technique. Nowhere in the objectives it is clear that farm technique would be improved. It is not even employed in the objectives either. So, I want to make it clear in these objectives that farm technique is included. Improved farm technique in agriculture is very important and very essential. I want to make it very explicit.

Mr. SPEAKER.—Don't you think it is already included in this?

Sri B. R. SUNTHANKAR.—To me, farm techniques should be the primary objective and so I press that it should be included and I hope the Hon'ble Minister will accept the amendment.

Sri G. NARAYANA GOWDA.—Regarding the first amendment, I have already had my say Sir. Regarding the second amendment, I have

(Sri G. NARAYANA GOWDA)

to say that improved methods of farm technique is covered in the first three objects in the same clause. Hence it will not be necessary to add the suggested the amendment Sir.

Mr. SPEAKER.—Now I put it to vote: The question is:

"That in item (a) for the words "home economics", the words "agricultural economics, plant pathology, entomology, agricultural chemistry, farm management" shall be substituted."

The amendment was negatived.

Mr. SPEAKER.—The question is:

"That the following item shall be added after (c).

"(d) improving methods of farm technique and item (d) shall be relettered as (e)."

The amendment was negatived.

Mr. SPEAKER.—I will put clause 4 to the vote. The question is:

"That clause 4 stand part of the Bill."

The motion was adopted.

Clause 4 was added to the Bill.

Mr. SPEAKER.—The question is:

"That clause 5 stand part of the Bill."

The motion was adopted.

Clause 5 was added to the Bill.

Mr. SPEAKER.—Clause 6. There is an amendment.

Sri B. R. SUNTHANKAR.—Sir, I beg to move:

"That in item (1) for the words "home economics" the words "Agricultural economics, agricultural chemistry, plant pathology, entomology" shall be substituted."

"The following item shall be added at the end:

"(17) to publish literature dealing with agricultural education, research and extension work."

Mr. SPEAKER.—Amendment moved:

"That in item (1) for the words "home economics" the words "agricultural economics, agricultural chemistry, plant pathology, entomology" shall be substituted.

"The following item shall be added at the end :

"(17) to publish literature dealing with agricultural education, research and extension work".

†Sri B. R. SUNTHANKAR.—About my second amendment, no-where in the powers of the University is said about the publication of the literature, regarding agricultural experiments and research work and extension work. So I want this to be specifically added,—to publish literature dealing with agricultural education research and extention work. It is a very important work. It is very simple and important. I hope the Hon'ble Minister will be good enough to accept it.

Sri G. NARAYANA GOWDA.—Sir, as it is covered under item (2) it is not necessary.

Mr. SPEAKER.—The question is :

"That in item (1) for the words "home economics" the words "agricultural economics, agricultural chemistry, plant pathology, entomology" shall be substituted."

The motion was negatived.

Mr. SPEAKER.—The question is :

"That the following item shall be added at the end :

"(17) to publish literature dealing with agricultural education, research and extention work".

The amendment was negatived.

Mr. SPEAKER.—The question is :

That clause 6 stands part of the Bill.

The motion was adopted.

Clause 6 was added to the Bill.

Mr. SPEAKER.—I will put clauses 7 to 11. The question is :

"That clauses 7 to 11, both inclusive, stand part of the Bill"

The motion was adopted.

Clauses 7 to 11, both inclusive, were added to the Bill.

Mr. SPEAKER.—Clause 12. Amendment.

Sri B. R. SUNTHANKAR.—Sir, I beg to move :

"That in line 2 of sub-clause (4) for the words "three years", the words, "five years" shall be substituted."

Mr. SPEAKER.—Amendment moved :

"That in line 2 of sub-clause (4) for the words "three years", the words, "five years" shall be substituted."

† **Sri B. R. SUNTHANKAR.**—Sir, according to the present clause the tenure of office of the Vice-Chancellor is three years. By this amendment, I seek to extend it to five years. Three years is a very short period. In foreign countries like America, the Vice-Chancellor is a life long officer. The Radhakrishna Commission has recommended that the tenure of office of the Vice-Chancellor should be six years. The Vice-Chancellors' Conference has also said that it should be 5 to 6 years. This will enable him to work more efficiently.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಈ ತಿದ್ದುಪಡಿಯನ್ನು ಸಪೋರ್ಟ್ ಮಾಡುತ್ತೇನೆ. ಈಗ ತಾನೆ ಇನ್ನು ನಾವು ಈ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುತ್ತಿದ್ದೇವೆ. ಇದೊಂದು ಹೊಸ ವಿದ್ಯಾಪೀಠ. ಇನ್ನೂ 2-2½ ವರ್ಷಗಳತನಕ ಇದರ ಕನ್ಸ್ಟ್ರಕ್ಷನ್ ಇತ್ಯಾದಿ ಕೆಲಸಗಳೇ ನಡೆಯುತ್ತಿರುತ್ತದೆ. ಯಾವ ಲ್ಯಾಬೊರೇಟ್ರಿ ಯಾವ ಮಾಲೇಲಿದೆ, ಯಾವ್ಯಾವ ಮಾಲೇಲಿ ಏನೇನಿದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೇ 2-3 ವರ್ಷಗಳಾದರೂ ಸಾಲದು. ಆದ್ದರಿಂದ ಈಗ ಈ ಅವಧಿಯನ್ನು 5 ವರ್ಷಗಳಿಗೆ ಏರಿಸತಕ್ಕದ್ದು ಯುಕ್ತವಾಗಿ ಕಾಣುತ್ತದೆ ಎಂತ ಹೇಳುತ್ತೇನೆ. ಈ ದಿವಸ ಎಲೆಕ್ಷನ್ ಬರತಕ್ಕ ಈ ಪ್ರತಿಯೊಂದು ಸ್ಥಾನಕ್ಕೂ 5 ವರ್ಷಗಳ ಕಾಲಾವಕಾಶವಿರ ಬೇಕೆಂದು ಏತಕ್ಕೆ ಹೇಳುತ್ತಾರೆ? 5 ವರ್ಷಗಳಿಗೆ ಮುಂಚೆ ಈ ಸ್ಕೀಮನ್ನು ಇಂಪ್ಲಿಮೆಂಟ್ ಮಾಡುವುದಕ್ಕಾಗುವುದಿಲ್ಲ. ಹಾಗೇನಾದರೂ ಇದರಿಂದ ತೊಂದರೆ ಇದೆಯೆಂದು ಕಂಡು ಬಂದರೆ ಮುಂದೆ ಸರ್ಕಾರದವರು ಒಂದು ಅಮೆಂಡ್‌ಮೆಂಟನ್ನು ತಂದು ಇದನ್ನು ಸರಿಪಡಿಸಬಹುದು. ಆದ್ದರಿಂದ ಈಗ ಸರ್ಕಾರದವರು ಈ ತಿದ್ದುಪಡಿಯನ್ನು ದೊಡ್ಡ ಮನಸ್ಸು ಮಾಡಿ ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಜಿ. ನಾರಾಯಣ ಗೌಡ.—ಬಹಳ ಆಲೋಚನೆ ಮಾಡಿ ಮೂರುವರ್ಷಗಳಿದ್ದರೆ ಸಾಕೆಂತ ತೀರ್ಮಾನ ಮಾಡಿ ಸೇರಿಸಿದ್ದೇವೆ. ಈ ತಿದ್ದುಪಡಿಯನ್ನು ಒಪ್ಪಲು ಸಾಧ್ಯವಿಲ್ಲ.

Mr. SPEAKER.—I will put the amendment No. 14. The question is :

"That in line 2 of sub-clause (4) for the words "three years" the words "five years" shall be substituted."

The amendment was negatived.

Mr. SPEAKER.—The question is :

"That clause 12 stand part of the Bill"

The motion was adopted.

Clause 12 was added to the Bill.

Mr. SPEAKER.—Clause 13.

Sri B. R. SUNTHANKAR.—Sir, I beg to move.

"That sub-clauses (6), (7) and (8) shall be deleted."

Mr. SPEAKER.—Amendment moved.

"That sub-clauses (6), (7) and (8) shall be deleted".

Sri B. R. SUNTHANKAR.—Sir, these sub-clauses should be deleted because they give unnecessary wide powers into the hands of the Vice-

Chancellor. We know that the office of the Vice-Chancellor should not have autocratic powers. We have the experience of some of the Vice-Chancellors which I need not mention here. Some of them behave like distators in the affairs of the University.

Sri K. S. SURYANARAYANA RAO (Mysore).—You want to take away the autonomy ?

Sri B. R. SUNTHANKAR.—Autonomy is to the University and not to the Vice-Chancellor. Under the pretext of emergency, he should not be given extraordinay powers.

Mr. SPEAKER.—With whom should the power vest ?

Sri B. R. SUNTHANKAR.—Sir, the Chancellor is there.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಸರ್ಕಾರದವರು ಮಾತೆತ್ತಿದ್ದರೆ ಡೀಸೆಂಟ್ರಲೈಸೇಷನ್ ಆಫ್ ಪವರ್ಸ್ ಎಂತ ಏನು ಹೇಳುತ್ತಿದ್ದಾರೆ ಅದಕ್ಕೆ ಅರ್ಥವೇನು ಎಂಬುದೇ ತಿಳಿಯುವುದಿಲ್ಲ. ಈ ದಿವಸ ಈ ಒಬ್ಬರಿಗೆ ಏಕೆ ಇಷ್ಟು ಅಧಿಕಾರ ಕೊಡಬೇಕು ? ಒಂದು ವೇಳೆ ಈ ದಿವಸ ಅವರು.

"In view of the facts before me and the information that I have, I suspend you" ಅಂತ ಹೇಳಿಬಿಟ್ಟರೆ ಆಗ ಇದು ಪುನಃ ಬೋರ್ಡಿನವರ ಮುಂದೆ ಹೋಗಬೇಕು. ಅಲ್ಲಿ ತೀರ್ಮಾನವಾಗಲು ಎಷ್ಟು ದಿನಗಳು ಬೇಕೋ ಗೊತ್ತಾಗುವುದಿಲ್ಲ. ಆದರೆ ಈ ಮಧ್ಯೆ ಪಾರ್ಟಿಗೆ ತೊಂದರೆ ಎಷ್ಟಾಗುತ್ತದೆ ?

An opportunity must be given to an accused.

ಈ ದಿವಸ ಈ ನಮ್ಮ ಯೂನಿವರ್ಸಿಟಿಯಲ್ಲಿ ಆ ಮೆಡಿಕಲ್ ಕಾಲೇಜಿನಲ್ಲಿ ಏನೇನು ದುರಂತ ನಡೆಯಿತು ಎಂಬುದು ತಮಗೆಲ್ಲರಿಗೂ ತಿಳಿದಿದೆ. ಹೀಗಿರುವಾಗ ಒಬ್ಬರ ಕೈಗೆ ಇಷ್ಟು ಅಧಿಕಾರ ಕೊಡತಕ್ಕದ್ದು ಸರಿಯಲ್ಲ......

Mr. SPEAKER.—Action taken in any emergency.

Sri C. J. MUCKANNAPPA.—Sir, in the name of emergency many things will be done. Unless there is *prima facie*, the officer is not compelled to take any action. Here, whether is *prima facie* or not, if the Vice-Chancellor wants, he will straightaway keep him under suspension. What should happen to that officer, Sir ?

ಸರ್ಕಾರ ಇಷ್ಟು wide powers ಕೊಟ್ಟುಬಿಟ್ಟರೆ ಬಹಳ ಕಷ್ಟ. ಇದರಿಂದ ಸರ್ವಾಧಿಕಾರಕ್ಕೆ ಎಡೆಯಾಗಬಹುದು. ಆ ರೀತಿ ಆಗಬಾರದು.

7-00 A.M.

After gaining experience you will come to know what we said to-day is correct and you will bring amendments later.

ಇವನ್ನು ಮಾನ್ಯ ಮಂತ್ರಿಗಳು ಕೂಲಂಕಷವಾಗಿ ವಿಮರ್ಶೆಮಾಡಿ ಒಪ್ಪಿಕೊಳ್ಳಬೇಕು ಎಂದು ಹೇಳುತ್ತೇನೆ. ಬೋರ್ಡ್ ಮುಂದೆಬಂದು ಅವರು ತಿರ್ಮಾನ ತೆಗೆದುಕೊಳ್ಳಲಿ ಹೈಕೋರ್ಟ್ ಮಸೂದೆ ಈ ಸಭೆಯ ಮುಂದೆ ಬಂದಾಗ ಒಬ್ಬರೇ ನ್ಯಾಯಾಧೀಶರು ಕುಳಿತುಕೊಂಡು ಅಧಿಕಾರ ಚಲಾಯಿಸುವುದು ಒಳ್ಳೆಯದಲ್ಲವೆಂದೂ ಇಬ್ಬರು ಇರಬೇಕೆಂದೂ ಈ ಸಭೆ ತೀರ್ಮಾನ ಮಾಡಿದೆ. ಹಾಗೆಯೇ ತುರ್ತು ಪರಿಸ್ಥಿತಿಯಲ್ಲಿ ಕೂಡ ವೈಸ್ ಛಾನ್ಸಲರು ಒಬ್ಬರೇ ತೀರ್ಮಾನ ತೆಗೆದುಕೊಳ್ಳದೆ, ಯಾರಾದರು ಇಬ್ಬರು ಕುಳಿತುಕೊಂಡು ತೀರ್ಮಾನ ತೆಗೆದುಕೊಳ್ಳಲು ಅವಕಾಶವಿದ್ದರೆ ಒಪ್ಪಿಕೊಳ್ಳಬಹುದಾಗಿತ್ತೋ ಏನೋ, ಈ ತಿದ್ದುಪಡಿಯನ್ನು ಸರ್ಕಾರದವರು reject ಮಾಡುತ್ತಾರೆಂದು ಗೊತ್ತು, ಆದರೂ ಸಹ ಹೇಳಬೇಕಾದ್ದು ನಮ್ಮ ಕರ್ತವ್ಯವೆಂದು ಹೇಳುತ್ತಿದ್ದೇವೆ. ಇಂಥ ಸರ್ವಾಧಿಕಾರವನ್ನು ಕೊಡುವುದು ಸರಿಯಲ್ಲ. ನನ್ನ ಸ್ನೇಹಿತರು ಹೇಳಿದಂತೆ ಈ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕೆಂದು ಮಾನ್ಯ ಮಂತ್ರಿಗಳನ್ನು ಬಹಳ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Sri G. V. GOWDA (Palya).—Apart from the wide powers sought to be conferred on the Vice-Chancellor, certain consequences would also ensue by retention of clauses 7 and 8. If in an Emergency the Vice-Chancellor seeks to take action I do not see why it should affect any person in service.

Mr. SPEAKER.—Supposing he does something which requires immediate action.

Sri G. V. GOWDA.—Let him report the matter to the Board which is competent to take action.

Mr. SPEAKER.—The Board will have to be given notice. The Members would be away. Supposing matters cannot wait for 15 or 20 days. If it can wait for such a long period, then it is not an emergency.

Sri G. V. GOWDA.—Merely because a a person shows indiscipline, would it create an emergent situation? This would give room to the Vice-Chancellor to call any situation as emergent and take recourse to the extraordinary powers. He can report the matter to the Board or the Chancellor. Another thing, the functions of these bodies are not described and unless this is done, the Vice-Chancellor may take action as he likes.

The appeal from an aggrieved person is to the Chancellor. I do not think it is desirable to bring the Chancellor to give a decision in this matter by way of second appeal. The Chancellor should not have been made to function like a Judge. The Chancellor is responsible for the overall supervision of the University. After all, what is the Board. It is his own creation. He nominates 2 Members in it, there are Secretaries to Government and Government nominates some. Such being the case can the Chancellor be expected to over-rule a decision of the Board? The best thing would be to have allowed the person concerned to take recourse to the Courts. The Chancellor happens to be the Governor of the State. After all he takes the advice of the Ministers or the Board. Such being the case he will not ordinarily go against the decision of the Board. Therefore clause 8 should be deleted.

Sri G. NARAYANA GOWDA.—Deletion of this clause will handicap the Vice Chancellor in functioning effectively. I cannot accept the amendment.

Mr. SPEAKER.—The question is:

"that sub-clauses (6), (7) and (8) shall be deleted."

The amendment was negatived.

Mr. SPEAKER.—The question is:

"That clause 13 stand part of the Bill."

The motion was adopted.

Clause 13 was added to the Bill.

Mr. SPEAKER.—The question is:

"That Clauses 14 to 19 both inclusive stand part of the Bill."

The motion was adopted.

Clauses 14 to 19 both inclusive were added to the Bill.

Sri B R. SUNTHANKAR.—I beg to move:

"That the following sub-clause shall be added after sub-clause (2).

Mr. SPEAKER.—Amendment moved:

"(3) The Director of Extensions shall be assisted by a Board of Extentsion. The constitution and powers of the Board of Extension shall be prescribed by the statutes."

Mr. SPEAKER.—Amendment moved:

"(3) The Director of Extensions shall be assisted by a Board of Extension. The constitution and powers of the Board of Extension shall be prescribed by the statutes."

Sri C. J. MUCKANNAPPA.—Sir, it is already more than 7o' clock. It is my earnest appeal to you to close now. These are consequential amendments and we can finish with half-an-hour to-morrow.

Sri B. R. SUNTHANKAR.—It may be taken to-morrow. It will take some time.

Sri V. S. PATIL.—We feel it is no use taxing you too much.

Mr. SPEAKER.—I am as fresh as anything. Allright, On the understanding that it will be finished early tomorrow, the House will now adjourn and meet at 8-30 A.M. to-morrow.

The House adjourned at Ten Minutes past Seven of the Clock to meet again at Thirty Minutes past Eight of the Clock on Saturday, the 6*th April* 1963.

WD 450—GPB—900—20-9-63.